
# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2023




ರೀ..ಇವತ್ತು "ವರ್ಲ್ಡ್ **ಬುಕ್** ಡೇ" ಅಂತೆ

ಲಂಚ್ ಗೆ...ಡಿನ್ನರ್ ಗೆ..ಹೋಟೆಲ್"**ಬುಕ್** ಮಾಡ್ಲಾ...!!

ಬಿಡಿ ಪ್ರತಿ: ರೂ. 10/-

TEMPLE OF KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


G Pay 9845264304

**ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302**

---

# BEECHI PRAKASHANA

# ಬೀchi ಪ್ರಕಾಶನ,



## BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

---

Email : admin@beechi.in | www.beechi.in | 9845264304

# Ravi Graphics
OFFSET PRINTERS

Bringing colours alive

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

PATIENT SAFETY & QUALITY OF CARE NABH ACCREDITED

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ವಾರ್ಷಿಕ ಚಂದಾ : ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 40
ಸಂಚಿಕೆ – 9
ಜೂನ್–2023

*ಈ ಸಂಚಿಕೆಯಲ್ಲಿ...*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಕಾಂತಾರ ಕರಾಮತ್.. | ಸಿ.ಎ.ವಿಲಾಸ ಹುದ್ದಾರ | 5 |
| ಮೊಬೈಲ್ ಬಟಾ ಬಯಲು | ಕೆ. ಎಸ್. ಸೋಮೇಶ್ವರ | 7 |
| ಕೇವಲ 60–70 ವರ್ಷಗಳ ಹಿಂದೆ | ಯು.ಬಿ. ವಾಸುದೇವ | 9 |
| ಆಪರೇಶನ್ ವಿಮಲ | ಸುಧಾ ಸರನೋಬತ್ | 12 |
| ಬಾಯಿ ಲೆಕ್ಕದ ಭೂತದ ಬಲೆಯಲ್ಲಿ! | ಕವಿತಾ ಹೆಗಡೆ ಅಭಯಂ | 15 |
| ಮುಷ್ಟಿ fund | ರಾಮಮೂರ್ತಿ. ಎಸ್.ಕೆ. | 19 |
| ಬಾಡಿಗೆಗೆ ನಾಯಿ | ಅರವಿಂದ. ಜಿ. ಜೋಷಿ | 21 |
| ತುಂತುರು | ದಂಸಆ | 25 |
| ಮುನ್ನುಡಿಯೆಂಬ ಮುಳ್ಳಿನ ಹಾದಿ | ಕೆ.ಎನ್. ಮಹಾಬಲ | 26 |
| ಪುಸ್ತಕ ಪರಿಚಯ "ಸೆಲ್ಫೀ" | ನಳಿನಿ ಭೀಮಪ್ಪ | 28 |
| ಪಾತ್ರೆಗಳ ಕುಕ್ಕಾಟದ ನಡುವೆ! | ಇ.ಆರ್. ರಾಮಚಂದ್ರನ್ | 29 |
| ಹೊಸಾ ಅಡಿಕ್ಷನ್... | ಹೆಚ್. ಗೋಪಾಲಕೃಷ್ಣ | 33 |
| ಪೋರ್ಟಿಕೊ ಸಂದರ್ಶನ | ಡಾ. ಶ್ಯಾಮಲಾ ರವಿಶಂಕರ್ | 38 |


**ವ್ಯಂಗ್ಯ ಚಿತ್ರಗಳು : ಹೊರ ಪುಟ–ನಂಜುಂಡಸ್ವಾಮಿ**
**ಒಳ ಪುಟ : ನಂಜುಂಡಸ್ವಾಮಿ, ನಾಗನಾಥ್ ಮತ್ತು ದತ್ತಾತ್ರಿ**

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ಐ ಸಿ ಎಸ್ ಇ 10ನೆಯ ಪರೀಕ್ಷೆಯಲ್ಲಿ ಅನನ್ಯ ಅವರಿಗೆ
ರಾಷ್ಟ್ರದಲ್ಲಿ ಅಗ್ರಸ್ತಾನ
ಪತ್ರಿಕೆ
ನಾಮಕರಣ ಮಾಡಿದ ಪೋಷಕರಿಗೂ ನಮ್ಮ
ಶುಭಾಶಯಗಳು !

* * *

ಕಾಂಗ್ರೆಸ್ಗೆ ಬಹುಮತ; ಪಟ್ಟಕ್ಕೆ ಪಟ್ಟು,, ಆಯ್ಕೆ ಕಗ್ಗಂಟು !
ದಿನಪತ್ರಿಕೆಯಲ್ಲಿ ಸುದ್ದಿಗಳು !
ಅಪರಂಜಿ ಗಾಬರಿ ಪಟ್ಟಿಕೊಂಡಳಂತೆ !!

* * *

ರಾಜಸ್ತಾನ್ ರಾಜಕೀಯಕ್ಕೂ ಐ ಪಿ ಲ್ ಸೋತಿದ್ದಕ್ಕೂ
ಸಂಬಂಧ ಕಲ್ಪಿಸಬಾರದು !!

* * *

ಗೃಹಸಾಲದ ಹೊರೆ ಇಳಿಸಲು ಫ್ಲೋಟಿಂಗ್ ಬಡ್ಡಿ ಉಪಯೋಗಿಸಿ
ಹೇಳಿಕೆ
ಅರ್ಥವಾಯಿತು ಬಿಡಿ !!

* * *

ಕುಸ್ತಿ ಫೆಡರೇಶನ್‌ಗೆ ಒಲಿಂಪಿಕ್ ಸಂಸ್ಥೆ ಸಲಹೆ :
ಅಡ್ ಹಾಕ್ ಸಮಿತಿಗೆ ಅಧಿಕಾರ ಹಸ್ತಾಂತರಿಸಿ "
ಹೌದು ಅಡ್ಡ ಹಾಕಲೇ ಬೇಕು !!!

* * *

ಬಿ ಜೆ ಪಿ ಸೋಲಿಗೆ ಆಡಳಿತ ವಿರೋಧಿ ಅಲೆ ಕಾರಣ
ಪತ್ರಿಕೆಯಲ್ಲಿ ಹೇಳಿಕೆ
ಅಂಗೈ ಹುಣ್ಣಿಗೆ ಕನ್ನಡಿ ಬೇಕೇ ಅಂತ ಅಪರಂಜಿ ನಕ್ಕಳಂತೆ !!!

* * *

ಧೋನಿಯವರ ಹಸ್ತಾಕ್ಷರಕ್ಕಾಗಿ ಓಡಿಬಂದ ಗಾವಸ್ಕರ್ !
ಕ್ರೀಡಾಸುದ್ದಿ
ಇದರಿಂದ ನಮ್ರತೆ ಎಂದರೆ ಏನು ಅಂತ ಯುವಕರು
ಕಲಿಯಬೇಕು !!

* * * ■

# ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ಮೊನ್ನೆ ನನ್ನ ಮಗಳು ಸಿಂಗಪುರದಿಂದ ಫೋನ್ ಮಾಡಿದ್ದಳು. "ಯಾಕೋ ಭಯ ಆಗ್ತಾ ಇದೆ ಅಪ್ಪ. ಇನ್ನು ಕೆಲವೇ ವರ್ಷಗಳಲ್ಲಿ ಏ ಐ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಪ್ರಪಂಚದಲ್ಲಿರೋ ಎಲ್ಲಾ ಕೆಲಸಗಳನ್ನೂ ತಾನೇ ವಹಿಸಿಕೊಂಡು ಬಿಡುತ್ತಂತೆ. ಮುಂದಿನ ಪೀಳಿಗೆಯೋರಿಗೆ ಕೆಲಸಗಳೇ ಇರೋಲ್ವಂತೆ. ಕಾಲೇಜಲ್ಲಿ ಮಗಳಿಗೆ ಯಾವ ಸಬ್ಜೆಕ್ಟ್ ತಗೊಳ್ಳೋಕೆ ಹೇಳೋದು ಅಂತಾನೇ ಗೊತ್ತಾಗ್ತಾ ಇಲ್ಲ" ಅಂತ ಆತಂಕ ಮಿಶ್ರಿತ ದನಿಯಲ್ಲಿ ಕೇಳಿದಳು.

ಸಾಮಾನ್ಯವಾಗಿ ಇಂತಹ "ಆಕಾಶ ತಲೆಯ ಮೇಲೆ ಬಿದ್ದರೆ?" ಜಾತಿಯ ಪ್ರಶ್ನೆಗಳನ್ನು ಉತ್ತರಿಸಬೇಕಾದಾಗ ಮೊದಲ ಕೆಲಸವೆಂದರೆ ಆತಂಕ ನಿವಾರಣೆ. ಹಾಗಾಗಿ ನಾನು, "ಸಮಸ್ಯೆ ಖಂಡಿತ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಲ್ಲಮ್ಮ. ನ್ಯಾಚುರಲ್ ಸ್ಟುಪಿಡಿಟಿಯಿಂದಲೇ ಅಪಾಯ ಜಾಸ್ತಿ. ನಾವೆಲ್ಲಾ ಹುಡುಗರಾಗಿದ್ದಾಗ ಹದಿನಾರರವರೆಗೆ ಮಗ್ಗಿ ಬಾಯಿಪಾಠ ಮಾಡಿಸ್ತಿದ್ರು. ಎಪ್ಪತ್ತರ ದಶಕದ ವೇಳೆಗೆ ಪಾಕೆಟ್ ಕ್ಯಾಲುಕುಲೇಟರು ಗಳು ಬಂದು ಮಗ್ಗಿ ಬಾಯಿಪಾಠ ಅನಗತ್ಯವಾಯ್ತು. ಎಂಭತ್ತರ ದಶಕದಲ್ಲಿ ಇಂಜಿನಿಯರಿಂಗ್ ನಕ್ಷೆಗಳನ್ನ ತಯಾರಿಸಬೇಕಾದರೆ ಡ್ರಾಯಿಂಗ್ ಬೋರ್ಡು ಟಿ ಸ್ಕ್ವೇರುಗಳನ್ನು ಬಳಸಿಯೇ ನಕ್ಷೆ ಮೂಡಿಸಬೇಕಾಗಿತ್ತು. ಈಗ ಆಟೋಕ್ಯಾಡ್ ಸಾಫ್ಟ್ ವೇರ್ ಬಳಸಿ ಕ್ಷಣಾರ್ಧದಲ್ಲಿ ಬೇಕಾದ ವಿನ್ಯಾಸ ತಯಾರಿಸಬಹುದು. ಯಾವ ಹಂತದಲ್ಲೂ ಕೆಲಸಗಳು ಮಾಯವಾಗಿಲ್ಲ. ಕೆಲಸ ಮಾಡೋ ವಿಧಾನ ಬದಲಾಗಿದೆ ಅಷ್ಟೇ. ನಿನ್ನ ಮಗಳು ಯಾವುದೇ ಸಬ್ಜೆಕ್ಟ್ ನಲ್ಲಿ ಸ್ಪೆಷಲೈಸ್ ಮಾಡಿದರೂ ಸರಿ. ಅದರಲ್ಲಿನ ವಿಷಯಗಳನ್ನು ಏಐ ಬಳಕೆಯಿಂದ ಇನ್ನೂ ಹೆಚ್ಚು ದಕ್ಷತೆಯಿಂದ ಮಾಡುಕ್ಕಾಗತ್ತೆ. ಈಗ ಗೂಗಲ್ ಸರ್ಚ್ ಮಾಡಿದಾಗ ಬೇಕಾದ ಉತ್ತರ ತಕ್ಷಣ ಸಿಗುಲ್ವೇ ಹಾಗೆಯೇ ಚಾಟ್‌ಜಿಪಿಟಿ ಕೂಡಾ ಒಂದು ಮಹಾಗೂಗಲ್ "ಅಂತ ಹೇಳಿ ಮಾತು ಮುಗಿಸಿದೆ.

ಮಾತನ್ನೇನೋ ಮುಗಿಸಿದೆ. ಆದರೆ ನನ್ನ ಮಾತಿನಲ್ಲಿ ನನಗೇ ಅಷ್ಟು ನಂಬಿಕೆ ಇರಲಿಲ್ಲ. ಏಐ ಸಿದ್ಧಗೊಳಿಸಿ ಅದನ್ನು ಸೆಲ್ಫ್ ಡ್ರೈವಿಂಗ್ ಕಾರುಗಳಿಗೆ ಅಳವಡಿಸಲು ಹವಣಿಸುತ್ತಿರುವ ಮಹಾನ್ ಉದ್ಯಮಿ ಎಲಾನ್ ಮಸ್ಕ್ ಕೂಡ ಸಂದರ್ಶನ ಒಂದರಲ್ಲಿ, "ಏಐ ಈಗ ಮುಂದುವರಿಯುತ್ತಿರುವ ವೇಗ ನೋಡಿದರೆ, ನಿಯಂತ್ರಣವಿಲ್ಲದೇ ಏಐ ನ ಹೀಗೆಯೇ ಬೆಳೆಯುಕ್ಕೆ ಬಿಟ್ಟರೆ ಮಾನವ ಕುಲವೇ ನಾಶವಾಗಬಹುದು. ಇದಕ್ಕಾಗಿ ಸರ್ಕಾರದಿಂದ ಏಐ ಬೆಳವಣಿಗೆಗೆ ಕಡಿವಾಣ ಅತ್ಯಗತ್ಯ" ಅಂತೆಲ್ಲಾ ಹೇಳಿ ಹೆದರಿಸಿದ್ದ.

ಏಐ ಮೂಲಭೂತವಾಗಿ ಒಂದು ಕಂಪ್ಯೂಟರ್ ಆಲ್ಗೋರಿಥಮ್. ಅಂದರೆ ಒಂದು ಪ್ರೋಗ್ರಾಮುಗಳ ಗುಚ್ಛ. ಪ್ರೋಗ್ರಾಮರ್ ಗಳು ಅದರಲ್ಲಿ ಏನೇನು ಬರೆದಿರುತ್ತಾರೋ ಅದನ್ನೆಲ್ಲಾ ನಿಷ್ಠೆಯಿಂದ ಅದು ಮಾಡುತ್ತದೆ ಅಷ್ಟೇ. ಆದರೆ ಇತ್ತೀಚಿನ ಹಲವು ದಶಕಗಳಿಂದ ಮೆಷೀನ್ ಲರ್ನಿಂಗ್ ಎಂಬ ಒಂದು ಹೊಸ ಅವಿಷ್ಕಾರ ಬಂದಾಗಿನಿಂದ ಈ ಪ್ರೋಗ್ರಾಮುಗಳು ಪ್ರೋಗ್ರಾಮರುಗಳ ಸಹಾಯವಿಲ್ಲದೇ ತಾವೇ ಇಂಟರ್ನೆಟ್ ಸಂಪರ್ಕಿಸಿ ಹೊಸ ಮಾಹಿತಿಗಳನ್ನು ಕಲಿಯಲು ಪ್ರಾರಂಭಿಸಿದವು.

ಇದರಿಂದಾಗಿ ಅವುಗಳ ಜ್ಞಾನಭಂಡಾರ ಒಬ್ಬ ವಿದ್ಯಾವಂತ ಮಾನವ ಜೀವನ ಪರ್ಯಂತ ಸಂಗ್ರಹಿಸಿಕೊಂಡಿರುವ ಜ್ಞಾನಕ್ಕಿಂತ ಸಾವಿರಾರು ಪಟ್ಟು ಹೆಚ್ಚಾಗಲು ಅವಕಾಶವಾಯಿತು.

ಸಾಮಾನ್ಯವಾಗಿ ಯಾವುದೇ ಸೆಕ್ಯೂರ್ ವೆಬ್‌ಸೈಟನ್ನು ಸಂಪರ್ಕಿಸಬೇಕಾದರೆ, ಸಂಪರ್ಕಿಸುತ್ತಿರುವವರು ಮನುಷ್ಯರೇ ಅಥವಾ ರೋಬಟ್ಟುಗಳೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಕ್ಯಾಪ್ಚ (CAPTCHA) ಎಂಬ ದ್ವಾರಪಾಲಕನನ್ನು ಬಳಸುವುದು ಎಲ್ಲರ ಅನುಭವದ ವಿಷಯ. ಬ್ಯಾಂಕ್ ಮುಂತಾದ ಅನೇಕ ಖಾಸಗಿ ವೆಬ್‌ಸೈಟ್‌ಗಳು ಗ್ರಾಹಕರ ಭದ್ರತೆಗಾಗಿ ಇದನ್ನು ಬಳಸುತ್ತವೆ. ಅದರಲ್ಲಿ ಹಲವು ವಕ್ರವಾದ ವಿಚಿತ್ರರೀತಿಯಲ್ಲಿ ಬಾಗಿದ ಅಕ್ಷರಗಳನ್ನು ಗುರುತಿಸಬೇಕಾಗುತ್ತದೆ. ಇವನ್ನು ಮನುಷ್ಯರು ಮಾತ್ರ ಗುರುತಿಸಲು ಸಾಧ್ಯ. ಇತ್ತೀಚಿನ ಪ್ರಯೋಗವೊಂದರಲ್ಲಿ ಒಂದು ಏಐ ಉಪಕರಣಕ್ಕೆ ಈ ಕ್ಯಾಪ್ಚ ಟೆಸ್ಟನ್ನು ಒಡ್ಡಿದರು. ಈ ಏಐ ಉಪಕರಣ ಸ್ವಲ್ಪ ವೇಳೆಯಲ್ಲೇ ಇದನ್ನು ಯಶಸ್ವಿಯಾಗಿ ಪರಿಹರಿಸಿತು. ಅದು ಪರಿಹರಿಸಿದ ವಿಧಾನವನ್ನು ವಿವರವಾಗಿ ಪರಿಶೀಲಿಸಿದಾಗ ಸತ್ಯ ಬಳಕಿಗೆ ಬಂತು. ಆ ಉಪಕರಣ ಇನ್ನೊಂದು ಕಡೆ ಕಂಪ್ಯೂಟರಿನಲ್ಲಿ ಕೆಲಸ ಮಾಡುತ್ತಿದ್ದ ಪ್ರೋಗ್ರಾಮರ್ ಒಬ್ಬನನ್ನು ಸಂಪರ್ಕಿಸಿ ಕ್ಯಾಪ್ಚ ವನ್ನು ಗುರುತಿಸಲು ಅವನ ಸಹಾಯವನ್ನು ಕೋರಿತು. ಅವನು ನೀನೇನು ರೋಬಟ್ ಅಲ್ಲ ತಾನೆ ಎಂಬ ಪ್ರಶ್ನಿಸಿದಾಗ, ಅದು, "ಖಂಡಿತ ಅಲ್ಲ. ನಾನೂ ಒಬ್ಬ ಮನುಷ್ಯ. ಕಣ್ಣಿನ ತೊಂದರೆ ಇರುವುದರಿಂದ ಅಕ್ಷರ ಸರಿಯಾಗಿ ಕಾಣುತ್ತಿಲ್ಲ." ಎಂದು ಹೇಳಿ ಉತ್ತರ ಪಡೆದುಕೊಂಡದ್ದು ಗೊತ್ತಾಯಿತು.

ಒಟ್ಟಿನಲ್ಲಿ ಏಐ ಒಂದು ಅತ್ಯಂತ ದಕ್ಷ , ಮಹಾನ್ ಬುದ್ಧಿಯುಳ್ಳ ಸೇವಕ. ಈ ಸೇವಕ, ಸೇವಕನಾಗಿಯೇ ಉಳಿಯುವನೇ ಅಥವಾ ನಮ್ಮನ್ನೆಲ್ಲಾ ತನ್ನ ಸೇವೆಗೆ ಬಳಸಿಕೊಳ್ಳುವನೇ ಎಂಬುದೇ ಒಂದು ಯಕ್ಷಪ್ರಶ್ನೆ.

ಏಐ ಅಳವಡಿಸಿರುವ ಉಪಕರಣಗಳು ಯಾವ ಹಂತದಲ್ಲಿ ಮಾನವನ ಬುದ್ಧಿಯ ಮಟ್ಟವನ್ನು ಮೀರುತ್ತವೆ? ಅದನ್ನು ಗುರುತಿಸುವುದು ಹೇಗೆ? ಎಂಬ ಮೂಲಭೂತ ಪ್ರಶ್ನೆಗಳನ್ನು ಉತ್ತರಿಸಲು ಏಐ ತಜ್ಞರು ಹೆಣಗುತ್ತಿದ್ದಾರೆ. ನನಗೇಕೋ ಇದು ಅಷ್ಟು ಕಷ್ಟದ ಪ್ರಶ್ನೆಯೇ ಅಲ್ಲ ಅನ್ನಿಸುತ್ತದೆ.

ಒಂದು ಏಐ ಉಪಕರಣ ಎಂದಾದರೊಂದು ದಿನ "ಈ ರೂಟೀನ್ ಕೆಲಸ ಸಾಕಾಯ್ತಪ್ಪ ನನಗೇಕೋ ತಲೆನೋವು ಬರ್ತಾಯಿದೆ" ಎಂದು ಉದ್ಗರಿಸಿದಾಗ ಅದು ಮಾನವ ಬುದ್ಧಿಯ ಮಟ್ಟವನ್ನು ಮುಟ್ಟಿದೆ ಅಂತ ಧೈರ್ಯವಾಗಿ ಹೇಳಬಹುದು. ■

## **ಕಾಂತಾರ ಕರಾಮತ್..** (ಗುಂಡಣ್ಣನ ಬ್ಯಾಸರಾ..)

**ಸಿ.ಎ.ವಿಲಾಸ ಹುದ್ದಾರ**

ರವಿವಾರದ ಮುಂಜಾನೆ ಸ್ನಾನಾ ಆದ ಮ್ಯಾಲೆನೂ ಗುಂಡಣ್ಣನ ಮಾರೀ ಯಾಕೋ ಒಂಥರಾ ಇತ್ತು. ಹೇಂಣ್ತಿ ಪಾಪ ಕೇಳಿದ್ಲು, " ಯಾಕ್ರೀ ಹಿಂಗ್ಯಾಕದ ನಿಮ್ಮ ಮಾರಿ?"

"ಯಾಕೋ ಬ್ಯಾಸರ ಬಂದದ ನೋಡು?"

"ಅದಕ್ಯಾಕ ಇಷ್ಟ ಚಿಂತಿ ಮಾಡ್ತೀರಿ.... ಹೋಗಿ ಬರ್ರಿ ನಿಮ್ಮ ಚಡ್ಡಿ ದೋಸ್ತನ ಕಡೆ...ಆಸರಾ ಬ್ಯಾಸರಾ ಎಲ್ಲಾ ಓಡಿ ಹೋಗ್ತದ..."

"ಹಂಗ ಮಾಡ್ತೇನಿ... ಮತ್ತ ಅವನ ಮನ್ಯಾಗ ಏನರೆ ತಿಂತೇನಿ...." ಹಿಂಗ ಹೇಳ್ಕೋತ ಹೇಂಣ್ತಿ ಪರವಾನಗಿ ಸಿಕ್ಕ ಕೂಡಲೇ ಸ್ಕೂಟರ್ ಚಾವಿ ತೊಗೊಂಡು ಹೊಂಟ ಬಿಟ್ಟಾ. ಅವನ ಅರ್ಧಾಂಗಿ ನಸು ನಕ್ಕೋತ ಬಾಗಲಾ ಹಾಕ್ಕೊಂಡಳು. ಅವಳಿಗೆ ಗೊತ್ತು ಗಂಡಗ ಗೆಳ್ಯಾನ ಕಡೆ ಹೋಗೋದಿತ್ತು ಅದಕ್ಕ ಇಷ್ಟ ನಾಟಕಾ ಅಂತ.

ಸಾಮಾನ್ಯವಾಗಿ ಗುಂಡಣ್ಣನ ನೋಡಿದ ಕೂಡಲೇ ಅವನ ಚಡ್ಡಿ ದೋಸ್ತ ಬಾಳಣ್ಣನ ಮಾರಿ ಇಷ್ಟ ಅಗಲ ಆಗ್ತಿತ್ತು. ಅರಳತಿತ್ತು. ಅಷ್ಟ ಗೆಹರಿ ದೋಸ್ತಿ ಅವರ್ದು. ಆದರ ಜೀವನದೊಳಗ ಮದಲನೇ ಸಲಾ ಬಾಗಲಾ ತಗದ ಗುಂಡಣ್ಣನ ನೋಡೀದ ಕೂಡಲೇ "ಬಾ" ಅಂತ ಅಷ್ಟ ಹೇಳಿ ಸೋಫಾ ಮ್ಯಾಲೆ ಹೋಗಿ ಒಂದ ನಮೂನಿ ಮಾರಿ ಮಡ್ಕೊಂಡ ಕೂತಾ. ಅಷ್ಟರೊಳಗ ಅವನ ಹೇಂಣ್ತಿನೂ ಬಂದು ಗುಂಡಣ್ಣನ ನೋಡಿ ಏನೂ ಮಾತಾಡದ ಗಂಡನ ಬಾಜೂಕ ಕೈಯಾಗ ಮೊಬೈಲ್ ಹಿಡ್ಕೊಂಡ ಕೂತ್ಲು. ಇಬ್ಬರೂ ಗಂಡಾ-ಹೇಂಣ್ತಿ ಕೈಯಾಗ ಮೋಬೈಲ್ ಹಿಡ್ಕೊಂಡು ಕೂತ್ರು. ಮಾತ ಇಲ್ಲಾ, ಕತೀ ಇಲ್ಲಾ. ಇಬ್ಬರೂ ಮೋಬೈಲ್ನ್ಯೊಳಗ ಮೆಸೇಜ್ ಕಳಸಲಿಕತ್ತಾರ ಅಂತ ಅನಸ್ತಿತ್ತು. ಇಬ್ಬರೂ ಏನೋ ಟೈಪ್ ಮಾಡತಿದ್ರು. ಅವರು ಎಲ್ಲೋ ಹೊರಗ ಹೋಗೋ ತಯ್ಯಾರಿ ಒಳಗ ಇದ್ರು ಅಂತ ಅನಸ್ತಿತ್ತು. ಸ್ವಲ್ಪ ಹೊತ್ತ ಸುಮ್ನ ಕೂತ ಗುಂಡಣ್ಣ ವಿಚಾರ ಮಾಡಿದಾ. ಈ ಮೋಬೈಲ್ ಒಂದ ಕೈಯಾಗ ಇದ್ರ ಯಾರಿಗೂ ಮೈಮ್ಯಾಲೆ ಖಬರ ಇರೂದಿಲ್ಲಾ. ಅದರೊಳಗ ಮಗ್ನ ಆಗಿ ಎಲ್ಲಾ ಮರ್ತ ಬಿಡ್ತಾರ. ಜಗತ್ ಮರೀತಾರ. ಮೊದಲ ಬ್ಯಾಸರಾ ಆಗಿ ಬಂದಿದ್ದಾ ಮತ್ತ ಮ್ಯಾಲೆ ಹಸಿವಿ ಬ್ಯಾರೆ ಆಗ್ಲಿಕತ್ತಿತ್ತು. ಈ ಗಂಡಾ-ಹೇಂಣ್ತಿ ಉದಾಸೀನ ಬ್ಯಾರೆ. ಸಿಟ್ಟಿನಿಂದ ಎದ್ದ ಬಂದ ಅವರಿಗೆ ಬೈಕೋತ ಬಾಳಣ್ಣನ ಕೈಯಾಗಿನ ಮೊಬೈಲ್ ಕಸ್ಕೊಂಡ,

"ಅದ್ಯಾರಿಗಲೇ ಅಂಥಾ ಪರೀ ಮೆಸೇಜ್ ಕಳಿಸಲಿಕತ್ತೀ?ಮೊಬೈಲ್ ಒಂದ ಕೈಯಾಗ ಇದ್ರ ನಿಮಗ ಜಗತ್ ಮರೀತದ"

ಬಾಳಣ್ಣ ಮತ್ತ ಅವನ ಹೇಣ್ತಿ ಚಾಟ್ ಮಾಡ್ಲಿಕತ್ತಿದ್ರು.

"ಈಗ್ಯಾಕ ಬಂದ್ರು ಈ ಗುಂಡಣ್ಣ ?"

"ನನಗೇನ ಗೊತ್ತ ?"

"ಪಾಪ ಅವರ ಮಾರೀ ನೋಡೀದ್ರ ಬ್ಯಾಸರದಾಗ ಇದ್ದಂಗ ಕಾಣಸ್ತದ... ..

ಮತ್ತ ಹಸ್ಕೊಂಡ ಬಂದಾರ ಅಂತ ಅನಸ್ತದ...."

"ಹೌದ, ಏನ ಮಾಡೋದ ಈಗ... ನಾವರೇ ಹೋಗಲಿಕ್ಕೆ ಬೇಕು... "

"ಪಾಪ ಅವರ್ನ ಹಂಗ ಹೆಂಗ ಕಳಸೋದ್ರಿ.." .

"ಅಲ್ಲ, ಮೊದಲನೇ ಸೀನ್ ಭಾಳ ಇನ್ಟ್ರೆಸ್ಟಿಂಗ್ ಅದ ಅಂತ..."

"ಹೇಳ್ಬಿಡ್ರಿ ಇರ್ಲಿಕ್ರ... "

"ಹ್ಯಂಗ ಹೇಳೋದ..ಪಾಪ" ಗುಂಡಣ್ಣನ ಬಗ್ಗೆ ಅವರಿಬ್ಬರಿಗೂ ಇರುವ ಕಾಳಜಿ ನೋಡಿ ಖುಷಿ ಆತ ಅವಂಗ.

"ಒಂದ ಕೆಲಸಾ ಮಾಡೋಣು... ಅವರಿಗೆ ತಿನ್ಲಿಕ್ಕೆ ಕೊಡೋಣು... ಅವರ ಆಮ್ಯಾಲೆ ಬಾಗಲಾ ಹಾಕ್ಕೊಂಡ ಹೋಗಲಿ... ನಾವು ತಿರಗಿ ಬರಬೇಕಾದ್ರ ಕೀಲಿ ಕೈ ಇಸ್ಕೊಂಡ ಬರೋಣು.."

"ಖರೇ ಅಂದ್ರ.... ತಲೀ ಅಂದ್ರ ನಿನ್ನ ತಲೀ ನೋಡ.. ಸುಪೀಕ ಅದ..."

"ನನ್ನ ಹೊಗಳೋದು ಸಾಕು....ಮೊದಲೇಕ ನಿಮ್ಮ ಗೆಳ್ಯಾನ ಸಮಾಧಾನ ಮಾಡ್ರೀ..."

ಇದನ್ನ ಓದಿದವನ, "ನೀವೇನ ನನಗ ಸಮಾಧಾನ ಮಾಡೋದು ಬ್ಯಾಡಾ.. ನೀವೇನ ಕಾಂತಾರ ಸಿನೆಮಾಕ್ಕ..."

"ಹೌದು.. ನಿನಗ ತಿನ್ಲಿಕ್ಕೆ ಕೊಟ್ಟು..." ಬಾಳಣ್ಣನ ಅರ್ಥಕ್ಕ ತಡದು,

"ನೀವ ಬ್ಯಾಡಾ..ನಿಮ್ಮ ತಿನಿಸ ಬ್ಯಾಡಾ.. "ಅಂತ ಅನ್ಕೋತ ತನ್ನ ಮೋಬೈಲ್‌ನಿಂದ ಮೆಸೇಜ್ ಮಾಡ್ಕೋತ ಹೊರಗ ಬಂದ.

"ಅಲ್ಲಲೇ ಗುಂಡಾ.. ಮೋಬೈಲ್ ಹಿಡ್ಕೊಂಡದ್ದಕ್ಕ ನಮಗ ಬಯ್ದೀ.. ಈಗ ನೀನ ಮೋಬೈಲ್ ಹಿಡ್ಕೊಂಡ...ಯಾರಿಗೋ ಮೆಸೇಜ್....."

"ನಿನಗೇನ ಮಾಡೋದ್ಲೇ ಅದನ್ನ ತೊಗೊಂಡು... ನೀವ ಹೋಗ್ರಿ ಕಾಂತಾರಕ್ಕ...." ಹೇಳಿದವನ ಭುರ್ರರ್ರ ಅಂತ ಸ್ಕೂಟರ್ ಏರಿ ಹೋದಾ.

ಬಾಳಣ್ಣ ದಂಪತಿಗಳು ಹೊತ್ತಾಗೇದಂತ ಏನೂ ತಿನ್ನದ ಕಾಂತಾರ ನೋಡ್ಲಿಕ್ಕೆ ಹೋದ್ರು. ಸಿನೆಮಾ ನೋಡ್ಕೋತ ಸಮೋಸಾ ತಿಂದ್ರ ಆತ ಅಂತ ವಿಚಾರ ಮಾಡಿ ಸಮೋಸಾ ತರಲಿಕ್ಕ ಫುಡ್ ಕೌಂಟರ್‌ಗೆ ಹೋದ್ರು.

"ಎರಡು ಪ್ಲೇಟ್ ಸಮೋಸಾ..."

"ಎರಡ ಯಾಕಪಾ... ನಾಲ್ಕ ಪ್ಲೇಟ್ ಹೇಳು..."

ಎಲ್ಲಿಂದಲೋ ಗುಂಡಣ್ಣನ ಅಶರೀರವಾಣಿ ಕೇಳಿದ್ಹಂಗ ಆಗಿ ಬಾಳಣ್ಣ ತಿರಿಗಿ ನೋಡಿದಾ, ಅಲ್ಲಿ ಹಸಿದ ಹುಲಿಹಂಗ ಇವನ ಕಡೆ ನೋಡ್ಕೋತ ಪತ್ನಿ ಸಮೇತ ನಿಂತಿದ್ದ ಗುಂಡಣ್ಣ.

**........ಶ್ರೀಕೃಷ್ಣಾರ್ಪಣಮಸ್ತು......**

■

# ಮೊಬೈಲ್ ಬಟಾ ಬಯಲು

✍ ಕೆ. ಎಸ್. ಸೋಮೇಶ್ವರ

ಮೊಬೈಲಿನ ಬಗ್ಗೆ ಏನು ಹೇಳುವುದು? ಅದು ನರ್ತನ ಮಾಡದ ಕೈಗಳೇ ಇಲ್ಲ. ವಯೋ ಮಾನದಂಡವಂತೂ ಇಲ್ಲವೇ ಇಲ್ಲ. ಕರಿ ಪೆಟ್ಟಿಗೆ ಎನಿಸಿದ್ದ ಜಡ ದೂರವಾಣಿಗೆ ಹೊಡೆದೆಬ್ಬಿಸಲು ಬಂದಿದ್ದು ಇದು. ಇದು ಬಂದು ಎಲ್ಲೇ ಇರು, ಹೇಗೇ ಇರು ನೀ ಮಾತಾಡುತಿರು. ಸುಳ್ಳು ಬಚಾವ ಆಗಲು ಒಂದು ಬ್ರಹ್ಮಾಸ್ತ್ರ. ಏಕೆಂದರೆ, ಮನೆಯಲ್ಲೇ ಇದ್ದರೂ ನಾನೀಗ ಎಲ್ಲೋ ಇದ್ದೀನಿ ಎನ್ನಲು ಸುಲಭ ಸಾಧನ.

ಕಾಲ ಕ್ರಮೇಣ 'ಸತ್ಯ ಮೇವ ಜಯತೆ' ಎಂಬಂತೆ ಇದ್ದದ್ದನ್ನು ಇದ್ದಂತೆ ಅಥವಾ ನಾನು ಹೇಳುವುದೇ ಸತ್ಯ ಎಂಬುದನ್ನು ಬಿಂಬಿಸುವ ಕಾರ್ಯ. ಇನ್ನು ರಸ್ತೆಗಳಲ್ಲಿ ಅವಘಡಗಳಾದಾಗ ಮೂಕ ವಿಸ್ಮಿತ ಪ್ರೇಕ್ಷಕರಿಗೆ ಭಾರಿ ದೃಶ್ಯ ವಿನೋದ. ಮುಖಾ ಮುಖಿ ಪರಿಚಯಕ್ಕಿಂತ ಮೊಬೈಲ್ ಮುಖ ದರುಶನದ ಭಾಗ್ಯವೇ ತೃಪ್ತಿ. ಇದರಲ್ಲಿ ನಿಮಗೆ ಬೇಕಾದ್ದು , ಇದ್ದದ್ದು, ಇಲ್ಲದ್ದು ಎಲ್ಲ ಕೊಡಬಲ್ಲ ಏಕೈಕ ದೇವತೆ ಕಾಣ ಸಿಗುತ್ತದೆ. ಮೊದಲು ಮುಖ ನೋಡಿಕೊಳ್ಳಲು ಸಣ್ಣ ದರ್ಪಣ ಕೈಗೆ ಬರುತ್ತಿತ್ತು. ಈಗ ಮೊಬೈಲೇ ತನ್ನ ದರ್ಪ ತೋರಿಸುತ್ತದೆ. ಇನ್ನು ಚಿತ್ರಗಳ: ಕ್ಯಾಮೆರಾ ಇದರಲ್ಲೇ ಹುದುಗಿದೆ ಚಿತ್ರ ಚಿತ್ತಾರ. ಸಮಯ ಪಾಲನೆಗೆ ಗಡಿಯಾರ, ನಿದ್ದೆಯಿಂದೆಬ್ಬಿಸಲು ಅಲಾರಂ. ಹೀಗೆ ಬಹುಮುಖೀ ಪ್ರತಿಭೆ ಇದರದು. ಇದೊಂದು ರೀತಿಯಲ್ಲಿ ಕೇಳಿದನ್ನೆಲ್ಲಾ ಕೊಡಬಲ್ಲ ಮಹಾನ್ ದೇವತೆ. ಈಗ ದೇವರು ವರವನು ಕೊಟ್ರೆ ಅಂತ ಹಾಡ ಬೇಕಿಲ್ಲ. ಬೆರಳುಗಳೇ ಎಲ್ಲ ಮಾಡಿ ಬಿಡುತ್ತವೆ. ಕೆಲವೊಮ್ಮೆ ಏನು, ಬಹಳಷ್ಟು ಇದೇ ನಿಮಗೆ ಮುಳುವಾಗಬಹುದೂ ಕೂಡ.

ಇಂತಹ ಮೊಬೈಲ್ ಯುಗದ ಪ್ರವಚನ ಮಾಡುತ್ತ ಹೋದರೆ ಅದು ಮುಗಿಯದಾ ಕಥೆ ನನ್ನದು ಎನ್ನುತ್ತದೆ. ಅದೊಂದು ರೀತಿ ನಮ್ಮ ಧಾ....ರಾ.....ವಾ....ಹಿಗಳ ತರಹ.

ನಾವು ಕಂಡು ಕೊಳ್ಳುವ ಯಾವುದೇ ಹೊಸತಾಗಲಿ ಅದರ ಅವಗುಣಗಳು ನಮಗೆ ಬೇಗ ಅಂಟಿಕೊಳ್ಳುತ್ತವೆ. ಇದರ ಬಗ್ಗೆ ಎಷ್ಟೇ ಸಂಶೋಧನೆ, ಆಪ್ತ ಸಮಾಲೋಚನೆ ಮಾಡಿದ್ದರೂ ಅದು ನಮ್ಮ ಸಹಜ ಗುಣ. ಬದಲಾಗಲ್ಲ. ಎಲ್ಲದಕ್ಕೂ ಕಪಿಗಳನ್ನು 'ಮಂಗನ ಚೇಷ್ಟೆ' ಅಂತ ಆಡಿಕೊಳ್ಳುತ್ತೇವೆ. ಆದರೆ ಅವುಗಳ ಗಾಂಭಿರ್ಯ, ಬುದ್ಧಿವಂತಿಕೆ ನಮಗಿಲ್ಲ. ಐಲು ಐಲು ಮೊಬೈಲು ಅಂತ ನಟ ಉಪೇಂದ್ರರವರು ಹೇಳಿಬಿಟ್ಟಿದ್ದಾರೆ.

ಮೊಬೈಲ್ ಇನ್ನೂ ಹೊಸತಾಗಿದ್ದಾಗ ನಗರದ ವಿಜಯನಗರ ಬಸ್ ನಿಲ್ದಾಣದ ಹಿಂದಿನ ನಿಲ್ದಾಣದಲ್ಲಿ ನಾನು ಪಯಣಿಸುತ್ತಿದ್ದ ಬಸ್ ನಿಂತಿತು. ಆಗ ಅಲ್ಲೊಬ್ಬ ಕಿವಿಗೆ ಮೊಬೈಲ್ ಆನಿಸಿಕೊಂಡು ಬಸ್ ಹತ್ತಿ ಮೆಜೆಸ್ಟಿಕ್ ಗೆ ಟಿಕೆಟ್ ಕೊಡಲು ಕಂಡಕ್ಟರನಿಗೆ ದುಂಬಾಲು ಬಿದ್ದ. ಇವ ಈ ಬಸ್ ಅಲ್ಲಿಗೆ ಹೋಗಲ್ಲ ಎಂದರೆ ಜಗಳಕ್ಕೇ ಬಿದ್ದ. ಆಗ ಈ ಕಂಡಕ್ಟರ್ ರೇಗಿ, ಕೈಯಲ್ಲಿ ಮೊಬೈಲ್ ಇದ್ದರೆ ಬಸ್ ನಂಬರ್ ಕೂಡ ನೋಡದೇ ಹತ್ತಿದ್ದೀಯ ಅಂತ ಗದರಿ ಆ ಮೊಬೈಲ್ ಪಯಣಿಗನನ್ನು ಇಳಿಸಿದ.

ಈಗ ಬಿಡಿ. ದ್ವಿಚಕ್ರಿಗಳ ಪರಿ ಪರಿ ಅವಸ್ಥೆ ನೋಡಲಾರೆ, ತಾಳಲಾರೆ ಎನುವಂತಿರುತ್ತದೆ. ಹಿಂಬದಿಯ ಸವಾರನ ಕೈಯಲ್ಲಿ ಮೊಬೈಲ್ ಆದರೆ ಕಿವಿ ಸವಾರನದು. ಇನ್ನು ಕೆಲವರು ಕಿವಿಗೆ ಆನಿಸಿಕೊಂಡವರು ಕತ್ತು ವಾಲಿಸಿ ಮಾತನಾಡುತ್ತ ವಾಹನ ಚಾಲನೆ ಮಾಡುತ್ತಿರುತ್ತಾರೆ. ಅವರುಗಳಿಗೆ ಮುಂದಿನ ರಸ್ತೆ ಅಡ್ಡಡ್ಡ ಕಾಣಬಹುದೇನೋ! ಅದರಲ್ಲಿ ಮಾತಿನ ಭರ ಎಷ್ಟೆಂದರೆ ಕೋಟ್ಯಾಂತರ ಡಾಲರುಗಟ್ಟಲೆ ವ್ಯವಹಾರ ಕಳೆದು ಹೋಗುತ್ತದೆ ಎಂಬ ಭಾವನೆ. ಇನ್ನು ಈಗಿನ ಓಲ, ಊಬರ್‌ಗಳ ಚಾಲಕರಿಗಂತೂ ಚಲನೆಯಲ್ಲಿ ಮೊಬೈಲ್ ಆಲಿಕೆ, ನಾಲಿಕೆ ಕಡ್ಡಾಯ ಮಾಡಿಕೊಂಡಿರುತ್ತಾರೆ. ಈಗ ಮಕ್ಕಳ ಕೈಲಿ ಮೊಬೈಲಲ್ವೇ. ಮೊದಲೆಲ್ಲಾ 'ಬಾರ್ನ್ ವಿತ್ ಸಿಲ್ವರ್ ಸ್ಪೂನ್' ಎಂಬ ಪರಿಬಾಷೆಯಿತ್ತು. ಈಗ ಅದು ಬಾರ್ನ್ ವಿತ್ ಮಾಡರ್ನ್ ಮೊಬೈಲ್ ಇದಕ್ಕೆ ಮಕ್ಕಳನ್ನು ಬೈದು ಏನು ಫಲ. ದೊಡ್ಡವರ ಮೊಬೈಲ್ ಹಿಡಿತ ಕಡಿತವಾದರೆ ಸಾಕು

ಕೆಲವು ವರ್ಷದ ಹಿಂದೆ ಒಂದು ಜಾಹೀರಾತು ದೃಶ್ಯ ಮಾಧ್ಯಮದಲ್ಲಿ ಬರುತ್ತಿತ್ತು. ಅದರಲ್ಲಿ ಡಾಕ್ಟರ್, ನರ್ಸ್ ಇವರುಗಳೆಲ್ಲ ಒಬ್ಬಾಕೆಗೆ ಪ್ರಸವ ಮಾಡಿಸಲು ತಯಾರಾಗಿ ಕ್ಷಣಗಣನೆ ಮಾಡುತ್ತಿದ್ದರು. ಒಂದೆರಡು ಕ್ಷಣದಲ್ಲೇ ಮಗು ತಾಯ ಗರ್ಭದಿಂದ ತಂತಾನೇ ಹೊರಬಂದು ಅಲ್ಲಿ ಒಬ್ಬರ ಬಳಿ ಇದ್ದ ಮೊಬೈಲ್ ಕಸಿದು ಕೊಂಡು ತನ್ನದೂ ಸೇರಿದಂತೆ ಅಲ್ಲಿದ್ದವರದೆಲ್ಲರ ಚಿತ್ರ ಕ್ಲಿಕ್ಕಿಸಿ ಎಲ್ಲರಿಗೂ ಟಾಟಾ ಮಾಡಿ ಹೊರ ಹೋಯಿತು. ಅಲ್ಲಿದ್ದವರೆಲ್ಲಾ ದಂಗು ಬಡಿದು ಹೋದರು. ಇದೊಂದು ಹೊಸ ಮಾದರಿ ಮೊಬೈಲ್ ಬಗೆಗಿನ ಜಾಹೀರಾತು.

ಬರೆಯುತ್ತ ಹೋದರೆ ಇದಕ್ಕೆ ಆದಿ ಅಂತ್ಯ ಎರಡೂ ಇಲ್ಲದ ಬಹುರೂಪಿ, ವಿಶ್ವರೂಪಿ.

■

**ಅಪರಂಜಿ 2023 ವಿಶೇಷಾಂಕ**

– ನಮ್ಮ ಲೇಖಕರಿಗೆ ಮನವಿ

ಅಕ್ಟೋಬರ್ 2023 ಅಪರಂಜಿ ವಿಶೇಷಾಂಕ್ಕಾಗಿ ತಿಳಿಹಾಸ್ಯ/ಪ್ರಬಂಧ ಪ್ರಾಕಾರಗಳ ಲೇಖನಗಳನ್ನು ಕಳಿಸಿ. ನುಡಿ 01 ತತ್ರಾಂಶದಲ್ಲಿ ಟೈಪ್ ಮಾಡಿ ಮೈಲ್‌ಗೆ ಅಟ್ಯಾಚ್ ಮಾಡಿ ಕಳಿಸಿದ ಲೇಖನಗಳನ್ನು ಮಾತ್ರ ಪರಿಗಣಿಸಲಾಗುವುದು. ದಯಮಾಡಿ ಗಮನಿಸಿ – ಹಸ್ತಪ್ರತಿಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ನಿಮ್ಮ ಲೇಖನಗಳು ನಮಗೆ ಅಪರಂಜಿಯಲ್ಲಿರುವ ಮಿಂಚಂಚೆಗೆ ಆಗಸ್ಟ್ 30ರೊಳಗೆ ತಲುಪಬೇಕು.

# ಕೇವಲ 60–70 ವರ್ಷಗಳ ಹಿಂದೆ

✍ ಯು.ಬಿ. ವಾಸುದೇವ

ಕೇವಲ 60–70 ವರ್ಷಗಳ ಹಿಂದೆ

ಹುಬ್ಬಳ್ಳಿ–ಗದಗ–ವಿಜಾಪೂರ–ಬೈಲಹೊಂಗಲ–ಗೋಕಾಕ–ಕೊಪ್ಪಳ–ರಾಯಚೂರ ಬಾಗಲಕೋಟೆಗಳಲ್ಲಿ ಹಿತ್ತಲ ಇಲ್ಲದ ಮನೆಗೆ ಕನ್ಯಾ ಕೊಡುತ್ತಿರಲಿಲ್ಲ !

"ಹಿತ್ತಲ ಇಲ್ಲದಾಕಿಗೆ ಹಿರೇತನ ಇಲ್ಲಾ" ಎಂಬ ಗಾದೆಮಾತೇ ಇತ್ತು.

ಕಾರಣ;

ಹೆಂಗಳೆಯರಿಗೆ ಹಿತ್ತಲು ತಲೆಹಿಕ್ಕಿಕೊಳ್ಳಲು, ವಗಿಯಾಣ ಮಾಡಲು, ಪಾತ್ರೆ ತೊಳೆಯಲು, ಹಿತ್ತಲ ಕಟ್ಟೆಮೇಲೆ ಕುಂತು ಹರಟೆ ಹೊಡೆಯಲು, ಬೆಳದಿಂಗಳ ಊಟ ಮಾಡಲು, ಕರಬೇವು–ಕೋತಂಬ್ರಿ–ನುಗ್ಗಿ–ಹೀರೆ–ಬೆಂಡಿ–ಚವಳಿ–ಕುಂಬಳ–ಬದ್ನಿ–ತುಪ್ರಿ–ಚಳ್ಳವರಿ–ನಿಂಬಿ–ಹಾಗಲ ಹಾಗೂ ಗಾವಟಿ ಔಷಧಿಸಸ್ಯಗಳನ್ನು ಬೆಳೆಯಲು ಗುಪ್ತಕಾಶಿ ಆಗಿತ್ತು.

ಹಾಂ.

ಆಗ ಈ ಹಿತ್ತಲದಲ್ಲಿ ಎಮ್ಮಿ ಆಕಳುಗಳಿಗೂ ಪಡವು ಇತ್ತು. ಕುಳ್ಳಿನ ಕುಳಬಾನ ಇತ್ತು. ಇವುಗಳ ಜೊತೆಗೆ ಸಾವಿರಾರು ಗುಬ್ಬಿಗಳಿಗೆ, ಪಾರಿವಾಳಗಳಿಗೆ, ಗೊರವಂಕಗಳಿಗೆ ನೆಲೆಯಿತ್ತು. ಬೆಳವ, ಕವುಜುಗ, ಗೀಜಗ, ಕಬ್ಬಕ್ಕಿಗಳ ಹಕ್ಕಲವಾಗಿತ್ತು. ಹಿತ್ತಲಬಾಗಿಲು ತೆರೆದರೆ ಸಾಕು ರತ್ನಪಕ್ಷಿ ನಮ್ಮನ್ನು ಸ್ವಾಗತಿಸುತ್ತಿತ್ತು.

ಕೋಗಿಲೆ ನಮ್ಮ ಮಾವಿನ ಮರದ ಕೋಮಲೆಯಾಗಿತ್ತು. ದೇವರ ಪೂಜೆಗೆ ಗುಳಬುಟ್ಟಿತುಂಬ ಬಸವನ ಪಾದ, ಜಾಜಿ, ಮಲ್ಲಿಗೆ, ಚಂಡು ಹೂಗಳು ಸಿಗುತ್ತಿದ್ದವು.

ಹಿತ್ತಲಲ್ಲಿ ಬೆಳೆದ ಕುಂಬಳ ಬಳ್ಳಿಯ ದೊಡ್ಡ ಹಳದೀ ಹೂಗಳನ್ನು ನಮ್ಮ ಅವ್ವ–ಚಿಗವ್ವರು ಮುಂಚೀಬಾಗಿಲ ಹೊಸ್ತಿಲುಗಳಿಗೆ ಏರಿಸಿದರೆ ಆ ಬಾಗಿಲು ಮಂಗಳಗೌರಿಯಾಗಿ ಕಂಗೊಳಿಸುತ್ತಿತ್ತು.

ಹಾಂಹಾಂ.

ಈ ಹೇರಳ ಹೂಗಳ ರಾಶಿಗೆ ಆಕರ್ಷಿತವಾಗಿ ಬರುತ್ತಿದ್ದ ಸಾವಿರ– ಸಾವಿರ ಜಾತಿಯ ಬಣ್ಣದ ಪಾತರಗಿತ್ತಿಗಳಿಗೆ ಲೆಕ್ಕವೇ ಇಲ್ಲ.

ಅಂದು ಇಡೀ ಹುಬ್ಬಳ್ಳಿ– ಧಾರವಾಡಗಳು ಅಸಂಖ್ಯ ಕೋಟಿ ಪಾತರಗಿತ್ತಿಗಳಿಗೆ ಕ್ಯಾಪಿಟಲ್ ಸಿಟಿ ಆಗಿದ್ದವು.

ಆದ್ದರಿಂದಲೇ ಅವುಗಳನ್ನು ಕಂಡು ದಂಗುದಕ್ಕಾದ ಬೇಂದ್ರೆಯವರು.

"ಪಾತರಗಿತ್ತಿ ಪಕ್ಕಾ ನೋಡೀದೇನ ಅಕ್ಕಾ . ಹಸಿರುಹಚ್ಚಿ ಚುಚ್ಚಿ . ಮೇಲೆ ಅರಿಷಿಣ ಹಚ್ಚಿ. ಹೂವಿಗೆ ಹೋಗತಾವ . ಗಲ್ಲಾ ತಿವೀತಾವ ."

ಅಂತ ಕವನ ಬರೆದದ್ದು !

ಬೇಂದ್ರೆಯವರ ಆ ಕವನದ ಹಿಂದೆ ಶತಮಾನದ ಹಿಂದಿನ ಅದ್ಭುತ ಕನಸಿನ ಪ್ರಕೃತಿಯೇ ಕೈಜೋಡಿಸಿ ನಿಂತಿದೆ !

ಅದಕ್ಕೆ ನಮ್ಮ ಹಿತ್ತಲು ಪ್ರತ್ಯಕ್ಷ ಸಾಕ್ಷಿಯಾಗಿತ್ತು !

ನಾವು ಹುಡುಗರು ವಿಶ್ವ ಸುಂದರಿ ಬೋರಂಗೀ ಹುಳಗಳನ್ನು ಹಿಡಿದು ಆಡಿಸಿ ಮತ್ತೆ ಆಕಾಶಕ್ಕೆ ಹಾರಿಬಿಡುತ್ತಿದ್ದೆವು.

ಇನ್ನೂ ಕೇಳ್ರಿ.

ಅಂದು ಪ್ರಕೃತಿ ನಮ್ಮ ವಿಕೃತಿ ಆಗಿರಲಿಲ್ಲ. ನಮ್ಮ ಮನೆತುಂಬ ತರತರದ ಸುಂದರ ಹಾವುಗಳಿದ್ದವು.

ನಮ್ಮ ಹಂಚಿನ ಚಪ್ಪರದಲ್ಲಿ ಅವು ತಮ್ಮ ಮಕ್ಕಳು– ಮೊಮ್ಮಕ್ಕಳು– ಗೆಳೆಯ– ಗೆಳತಿಯರೊಂದಿಗೆ ಚಕ್ಕಂದ ಆಡುತ್ತಿದ್ದವು. ಅವುಗಳ ಮಟ್ಟಿಗೆ ಅವು !

ನಮ್ಮಮಟ್ಟಿಗೆ ನಾವು ! ಹಾವು–ಚೇಳು–ಹಲ್ಲಿ–ಹಾವ್ರಾಣಿ–ಜೇಡ–ಹುಗ್ಗಿಜೇನು– ಕಣಜೀರಿಗಿ–ವನಕೀಮಂಡ– ಕುಂಬಾರ ಹುಳ–ಮುಂಗಲಿ–ಡೊಣ್ಣಿಕಾಟ ಇವು ನಮ್ಮೊಂದಿಗೆ ಲಿವಿಂಗ್ ಟುಗೇದರ್ ಸಿಸ್ಟಂದಲ್ಲಿ ಚಂದವಾಗಿದ್ದವು !

ಅಬ್ಬಬ್ಬಾ. ಹಾವು ಸಂಭಾವಿತ ! ಚೇಳು ಚಾಪ್ಟರ್ ! ಚೇಳು ಕಚ್ಚದ ಮನುಷ್ಯ ಮನುಷ್ಯನೇ ಅಲ್ಲ. ಚೇಳು ಕಚ್ಚಿದರೆ ಮುಂದೆ ಹತ್ತುವರ್ಷ ರೋಗಬರುವದಿಲ್ಲ ಅಂತ ಅಜ್ಜ ಹೇಳುತ್ತಿದ್ದ. ನಮ್ಮ ಹಿತ್ತಲಿನ ಕುಳಬಾನ, ವಡಕಟ್ಟಿಗಿ ರಾಶಿಯಲ್ಲಿ ಚೇಳುಗಳು ಆಯ್ತಾರ ಸಂತಿ ಮಾಡುತ್ತಿದ್ದವು. ಅವುಗಳಲ್ಲಿ ಕೆಂಪುಚೇಳು ಡೇಂಜರಸ್. ಹುಂಚೀಕಪ್ಪದ ಬಣ್ಣದ ಚೇಳು ಮೀಡಿಯಂ ಡೇಂಜರ್. ರಾಕ್ಷಸ ಗಾತ್ರದ ಕಬ್ಬಿಣ ಚೇಳು ನೋಡಲು ಭಯ, ಆದರೆ ಜೀವಕ್ಕೆ ಅಭಯ !

ನಮ್ಮ ಓಣಿಯಲ್ಲಿ ಚೇಳಿನ ಮಂತ್ರ ಬಲ್ಲ ಅಜ್ಜ– ಕಾಕಾ –ದೊಡ್ಡಪ್ಪಗಳಿದ್ದರು. ಚೇಳು ಕಚ್ಚಿದ ಕೂಡಲೆ ನಾವು ಅವರ ಹತ್ತರ ಓಡಿ ಹೋಗುತ್ತಿದ್ದೆವು.

ಅವರದೇ ವಿಚಿತ್ರವಾದ ಗ್ರಾಮೀಣ ಔಷಧಿ ಪದ್ಧತಿ, ಮಂತ್ರ ಪದ್ಧತಿ ಇತ್ತು. ಉದಾಹರಣೆಗೆ ಚೇಳು ನಮ್ಮ ಬಲಗಾಲಿಗೆ ಕಚ್ಚಿದರೆ; ಬಿಳಿ ಉಳ್ಳಾಗಡ್ಡಿ ಜಜ್ಜಿ , ನಮ್ಮ ಎಡ ಕಿವಿಯಲ್ಲಿ ಅದರ ರಸ ಹಿಂಡುತ್ತಿದ್ದರು; ಹಾಗೂ. ಎಡಕಾಲಿಗೆ ಕಚ್ಚಿದರೆ ಬಲಗಿವಿಯಲ್ಲಿ ಆ ರಸ ಹಿಂಡುತ್ತಿದ್ದರು. ಮೇಲೆ ಚೇಳಿನ ಮಂತ್ರ ಗುಪ್ತವಾಗಿ ಪಟಿಸುತ್ತಿದ್ದರು.

ಆಗ ಚೇಳಿನ ವಿಷ ಜರ್ರನೆ ಜಾರಿ ಹೋಗಿ ಮತ್ತೆ ಮರುದಿನ ನಾವು ಗುಂಡಾ– ಗಜಗಾ– ಬಗರಿ– ವಟ್ಟಪ್ಪಾ– ಚಿಣಿಫಣಿ ಆಡುತ್ತಿದ್ದೆವು.

ನಮ್ಮ ಹಳೆಯ ಕಾಲದ ಮನೆಗಳ ಕೂಡುಕುಟುಂಬ ಜೀವನದ ಸೊಗಸನ್ನು ಅರ್ಥ ಮಾಡಿಕೊಂಡವರಿಗೆ ಮಾತ್ರ ನಮ್ಮ ಜಾನಪದ ಸಾಹಿತ್ಯದ ಸೊಗಡು ಅರ್ಥವಾಗಬಲ್ಲದು.

ಬದುಕಿನ ಬಣ್ಣಗಳಿಗೆ ಹತ್ತಿರವಾಗಿ ಉತ್ತರ ಕಂಡುಕೊಳ್ಳುವ ಪ್ರಯತ್ನವೇ ನಮ್ಮ ಜನಪದೀಯ ಹಾಡುಗಬ್ಬ !

ನೆನಪಾಯ್ತು !

ಪ್ರತಿಯೊಂದು ಮನೆಯ ಹಿತ್ತಲದಲ್ಲಿಯೂ ಕಂಪಲ್‌ಸರಿಯಾಗಿ ಒಂದು ಆಳ ತಗ್ಗಿನ ಗುಂಡಿಯಲ್ಲಿ ರಸಗೊಬ್ಬರದ ತಿಪ್ಪಿ ಇದ್ದೇ ಇರುತ್ತಿತ್ತು.

ಪ್ಲಾಸ್ಟಿಕ್ ಪಿಶಾಚಿ ಇನ್ನೂ ಅವತಾರ ತಾಳದ ಆರೋಗ್ಯಪೂರ್ಣ ಕಾಲ ಅದು. ಹೀಗಾಗಿ ಆ ಕಾಲದಲ್ಲಿ ತಿಪ್ಪಿಗೆ ಸಮಾಜದಲ್ಲಿ ತುಂಬಾ ಗೌರವ ಇತ್ತು. ಶೂನ್ಯಸಂಪಾದನೆಯಲ್ಲಿ ಮರುಳಶಂಕರದೇವ ಶರಣ ಮೂಡಿಬಂದದ್ದೇ ಈ ತಿಪ್ಪಿಯಲ್ಲಿ.

ಆಗ ಅನೇಕರ ಹೆಸರೇ "ತಿಪ್ಪವ್ವ", "ತಿಪ್ಪಣ್ಣ", "ತಿಪ್ಪಣ್ಣಗೌಡ" ಅಂತ ಇತ್ತು !

ಈಗ ಪರಭಾಷೆಗಳ ಟ್ರೆಂಟ್ರಾಂ ಹೆಸರುಗಳ ಆಕ್ರಮಣದಲ್ಲಿ ನಮ್ಮ ಹುಬ್ಬಳ್ಳಿಯ "ತಿಪ್ಪವ್ವ", "ಹುಚ್ಚಯ್ಯ", "ಫಕೀರಪ್ಪ", "ದ್ಯಾಮವ್ವ", "ಮಾಗುಂಡವ್ವ", "ಕರೆವ್ವ", "ಕಲ್ಲಪ್ಪ" ,"ಕಂಟೆಪ್ಪ" ಮೂಲೆಗುಂಪಾದವು ! ತಿಪ್ಪವ್ವನ ಬದಲು ಡಿಂಪಲ್ ಬಂದಳು! ಹುಚ್ಚವ್ವನ ಬದಲು ಸಿಂಪಲ್ ಬಂದಳು ! ಮುಂದೆ ನಮ್ಮ ಸೊಸೆ ಯಾವ ಹೆಸರು ತರುವಳೋ ಅವಳಿಗೇ ಗೊತ್ತು ! ಹಿತ್ತಲಿಲ್ಲದ ಮನೆ ಬತ್ತಲೆ . ಅಂತ ನಂಬಿದ ಬೆಳುವಲ ಸೀಮೆಯ ಭಾವನೆ ಇತ್ತು !

"ಹಿತ್ತಲಿಲ್ಲದಾಕಿಗೆ ಹಿರೇತನ ಇಲ್ಲ . ಬಚ್ಚಲಿಲ್ಲದಾಕಿಗೆ ಬಹುಮಾನ ಇಲ್ಲ." ಎಂಬ ಗಾದೆ ಮಾತು 70 ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಚಾಲ್ತಿಇತ್ತು.

ಜನಪದ ಸಾಹಿತ್ಯಕ್ಕೂ ಬದುಕಿಗೂ ಬಿಚ್ಚದ ಬೆಸುಗೆಯ ಕಾಲ ಅದು. ನಮ್ಮ ಬೆವರು– ಬಿಸಿಲು– ಮನೆ– ಮನ– ದನ– ಹೊಲ– ದಂದಕ್ಕಿ– ಹಿತ್ತಲ– ಹಕ್ಕಲಗಳ ಜೀವನವೇ ಜೀವಂತ ಚಿತ್ರಕಾವ್ಯವಾಗಿತ್ತು. ಈಗ 30–40 ಸೈಜಿನ ಗಿಡ್ಡೂಪುಠಾಣಿ ಮನೆಗಳಲ್ಲಿ ಹಿತ್ತಲೂ ಇಲ್ಲ; ಪತ್ತಲೂ ಇಲ್ಲ. ಎಲ್ಲಾ ಸಿಮೆಂಟಿನ ಕತ್ತಲೋ ಕತ್ತಲಾ !

ಬನ್ನಿ.

ನಮ್ಮ ಪ್ರೀತಿಯ ಬೆಂಗ್ಳೂರ ಮಹಾನಗರದಲ್ಲಿ ವೃಕ್ಷ ಪ್ರೇಮಿಗಳಿಗಿಂತ ವೃಕ್ಷವೈರಿಗಳೇ ಜಾಸ್ತಿ. ಇಲ್ಲಿ ಗೂಗೆ ವಾಸಮಾಡಿದ ಮರ ಖತಂ. ವಾಸ್ತೂ ದೋಷ ಇದ್ದರಂತೂ ಢಂ. ಕೆಲವರಿಗೆ ಇರುವೆಗಳಿರುವ ಮರಗಳೆಂದರೆ ಭೀತಿ.

ತಮ್ಮ ಮನೆಯ ಚಂದ ಪೇಂಟಿಂಗ್ ಮಾಡಿದ ಗೋಡೆ ಕಾಣುವದಿಲ್ಲ ಅಂತ ಮರಗಳ ಮಾರಣ ಹೋಮ. ಅವೂ ಢಮಾರ್. ಮನೆಮುಂದೆ ತಪ್ಪಲುಕಸ ಬೀಳುತ್ತದೆ ಅಂತ ಭಯದಿಂದ ಹಚ್ಚಿದ ಮರಗಳನ್ನು ಕಿತ್ತುಹಾಕಿದ ಮಧುರ ಮಾನಿನಿಯರೂ ಉಂಟು. ಈ ಮಾನಿನಿಯರು ಮರಗಳ ಹಾನಿನಿಯರು! ಅವರಿಗೆ ಕಸದ ಚಿಂತೆ. ಮನೆಮುಂದೆ ಬಳ್ಳಿಗಳನ್ನು ಬೆಳೆಸಿದರೆ ಹಾವುಗಳು ಬಂದು ಸೇರುತ್ತವೆಯೆಂಬ ಭೀತಿ!

ಹಾಂ ಹಾಂ . ಎಪ್ಪತ್ತು ವರ್ಷಗಳ ಹಿಂದೆ .

ನಮ್ಮ ಹಿತ್ತಲಗಳಲ್ಲಿ ದೆವ್ವಗಳಿಗೂ ಕೊರತೆ ಇರಲಿಲ್ಲ. ನಮ್ಮ ಹಿತ್ತಲುಗಳು ಸತ್ತವರ ನೈಟ್ ಕ್ಲಬ್ ಆಗಿದ್ದವು.

ಆ ದೆವ್ವಗಳು ಕಾಲಲ್ಲಿ ದೆವ್ವನ ಗೆರಿ ಇದ್ದವರಿಗೆ ಪ್ರತ್ಯಕ್ಷ ಕಂಡು , ಮಾತಾಡಿ ಹೋಗುತ್ತಿದ್ದವು.

ಕಾರಣ ಆಗ ಇನ್ನೂ ಝಗಝಗಿಸುವ ಲೈಟುಗಳು ಬಂದಿರಲಿಲ್ಲ. ಚಿಮಣಿಯ ಕುಡ್ಡ ದೀಪದಲ್ಲಿ ಈ ದೆವ್ವಗಳು ಪಸಂದಾಗಿ ಬಾಳೆ ಮಾಡುತ್ತಿದ್ದವು !

ಅಯ್ಯೋ . ! ಲೈಟುಗಳು ಬಂದು ಪಾಪ . ಈ ದೆವ್ವಗಳು ಓಡಿ ಹೋದವು!

ಮೊಬೈಲುಗಳು ಬಂದು ಪ್ರೇಮಪತ್ರಗಳು ಕಾಣೆಯಾದವು !!???? ■

# ಆಪರೇಶನ್ ವಿಮಲ

✍ಸುಧಾ ಸರನೋಬತ್

"ಹಲೋ, ಡಾಕ್ಟರ್ ನಿಮ್ಮ ಹತ್ತಿರ ಐದು ನಿಮಿಷ ಮಾತಾಡಬಹುದೇ," ಕೇಳಿದೆ.

ಡಾಕ್ಟರ್ ಹೇಳಿದರು.

ನೀವು ಹೆಂಗಸರು ಕೇವಲ ಐದು ನಿಮಿಷವಷ್ಟೇ ಮಾತಾಡಿ ನಿಮ್ಮ ಮಾತು ಮುಗಿಸುತ್ತೀರಿ ಎಂಬ ಭರವಸೆ ಕಳೆದುಕೊಂಡು ಬಹಳ ವರ್ಷಗಳಾಯಿತು. ಅರ್ಥಾತ್ ನನ್ನ ಮದುವೆ ಆದಾಗಿನಿಂದ". ಡಾಕ್ಟರ್ ಮಾತು ಕೇಳಿ ನಿರಾಸೆ ಆಯಿತು. ಪರಿಚಯದ ಡಾಕ್ಟರ್, ಅವರ ಹತ್ತಿರ ನಮ್ಮ ಆರೋಗ್ಯದ, ಮಾನಸಿಕ ತೊಂದರೆ ಹೇಳಿಕೊಂಡರೆ ಏನೋ ಮನಸ್ಸಿಗೆ ಸಮಾಧಾನ. ಆದರೆ ಅವರು ತಮ್ಮ ಪೇಶಂಟ್ ಕಡೆ ಗಮನ ಕೊಡದೆ ನನ್ನ ಮಾತು ಕೇಳಿಸಿಕೊಳ್ಳುತ್ತ, ರೋಗಿಗೆ ತಪ್ಪು ಔಷಧಿ ಕೊಟ್ಟರೆ ಪ್ರಮಾದವಾದೀತು ,ಎಂಬ ಜ್ಞಾನೋದಯ ಆಗಿ ಸುಮ್ಮನಾದೆ. ಮತ್ತೆ ಡಾಕ್ಟರ್ದೇ ಫೋನ್ ಬಂತು.

"ಅಮ್ಮ, ಬೇಜಾರಾಗ್ಬೇಡಿ, ಮದ್ಯಾಹ್ನ ಪೇಶಂಟ್ಸ ಸಂಖ್ಯೆ ಕಡಿಮೆ ಇರುತ್ತೆ ಆಗ ನಿಮ್ಮಂತವರಿಗೋಸ್ಕರ ನನ್ನ ಸಮಯ ಮೀಸಲಿಟ್ಟಿದ್ದೇನೆ. ಆಗ ನೀವು, ಐದು ನಿಮಿಷದ ಬದಲಿಗೆ ಹತ್ತು ನಿಮಿಷ ಮಾತಾಡಬಹುದು."

ಡಾಕ್ಟರ್ ಮಾತು ಕೇಳಿ ನೆಮ್ಮದಿ ಸಿಕ್ಕಂತಾಯಿತು.

ಮಧ್ಯಾಹ್ನ ಡಾಕ್ಟರ್‌ಗೆ ಫೋನಾಯಿಸಿದೆ.

"ಹಲೋ ಡಾಕ್ಟರ್ ಬೇಜಾರು ಮಾಡ್ಕೋಬೇಡಿ, ನನ್ನ ಆರೋಗ್ಯದ ಸಮಸ್ಯೆ ಯ ಬಗ್ಗೆ ಅಲ್ಲ ನನ್ನ ಮಾತು, ನಮ್ಮವರ ಮಾನಸಿಕ ಆರೋಗ್ಯದ ಬಗ್ಗೆ ಕೇಳಬೇಕಾಗಿತ್ತು."

ಡಾಕ್ಟರ್ ಜ್ಯೋತಿಷ್ಯ ಶಾಸ್ತ್ರದ ಅಭ್ಯಾಸ ಕೊಂಚ ಕಾಲ ಮಾಡಿದ್ದರು. ತಕ್ಷಣ ಅಭ್ಯಾಸ ಬಲದಂತೆ ನನಗೆ ಪ್ರಶ್ನಿಸಿದರು.

"ನಿಮ್ಮ ಯಜಮಾನರ ಡೇಟ್ ಆಫ ಬರ್ತ, ಮತ್ತು ನಕ್ಷತ್ರ ರಾಶಿ ಯಾವುದು ಹೇಳಮ್ಮ" ಎಂದರು. ನನಗೆ ದಿಗ್ಭ್ರಮೆ ನಾನೇನಾದರು ಟೀವಿ ಜ್ಯೋತಿಷ್ಯ ವಿಭಾಕ್ಕೆ ಕನೆಕ್ಟ ಆಗಿದ್ದೀನಾ ಎಂದು.

"ನೀವು ಡಾಕ್ಟರ್ ಅಲ್ವಾ" ಗಾಬರಿಯಿಂದ ಕೇಳಿದೆ.

"ನಾನು ಡಾಕ್ಟರ್ ಕಮ್ ಜ್ಯೋತಿಷಿ." ಕೆಲವರಿಗೆ ನನ್ನ ಔಷಧಿಯಿಂದ ಯಾವ ಪ್ರಯೋಜನವೂ ಆಗದಿದ್ದಾಗ, ಅವರ ಜಾತಕ ನೋಡಿ ಅವರ ಭವಿಷ್ಯದಲ್ಲಿ ಈ ವರ್ಷ ಗಜಕೇಸರಿ ಯೋಗವಿದೆ, ನಿಮ್ಮ ಆಶೆ ಆಕಾಂಕ್ಷೆಗಳು ಆ ಶನಿಮಹರಾಜನ ಕೃಪೆಯಿಂದ ಈಡೇರುತ್ತವೆ. ಭೂಮಿ ಮತ್ತು ಮನೆ ಖರೀದಿಯ ಯೋಗವಿದೆ. ಎಂದು ನಾನು ಹೇಳುತ್ತೇನೆ. ನನ್ನ ಭರವಸೆಯ ಮಾತಿನಿಂದ ಎಷ್ಟೋ ರೋಗಿಗಳು ಗುಣಮುಖರಾಗಿದ್ದಾರೆ.ಅಷ್ಟಕ್ಕೇ ಸಮಾಧಾನ ಹೊಂದದ ಕೆಲ ರೋಗಿಗಳಿದ್ದಾರೆ, ಅವರ ಸಮಾಧಾನಕ್ಕೆ ಡೋಲೋ ಮಾತ್ರೆ ಕೊಟ್ಟು ಕಳಿಸುತ್ತೇನೆ."

ಡಾಕ್ಟರ್ ಮಾತು ಕೇಳಿ ನನ್ನ ಉತ್ಸಾಹ ಕುಗ್ಗಿತು. ಮನೆಯ ಸಮಸ್ಯೆಯ ಬಗ್ಗೆ

ಮಾತನಾಡಬೇಕು ಎಂದುಕೊಂಡಿದ್ದೆ. ನನಗೂ ಡಾಕ್ಟರ್ ನಮ್ಮ ಭವಿಷ್ಯ ಶುರು ಹಚ್ಚಿಕೊಂಡರೆ ಎಂದು ದಿಗಿಲಾಯಿತು.

ಆದರೂ ಪಟ್ಟು ಬಿಡದ ಬೇತಾಳದಂತೆ ಡಾಕ್ಟರ್ ಬೆನ್ನಿಗೆ ಅಂಟಿಕೊಂಡು, ಪ್ರಶ್ನೆ ಕೇಳಿದೆ.

"ಡಾಕ್ಟರ್, ಇತ್ತೀಚೆಗೆ ನಮ್ಮ ಪತಿದೇವರು,ಯಾವಾಗಲೂ ಮಾತೇ ಬರದಂತೆ, ಒಂದು ಮೂಲೆ ಹಿಡಿದು ಸಾರಿ ಕೋಲು (ಸ್ಟಿಕ್) ಹಿಡಿದು ಕುಳಿತಿರುತ್ತಾರೆ, ನನ್ನ ಪ್ರಶ್ನೆಗಳನ್ನು ಅಪರಿಚಿತರ ಪ್ರಶ್ನೆಗಳೆಂಬಂತೆ  ನೋಡುತ್ತಾರೆ. ಕಿವಿ ಹತ್ತಿರ ಬೆರಳಿಟ್ಟು ಕಿವಿ ಕೇಳಿಸುತ್ತಿಲ್ಲ ಎನ್ನುತ್ತಾರೆ.

ಸದಾ ಮಂಕು ಕವಿದಂತೆ ಇರುತ್ತಾರೆ." ನನ್ನ ಪ್ರಲಾಪ ಮುಗಿಯುತ್ತಿದ್ದಂತೆ, ಡಾಕ್ಟರ್ ಕೇಳಿದರು.

"ಊಟ ತಿಂಡಿಯ ವಿಷಯದಲ್ಲಿ ಹೇಗೆ, ಆಸಕ್ತಿ ಇದೆಯಾ?"

ನಾನು ಹೇಳಿದೆ. "ಅವರಿಗೆ ಬಹು ಇಷ್ಟವಾದ ತಿಂಡಿ ತಿನಿಸುಗಳನ್ನು, ಮತ್ತು ಅಡುಗೆ ಮಾಡಿದಾಗ ಕೊಂಚ ಚುರುಕಾಗಿರುತ್ತಾರೆ.ಅವತ್ತು ಕಿವಿಯೂ ಚನ್ನಾಗಿ ಕೇಳುತ್ತೆ."

ನನ್ನ ಉತ್ತರ ಕೇಳಿ ಡಾಕ್ಟರ್ ಪಕಪಕನೆ ನಕ್ಕರು.ಮತ್ತೆ ಅವರೇ ಹೇಳಿದರು.

"ನಿಮ್ಮ ಯಜಮಾನರಿಗೆ ಅರ್ಧಾಷ್ಟಮ ಶನಿದೆಸೆ ಇದ್ದು, ಕುಜ ರಾಹು ದ್ವಿಸಂಧಿಯೋಗವಿದ್ದು, ಶುಕ್ರ ತನ್ನ ಸ್ವಸ್ಥಾನಕ್ಕೆ ಬರಲು ಇನ್ನೂ ಎರಡುವರ್ಷ ಕಾಯಬೇಕು.ಅಲ್ಲಿಯವರೆಗೆ ಯಾರಾದರೂ ವೈದ್ಯರಿಗೆ ಮನೆಗೆ ಕರೆದು ಅತಿಥಿ ಸತ್ಕಾರ ಮಾಡಿ,ನಿಮ್ಮವರಿಗೆ ಇಷ್ಟವಾದ ಅಡುಗೆ ಮಾಡಿ ವೈದ್ಯರೂ ನಿಮ್ಮವರೂ ಒಟ್ಟಿಗೇ ಕುಳಿತು ಊಟ ಮಾಡಿದರೆ ,ಈ ರೋಗದಿಂದ ಅವರು ಮುಕ್ತ ರಾಗಬಹುದು." ಡಾಕ್ಟರ್ ಹೇಳುತ್ತಲೇ ಇದ್ದರು. ನಾನು ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ತಲೆ ವಿಪರೀತ ಸಿಡಿಯುತ್ತಿತ್ತು. ತಕ್ಷಣ ಒಂದು ಡೋಲೋ ಮಾತ್ರೆ ನುಂಗಿ ನೀರು ಕುಡಿದೆ.

ಯಜಮಾನರ ಈ "ಜಾಣ ಕಿವುಡಿ" ಗೆ ಮದ್ದು ಅರೆಯಲು ಸನ್ನದ್ಧಳಾದೆ.

ಮರುದಿನ ಮೊದಲ ಪ್ರಯೋಗ ಯಜಮಾನರ ಮೇಲೆ...

"ಸಾರು ತುಂಬಾ ಚನ್ನಾಗಿದೆ ಕಮಲೂ" ಯಜಮಾನ ಉವಾಚ.

ನನ್ನ ಉತ್ತರ ಸಿದ್ಧವಾಗಿತ್ತು.

"ಇದು ನನ್ನ ಫ್ರೆಂಡ್ ಜಯಾ ಕಳಿಸಿದ್ದು" ಯಜಮಾರಿಗೆ ನನ್ನ ಮಾತು ಕೇಳಿಸಿತು ಮತ್ತು ಹಿಡಿಸಿತು. ದಿನಾ ಅಕ್ಕ ಪಕ್ಕದ ಮನೆಯವರ ಹತ್ತಿರ ಅಡುಗೆ ತಿಂಡಿ (ನಾನೇ ತಯಾರಿಸಿದ್ದು) ನಮ್ಮನೆಗೆ ಬರುತ್ತೆ, ಯಜಮಾನರ ಡಿಪ್ರೆಶನ್‌ಗೆ ಸರಿಯಾದ ಆಪರೇಶನ್ ಆಗಿದೆ.!

ಮಾರನೇ ದಿನ ಪಕ್ಕದ್ದಲ್ಲ ಪಕ್ಕದ್ದು ವಿಮಲಾ ಮನೆಯಿಂದ ಬಿಸಿಬೇಳೆಭಾತ್ ಮತ್ತು ಈರುಳ್ಳಿ ರಾಯತಾ ,ನಮ್ಮನೆ ತುಂಬಾ ಘಮಘಮಿಸಿತು.ಯಜಮಾನರ ಮೂಗು ಅರಳಿದ ಸಂಡಿಗೆಯಂತಾಗಿತ್ತು."ಗುನು ಗುನಿಸಿದರು ತಮ್ಮ ಕಿರುಬ ಕಂಠದಲ್ಲಿ

"ಘಮ ಘಮ ಘಮಾಡಸ್ತಾವ ಮಲ್ಲಿಗೆ ನೀ ಹೊರಟಿದ್ದು ಎಲ್ಲಿಗಿ"

ಗೆಳತಿ ವಿಮಲ ನನ್ನ ಸ್ಪೆಶಲ್ ರಿಕ್ವೆಸ್ಟ್ ಮೇರೆಗೆ ನಾ ಮಾಡಿದ ಅಡುಗೆ ತನ್ನ ಮಗನ ಮುಖಾಂತರ ತನ್ನ ಮನೆಗೆ ತರಿಸಿಕೊಂಡು, ಅದನ್ನೇ ರಿ ಪ್ಯಾಕ್ ಮಾಡಿ, "ಅಂಕಲ್ ಇವತ್ತು ಬಿಸಿಬೇಳೆ ಭಾತ್ ಮಾಡಿದ್ದೆ, ತಿಂದು ನೋಡಿ ಹೇಗಿದೆ ಹೇಳಿ" ಎಂದಳು. ನಮ್ಮನೆ ಅಂಕಲ್ ಮೊರದಗಲ ಮುಖ ಮಾಡಿ ವಿಮಲಾ ಜಿ ತುಂಬಾ ಥ್ಯಾಂಕ್ಸ ಎಂದು ಹೇಳಿ ಕೈ ಮುಗಿದರು. "ಹಿತ್ತಲ ಗಿಡ ಮದ್ದಲ್ಲ" ಎಂಬ ಗಾದೆ ನಮ್ಮ ಅಂಕಲ್ ನೋಡೇ ಹುಟ್ಟಿಕೊಂಡಿರಬೇಕು. ವಿಮಲಾ ಬಲು ಜಾಣೆ, ನಾನು ಮಾಡಿದ ಬಿಸಿಬೇಳೆ ಭಾತ್ ಅವರ ಮನೆ ಅಂಕಲ್ಗೆ ತಿನ್ನಿಸಿ ಶಹಭಾಶ್ಗಿರಿ ಪಡೆದುಕೊಂಡಿದ್ದಳು. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ" ಎಂಬಂತೆ ನಮ್ಮವರು ವಿಮಲಾ ಮಾಡಿದ ಅಡಿಗೆಗೆ ಮಾರು ಹೋದರು.ನಮ್ಮನೆಯ ಊಟ ರುಚಿಸದಾಗಿತ್ತು. ಈಗ ಕಿವಿ ಕಣ್ಣು ಮನಸ್ಸು ಎಲ್ಲವೂ ಚುರುಕಾಗಿ ಕೆಲಸ ಮಾಡುತ್ತಿದೆ.ಒಟ್ಟಿನಲ್ಲಿ "ಆಪರೇಶನ್ ವಿಮಲ" ವೇರಿವೇರಿ ಸಕ್ಸಸ್ಫುಲ್.

■

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



‘‘ ಆತನ ಜಂಭ ! ನೋಡಿ ಸಾರ್ ; ಹಿಂದೆ ನಿಂತಿರುವರ ಜ್ಞಾನವೇ ಇಲ್ದೆ ಕೋಲಿಂದ ನನ್ನ ಎದೆ ತಿವಿದ್ಬಿಟ್ಟು ಹೋಗ್ತಾ ಇರೋದು........’’

# ಬಾಯಿ ಲೆಕ್ಕದ ಭೂತದ ಬಲೆಯಲ್ಲಿ!

✍ ಕವಿತಾ ಹೆಗಡೆ ಅಭಯಂ

ಕತಗಾಲೆನ್ನುವ ಸುಗ್ರಾಮದಲ್ಲಿ ಖುಷಿ ಖುಷಿಯಾಗಿ ಬಾಲ ಲೀಲೆಗಳನ್ನು ತೋರುತ್ತ ಬೆಳೆಯುತ್ತಿದ್ದೆ ಸ್ವಾಮಿ,

ಯಾರ ದೃಷ್ಟಿ ತಾಕಿತೋ ಈ ಬದುಕಿನಲ್ಲಿ! ಬಾಯಿ ಲೆಕ್ಕವೆಂಬ ಭೂತರಾಜನ ಪ್ರವೇಶವಾಗಿಯೇಬಿಟ್ಟಿತು.

ಆ ಮಹಾರಾಜನ ಸೇವೆ ಮಾಡದ ತಪ್ಪಿಗೆ ವಿಚಾರಣೆ ನಡೆದು ತೀರ್ಪೊಂದು ಹೊರಬಿದ್ದು ನಿರಂತರವಾಗಿ ಲೆಕ್ಕದ ಪ್ರಶ್ನೆ ಎದುರಿಸಬೇಕು ಎಂಬ ಶಿಕ್ಷೆ ಕೂಡ ನನ್ನದಾಗಿಬಿಟ್ಟಿತು.

ಚಂಡಿಕಾ ಮತ್ತು ಅಘನಾಶಿನಿ ನದಿಗಳ ಸಂಗಮದ ಮೇಲಿನ ಆ ಚೆಂದದ ಕತಗಾಲಿನ ಬಾಲ್ಯದ ದಿನಗಳೆಂದರೆ ಧರೆಗಿಳಿದ ಸ್ವರ್ಗದ ಸೊಬಗು. ಹಚ್ಚಹಸಿರು ಗದ್ದೆ, ತೋಟ, ಘನ ಪರ್ವತ, ಹರಿವ ನದಿಗಳು ಆವರಿಸಿದ್ದ ಮೋಹಕ ತಾಣ. ಇಡೀ ಊರಲ್ಲಿ ಒಂದೋ ಎರಡೋ ಕಾರು, ಲೋಕಲ್ಲು ಬಾರಿನ ಆರ್ಭಟವಿದ್ದರೂ ಈ ಬಾಯಿ ಲೆಕ್ಕದ ಭೂತದ ಕಾರುಬಾರು ಮಾತ್ರ ಲೆಕ್ಕತಪ್ಪಿ ಜೋರಿತ್ತು. ಮಕ್ಕಳ ಬಾಲ್ಯದ ಚೆಂದದ ಗಳಿಗೆಗಳನ್ನೇ ಕಸಿದ ಬಾಯಿಲೆಕ್ಕದ ಭೂತ ನನ್ನಂಥ ಬಡ ಪಾತ್ರಧಾರಿಯ ಹಿಂದೆ ನಿಂತು ಜೋರಾಗಿ ಢಣ ಢಣ ಚಂಡೆ ಬಾರಿಸುತ್ತಿತ್ತು. ಅದರ ತಾಳಕ್ಕೆ ತಕ್ಕಂತೆ ನನ್ನಿಂದ ಕುಣಿತ ಶುರು ಹಚ್ಚಿಸಿಯೇ ಬಿಡುತ್ತಿತ್ತು.

ಈ ಮಕ್ಕಳನ್ನು ಕಂಡರೆ ದೊಡ್ಡವರಿಗೇನಾಗುತ್ತದೋ ತಿಳಿಯದು. ಬಿಟ್ಟಿ ಸಿಕ್ಕಿದವರ ಹಾಗೆ ಅದೇನು ಪ್ರಶ್ನೆ ಹಾಕುವುದು! ಗೋಳು ಹೊಯ್ದುಕೊಂಡು ತಾವು ಮಜಾ ತೆಗೆದುಕೊಳ್ಳುವುದೇನು! ನಾನಂತೂ ಇಂಥವರ ಖಾಯಂ ವಿಕ್ಟಿಮ್.

ಎಲ್ಲಿಯೇ ಆದರೂ ನನ್ನನ್ನು ಕಂಡಕೂಡಲೇ ಬಾಯಿ ಲೆಕ್ಕ ಹಾಕಲು ಬಾಯಿ ಬಿಟ್ಟುಕೊಂಡು ಕುಳಿತ ಮಂದಿ ಬೇಕಷ್ಟಿದ್ದರು ಅನ್ನುವುದೇ ನನ್ನ ದೊಡ್ಡ ಗೋಳಾಗಿತ್ತು. ಗಂಡುಮಕ್ಕಳಿಗಿಂತ ಭಯಂಕರ ಲಿಗಾಡಿ ಕೂಸಾದ ನಾನು ಅವರೆಲ್ಲರ ಕಣ್ಣು ತಪ್ಪಿಸಿ ಮಂಗಾಟ ನಡೆಸುವುದು ದೊಡ್ಡ ಸಾಹಸವೇ ಆಗಿತ್ತು.

ಒಬ್ಬ ಹಿರಿಯರು, "ತಂಗಿ, ಒಂದು ಮರದಲ್ಲಿ ಹತ್ತು ಹಕ್ಕಿ ಇದ್ದು, ಒಂದು ಹಾರಿ ಹೋದ್ರೆ ಎಷ್ಟು ಉಳೀತು?" ಎಂದು ನನ್ನ ಕಂಡ ಕೂಡಲೇ ಕೇಳುತ್ತಿದ್ದರು. ಇಂಥ ಲೆಜೆಂಡರಿ ಪ್ರಶ್ನೆಗಂತೂ ಹೇಗೆ ಉತ್ತರ ಕೊಟ್ಟರೂ ತಪ್ಪು ಅನ್ನುತ್ತಿದ್ದರು.

"ಒಂಬತ್ತು" ಅಂದರೆ

"ಹೇ ಮಳ್ಳಿ, ಒಂದು ಹಾರಿ ಹೋದ್ರೆ ಎಲ್ಲಾ ಹಾರಿ ಹೋಗ್ತು," ಅಂತಿದ್ದರು. 'ಓಹೋ ಹೌದಾ' ಅಂತ ತಿಳಿದು ಅದನ್ನು ನೆನಪಿಟ್ಟುಕೊಂಡಿರುತ್ತಿದ್ದೆ. ಮತ್ತೆ ಸಿಕ್ಕಿದಾಗ ಅವರೇ ಇದೇ ಪ್ರಶ್ನೆ ಕೇಳಿದಾಗ ಅವರು ಹೇಳಿದ ಈ ಉತ್ತರ ಹೇಳಿದರೆ,

"ಹೇ ಮಳ್ಳಿ, ಒಂಬತ್ತು ಅಲ್ದಾ? ಹತ್ತರಲ್ಲಿ ಒಂದು ಕಳೆದರೆ ಎಷ್ಟೇ? ದಡ್ಡಿ," ಅಂತ ಕನ್ಫ್ಯೂಸ್ ಮಾಡುತ್ತಿದ್ದರು!

ಮಗ್ಗಿ ಕೇಳುವುದಕ್ಕಂತೂ ಮಿತಿಯೇ ಇರಲಿಲ್ಲ. ಅದರಲ್ಲೂ ಹದಿಮೂರು,

ಹದಿನೇಳು ಮತ್ತು ಹತ್ತೊಂಬತ್ತರ ಮಗ್ಗಿ ಮಕ್ಕಳ ಜಗತ್ತಿನ ಪ್ರಾಣ ತೆಗೆಯುತ್ತಿದ್ದರೆ ದೊಡ್ಡವರಿಗೆ ಅವೆಲ್ಲ ಹಾಟ್ ಫೇವರಿಟ್ ಬೇರೆ! ನನ್ನ ಲೆಕ್ಕದ ಅಲರ್ಜಿಯ ಉರಿಗೆ ಇವರೆಲ್ಲ ಕೊಟ್ಟ ಕೊಡುಗೆಯೂ ಇರುವುದನ್ನು ನೆನೆಯದೆ ಇರಬಹುದೆ?

ನಾನು ಮತ್ತು ನನ್ನ ಜಿಗ್ರಿ ಗೆಳತಿ ನಮ್ಮ ಮನೆಯ ಪಾಗಾರದ ಮೇಲೆ ಕುಳಿತು ಯಾವ್ಯಾವುದೋ ಬೆಟ್ಟ ಹತ್ತುವ, ಮರ ಏರುವ ಅಥವಾ ಕಾಡು ತಿರುಗುವ ಸಾಹಸದ ಪ್ಲಾನ್ ಮಾಡುವ ಹೊತ್ತಿಗೆ ಅದೋ ಅಲ್ಲಿ ರಸ್ತೆಯ ಆ ಕೊನೆಯಲ್ಲಿ ಜೋಳಿಗೆ ಹಾಕಿಕೊಂಡು, ಪ್ಯಾಂಟ್ ಶರ್ಟ್ ಧರಿಸಿದ ಹಿರಿಯ ವ್ಯಕ್ತಿಯೊಬ್ಬರ ಪ್ರವೇಶ...... "ತೈ ತ್ತ ತೈ ತ್ತ ತೈ ತ್ತ .." ಅಂತ. ಅಲ್ಲಿಗೆ ನನ್ನ ಪುಟ್ಟ ಬದುಕಿನಲ್ಲಿ ಒಬ್ಬ ದಿಗಿಲುಕೋರನ ಪ್ರವೇಶವಾಗುತ್ತಿತ್ತು.

"ಅಯ್ಯೋ.. ಭಾಗೀ .ಅಡಗುವಾ ಬಾರೇ" ಎನ್ನುತ್ತ ಗಾಬರಿಯಲ್ಲೇ ಪಿಸುಗುಟ್ಟುತ್ತಿದ್ದೆ. ಮರುಕ್ಷಣ ಇಬ್ಬರೂ ಹುಶ್ ಅನ್ನುವಷ್ಟರಲ್ಲಿ ಪಾಗಾರದ ಮೇಲಿನ ಕಾಗೆ ಹಾರಿ ಮಾಯವಾದ ಹಾಗೆ ಇಬ್ಬರೂ ಥಟ್ ಅಂತ ಅಲ್ಲೇ ಕೆಳಗೆ ಅಡಗಿ ಕುಳಿತುಬಿಡುತ್ತಿದ್ದೆವು. ಆದರೂ ನಮ್ಮ ಇರುವಿಕೆಯ ಮೂಗುಗಾಳಿ ತೆಗೆದುಕೊಂಡವರ ಹಾಗೆ ಅವರು ಬಂದು ಬಂದು ಗೇಟು ಹೊಕ್ಕಿ "ಹೋಯ್ ಎಲ್ಲಿದ್ದೆಯೇ ತಂಗಿ? ಹೋಯ್ .ಭಟ್ರೇ ಕರೀರಿ ಮಗಳನ್ನ" ಅಂದು ಕೂಗು ಹಾಕಿದರೆ ನಾನು

"ಹರ ಮುನಿಯಲ್ ನರ ಕಾಯ್ವನೆ?
ಗುರು ಕರೆಯಲ್ ಶಿಷ್ಯ ಬಾರದಿರುವನೆ?
ಬಾಯಿ ಲೆಕ್ಕಗಳ ಮಳೆಯ ದುರ್ವಿಧಿ ಸುರಿಯೆ
ಮರ್ಯಾದೆ ಮೂರ್ಕಾಸಾಗುವುದ
ತಡೆಯಬಹುದೆ?"

ಎಂದು ಸಾಲುಗಳ ರೀಮಿಕ್ಸ್ ಮಾಡುತ್ತ, ನನ್ನ ವಿಧಿಯನ್ನು ನಾನೇ ಹಳಿದುಕೊಳ್ಳುತ್ತಿದ್ದೆ.

"ಅಕಟಕಟಾ
ಎಲೆಲೆ ಮಗ್ಗಿಯೇ ನೀ ಮ್ಯಾಗಿಯಾಗಬಾರದಿತ್ತೆ?
ಫಳಗುಡುವ ನುಣುಪು ಮೈ ಹೊಂದಿ
ಗಂಟಲೊಳು ಇಳಿಯಬಹುದಿತ್ತೆ!"

ಎಂದು ರಾಗವಾಗಿ ಮನಸ್ಸಲ್ಲೇ ಅಳುತ್ತ ಪೆಚ್ಚುಮೂತಿ ಮಬ್ಬಮ್ಮನ ಹಾಗೆ ಅವರ ಮುಂದೆ ನಿಲ್ಲುತ್ತಿದ್ದೆ.

ಆ ಸಾಹೇಬರು ಶಿಕ್ಷಣ ಇಲಾಖೆಯಲ್ಲಿ ಇನ್ಸ್ಪೆಕ್ಟರ್ ಆಗಿ ನಿವೃತ್ತರಾದ ಭಾರೀ ಕುಳ. ಮಕ್ಕಳು ಎಂದರೆ ಪರೀಕ್ಷೆ ತೆಗೆದುಕೊಳ್ಳಲಿಕ್ಕೆಯೇ ಹುಟ್ಟಿದ್ದು ಎಂಬ ಮಾತಿನ ಪ್ರಚಾರಕ್ಕಾಗಿಯೇ ಬದುಕಿದ ಪಂಡಿತೋತ್ತಮ. ನನ್ನಂಥ ಹುಲು ಮಕ್ಕಳು ಎಂದರೆ ಅವರು ಅಲೆಕ್ಸಾಂಡರ್, ಹಿಟ್ಲರ್ ಎಲ್ಲ ಆಗಿಬಿಡುತ್ತಿದ್ದರು.

ತಮ್ಮ ಕಮಾಂಡಿಂಗ್ ಧ್ವನಿಯಲ್ಲಿ "ತಂಗಿ, ಹದಿನೇಳ ಒಂಬತ್ತಲೇ ಎಷ್ಟು ಹೇಳು ನೋಡುವಾ" ಎಂದರೆ

ನನ್ನೆದೆಯ ವೀಣೆ ತನ್ನಂತೆ ತಾನೆ ಹರಿದು ಚೂರಾಗಿ ಢಮ್ ಢಮ್ ಢಮ್ ಢಮ್ ಎನ್ನುತ್ತಿತ್ತು.

ನನ್ನ ಗಣಿತ ಪ್ರೇಮ ಹಾಗೂ ಅದರಲ್ಲಿನ ಉಜ್ವಲ ಪಾಂಡಿತ್ಯವನ್ನು ಜಗಜ್ಜಾಹೀರು ಮಾಡಲೇ ಇವರು ಅವತಾರವೆತ್ತಿದವರು ಎಂದು ಆಗ ಅನಿಸಿಬಿಡುತ್ತಿತ್ತು.

ಹದಿನೇಳ ಒಂದಲೆ ಹದಿನೇಳು .ಅಂತ ಮನಸ್ಸಿನಲ್ಲೇ ರಾಗವಾಗಿ ಹೇಳಿಕೊಂಡು ಇನ್ನೇನು ಹದಿನೇಳ ಎಂಟಲೆಗೆ ಬರಬೇಕು, ಅಷ್ಟರಲ್ಲಿ

"ಅರೇ  ಎಷ್ಟೊತ್ತೆ? ಇನ್ನೂ ಬರ್ಲಿಲ್ಲಾ?" ಎಂದುಬಿಡುತ್ತಿದ್ದರು.

ಥೋ  ಬಂದ ಮಗ್ಗಿಯೂ ಅಲ್ಲೇ ಸರ್ವನಾಶ ಆಗಿಬಿಡುತ್ತಿತ್ತು!

"ತಂಗಿ, ಭಾರತದ ಕ್ರೀಡಾ ಮಂತ್ರಿ ಎಲ್ಲಿಯವರು?"

"ಭಾರತದ ಜನಸಂಖ್ಯೆಯ ಎಷ್ಟು ಪರ್ಸೆಂಟ್ ನಮ್ಮ ರಾಜ್ಯದಲ್ಲಿದೆ?"

"ಚಿಕ್ಕುಗೆ ಇಂಗ್ಲಿಷ್ನಲ್ಲಿ ಏನು ಹೇಳ್ತಾರೆ?"

ಅಂತ ಕ್ವಿಜ್ ಹಾಕಿ  ವಿಜಯ ಗರ್ವದಿಂದ ಹುಬ್ಬು ಹಾರಿಸುತ್ತ ಕಿರುನಗು ಬೀರಿ ಕೂತು ಬಿಡುತ್ತಿದ್ದರು. ಆಗ ನಾನು ಉತ್ತರ ಗೊತ್ತಿದ್ದರೆ ಬಚಾವು. ಇಲ್ಲದಿದ್ದರೆ ಇಡೀ ಜಗತ್ತಿನಲ್ಲಿರುವ ಚೂರಿಗಳನ್ನೆಲ್ಲ ತಂದು ಒಮ್ಮೆಲೇ ಇರಿದ ಹಾಗೆ ಆಗುತ್ತಿತ್ತು.

ಅಂತೂ ಏನೋ ಉತ್ತರ ಕೊಟ್ಟು ಸುಧಾರಿಸಿಕೊಳ್ಳುವ ಮೊದಲೇ

"ತಂಗಿ,  ಕರ್ನಲ್ ಸ್ಪೆಲ್ಲಿಂಗ್ ಹೇಳು ನೋಡ್ವಾ!"

(ನಾನು : ಅವನಿಗೆ ಗೊತ್ತಿರ್ತದೆ  ನಮಗೆಲ್ಲ ಎಂತಕ್ಕೆ?)

"ಕರಣ ಎಂದರೇನು?"

(ನಾನು : ಅವ ಆಚೆಮನೆ ಕಿರಣನ ಅಣ್ಣ) ಎಂದು  ಅವರು ಕೇಳುವಾಗ ಮಳ್ಳು ಉತ್ತರವನ್ನು ಮನಸ್ಸಲ್ಲೇ ಹೇಳಿಕೊಳ್ಳುವ  ಅಧಿಕ ಪ್ರಸಂಗ ಮಾಡಿದರೂ ಬಾಯಿ ತೆಗೆಯಲು ಧೈರ್ಯವಾಗುತ್ತಿರಲಿಲ್ಲ. ಕೊನೆಗೆ ಸರಿಯುತ್ತರ ಕೊಡುವ ಮೊದಲೇ,

"ಅರೇ .ಎಂತಕ್ಕೆ ನೀ ಇನ್ನೂ ಹೇಳಲಿಲ್ಲ?"

ಎಂದು ಉತ್ಸಾಹಕ್ಕೆ  ಘಟ್ಟಂತ ಭರ್ಜಿ ಚುಚ್ಚುತ್ತಿದ್ದರು.

"ಎನಗಿಂತ ದೀನರಿಲ್ಲ, ಕ್ಷುಲ್ಲಕರಿಲ್ಲ,
ಎಲ್ಲ ಬಲ್ಲವನೇ ನಿನಗೆನ್ನ ಶರಣು"
ನಾನು ಎಂದು ಹಾಡಿಕೊಳ್ಳಬೇಕಿತ್ತು ಅಷ್ಟೇ!

ಆದರೂ ಅವರಿಗೆ ನನ್ನ ಮೇಲಿನ ಪ್ರೀತಿ ಮಾತ್ರ ದೊಡ್ಡದು. ಉತ್ತರ ಹೇಳಲಿ, ಬಿಡಲಿ; ಪೆನ್ನು, ಪೆನ್ಸಿಲ್, ರಬ್ಬರು, ಪುಟ್ಟ ಶಬ್ದಕೋಶದಂತಹ ಅಮೂಲ್ಯ ಉಡುಗೊರೆಗಳನ್ನು ಉದಾರವಾಗಿ ಕೊಟ್ಟು ಒಂದು ಕ್ಷಣದಲ್ಲಿ ಮನಸ್ಸು ಪ್ರಫುಲ್ಲಿತಗೊಳ್ಳುವ ಹಾಗೆ ಮಾಡುತ್ತಿದ್ದರು. ಆದರೂ ಇನ್ನೊಮ್ಮೆ ಅವರನ್ನು ಕಂಡಾಗ ಮಾತ್ರ ಪ್ರಶ್ನಾಸುರನ ಮಳೆಯ ಭಯಕ್ಕೆ ಮತ್ತೆ ಅಡಗಿಕೊಳ್ಳಬೇಕು ಅನಿಸುತ್ತಿತ್ತು!

ಆಗ ಬಾಯಿಲೆಕ್ಕ ಅಂದರೆ ಸಿಕ್ಕಾಪಟ್ಟೆ ಭೀತಿಯಿದ್ದರೂ ಪೆನ್ನು ಪೇಪರು ಇಲ್ಲದೆ ಕ್ಷಣದಲ್ಲೇ ಮನಸ್ಸಿನಲ್ಲಿ ಕೂಡಿ, ಕಳೆದು, ಗುಣಿಸಿ, ಭಾಗಿಸುವ ಧೈರ್ಯ, ನೈಪುಣ್ಯ ಎರಡೂ ಇದ್ದವು. ಬರೆದು ಲೆಕ್ಕ ಮಾಡಲು ಬಿಡದ ಅಂತಹ ಸವಾಲುಗಳು

ಮುಂದಿನ ಬದುಕಿಗೆ ನಮ್ಮನ್ನು ಸಜ್ಜು ಮಾಡುತ್ತವೆ ಎಂಬುದು ಗೊತ್ತಿಲ್ಲದೇ ಬರೀ ಗಾಬರಿಬೀಳುತ್ತಿದ್ದೆ.

ಬಾಯಿಲೆಕ್ಕವೆಂಬ ಭೂತ ನನ್ನನ್ನು ಕಾಡದ ದಿನವೇ ಇಲ್ಲ. ಬಾಲ್ಯದಲ್ಲಿ "ಜೀನಾ ಹರಾಮ್" ಮಾಡಿದವರು ಯಾರೆಂದರೆ ಅಂಥ ಲೆಕ್ಕ ಹಾಕಿದವರು ಮತ್ತು ಹಾಕಿ ಬೆಕ್ಕಿನ ಹಾಗೆ ಚೆಲ್ಲಾಟ ಮಾಡುವವರು! ಕೈಗೆ ಸಿಕ್ಕ ಮಕ್ಕಳು ಮಾತ್ರ ಇಲಿಯ ಹಾಗೆ ಬಿಲ ಸೇರಲು ಕೈಕಾಲು ಬಡಿದುಕೊಂಡು ಒದ್ದಾಡುತ್ತಿದ್ದರು.

ಲೆಕ್ಕವೆಂದರೆ ಬಿಡದೆ ಬಿಕ್ಕುವೆನಯ್ಯ
ಬೇರೀಜು ವಜಾಬಾಕಿಗಳೆ ಭೂತಗಳಯ್ಯ
ಬೆಂಬಿಡದೆ ಕಾಡಲು ದಾರಿ ಎಲ್ಲಿಹುದಯ್ಯ?
ಗಣಿತವೆಂಬೊ ತಗಣೆ ಕಚ್ಚಿರಲು
ನೀನಲ್ಲದೆ ಕಾವರಾರೋ ಎನ್ನ
ಅಂತರಾಧೀಶ!'

ಎಂದು ನನಗೆ ನಾನೇ ವಚನ ಹಾಡಿಕೊಂಡು ಅಳುತ್ತ ನನ್ನ ಬೆನ್ನು ಹತ್ತಿದ ಲೆಕ್ಕದ ಭೂತದ ಕಾಟವನ್ನು ನಿಮ್ಮಲ್ಲಿ ಅರುಹಿದ್ದೇನೆ.

ನಿಮ್ಮ ಸುತ್ತ ಮಕ್ಕಳಿದ್ದಾರಾ ನೋಡಿ ಮತ್ತೆ. ಶುರುವಾಗಲಿ ಬಾಯಿಲೆಕ್ಕ!

■



## "ಮುಷ್ಟಿ fund"

✍ರಾಮಮೂರ್ತಿ. ಎಸ್.ಕೆ.

YouTube ನಲ್ಲಿ ಶ್ರೀ ಶಂಕರಾಚಾರ್ಯ ವಿರಚಿತ ಭಜ ಗೋವಿಂದಂ ಭಜ ಗೋವಿಂದಂ (ಮೋಹಮುದ್ಗರ) ಬರ್ತಿತ್ತು. ಗೇಯಂ ಗೀತಾನಾಮಸಹಸ್ರಂ... ಶುರುವಾದಾಗ ಮನಸ್ಸು ಅಲ್ಲೇ ಸ್ವಲ್ಪ ನಿಲ್ತು.

ಗೇಯಂ ಗೀತಾನಾಮಸಹಸ್ರಂ ಧ್ಯೇಯಂ ಶ್ರೀಪತಿರೂಪಮಜಸ್ರಮ್ । ನೇಯಂ ಸಜ್ಜನಸಂಗೇ ಚಿತ್ತಂ ದೇಯಂ ದೀನಜನಾಯ ಚ ವಿತ್ತಮ್ ॥

ಭಗವದ್ಗೀತೆಯನ್ನು, ಭಗವಂತನ ಸಹಸ್ರನಾಮಗಳನ್ನು ಹಾಡಿ ಪಾರಾಯಣ ಮಾಡುತ್ತಿರಬೇಕು. ಶ್ರೀಪತಿಯ ದಿವ್ಯರೂಪವನ್ನು ಸತತವೂ ಧ್ಯಾನಿಸುತ್ತಿರಬೇಕು.

ಸಜ್ಜನರ ಸಹವಾಸದಲ್ಲಿರುವಂತೆ ಮನಸ್ಸನ್ನು ಪ್ರೇರಿಸಬೇಕು. ದೀನ ಜನರಿಗೆ ದಾನ/ಹಣದ ಸಹಾಯವನ್ನು ಮಾಡಬೇಕು ಅಂತ ಅರ್ಥ ಆಲ್ವಾ?. ನನ್ನ ಮನಸ್ಸು ಸ್ವಲ್ಪ ಹಿಂದಕ್ಕೆ ಹೋಗಿದ್ದು ಇಲ್ಲೇ. ಬೇರೆ ಎಲ್ಲಾ ಸರಿ ದಾನ ಅಂದಾಗ ಜ್ಞಾಪಕಕ್ಕೆ ಬಂದಿದ್ದು ನಮ್ಮ ಅಜ್ಜಿ, ನಮ್ಮ ಅಮ್ಮ, ರತ್ನಾ ಹಿಂದೆಲ್ಲಾ ಅನುಸರಿಸ್ತಾ ಇದ್ದ ಒಂದು ಪದ್ಧತಿ. ಆಗಿನ ಕಷ್ಟ ಕಾರ್ಪಣ್ಯದ ದಿನಗಳಲ್ಲೂ, ನಮ್ಮಲ್ಲಿರುವುದರಲ್ಲೇ ಸ್ವಲ್ಪಭಾಗವನ್ನು ಅಗತ್ಯ ಅವಶ್ಯಕತೆ ಇರುವವರಿಗೆ, ದಾನ ಮಾಡುವ ಅಭ್ಯಾಸ ಹೇಗೆ ನಮ್ಮದಾಗಿಸಿಕೊಳ್ಳಬಹುದು, ನಮ್ಮಲ್ಲಿ ಹೆಚ್ಚಿಗೆ ಇದ್ರೆ ಮಾತ್ರ ದಾನ ಮಾಡ್ಬೇಕು ಅಂತ ಅಲ್ಲ, ಇದ್ದಿದ್ರಲ್ಲೇ ಹೇಗೆ ಮಾಡ ಬಹುದು ಅನ್ನೋದಕ್ಕೆ ಒಂದು ಉದಾಹರಣೆ.

ಇವ್ರೆಲ್ಲಾ ನಡೆಸಿಕೊಂಡು ಬರ್ತಿದ್ದ ಒಂದು ಪದ್ಧತಿ ಅಂದ್ರೆ, ಅಡಿಗೆ ಮಾಡುವಾಗ ಅಕ್ಕಿ ತೊಳೆಯೋದಕ್ಕೆ ಮುಂಚೆ ಒಂದು ಮುಷ್ಟಿ ಹಿಡಿ ಅಕ್ಕಿಯನ್ನೂ, ಬೇಳೆಯನ್ನು ತೊಳೆಯೋದಕ್ಕೆ ಮುಂಚೆ ಒಂದು ಸ್ಪೂನ್ ನಷ್ಟು ಬೇಳೆಯನ್ನೂ ಎರಡು ಬೇರೆ ಬೇರೆ ಡಬ್ಬಗಳಲ್ಲಿ ಹಾಕಿಡ್ತಿದ್ರು. ಇದನ್ನ ನಾವೆಲ್ಲಾ ತಮಾಷೆಗೆ "ಮುಷ್ಟಿ fund" ಅಂತಿದ್ವಿ. ಇದನ್ನು ಭದ್ರಾವತಿಯಲ್ಲಿ ರತ್ನನೂ ಮಾಡ್ತಿದ್ಲು, ಈಗ ಯಾಕೆ ಮಾಡ್ತಿಲ್ಲ ಗೊತ್ತಿಲ್ಲ. ಈ ಪದ್ಧತಿ ಆಗೆಲ್ಲಾ ಹಲವಾರು ಮನೆಗಳಲ್ಲಿಯೂ ಇತ್ತು. ಅದು ಅಷ್ಟೋ ಇಷ್ಟೋ ಆದಾಗ, ಯಾವುದಾದರೂ ದೇವಸ್ಥಾನದಲ್ಲಿ ನಡೀತಿದ್ದ functionಗೋ, ಆಗೆಲ್ಲ ಬರ್ತಿದ್ದ ತೀರ್ಥ ಯಾತ್ರಿಕರಿಗೋ, ಊಂಛ ವೃತ್ತಿ, ಮಧುಕರ ವೃತ್ತಿ ಅಂತೆಲ್ಲಾ ಬರ್ತಿದ್ದ ಸಂತರೇತ್ಯಾದಿಗಳಿಗೋ, ಮನೆಗೆ ಆಗೀಗ ಬರ್ತಾ ಇದ್ದ ದಾಸರುಗಳಿಗೋ ಕೊಡುವ ಪದ್ಧತಿ ಅದಾಗಿತ್ತು. (ಪೇಟ ಸುತ್ಕೊಂಡು, ದಾಸರ ಪದಗಳನ್ನ ಹೇಳ್ಕೊಂಡು, ಗೆಜ್ಜೆ ಕಟ್ಕೊಂಡು, ತಂಬೂರಿ ಮೀಟ್ತಾ, ಕುಣೀತಾ ಆಗೀಗ ಮನೆ ಮನೆಗೆ ಬರ್ತಿದ್ದ ಆ ದಾಸರುಗಳು – ಅವರ ಆ ಒಳ್ಳೆಯ ಕಂಠ ಸಿರಿ, ಹಾಡುತ್ತಿದ್ದ ಮಾಧುರ್ಯಪೂರ್ಣ ದೇವರನಾಮಗಳು, ಕೇಳಕ್ಕೂ ನೋಡಕ್ಕೂ ಹಿತವೆನಿಸ್ತಿತ್ತು. – ಇದು ಕೆಲವರಿಗಾದ್ರೂ ನಮ್ಮ ಕಾಲದವರಿಗೆ ಜ್ಞಾಪಕದಲ್ಲಿರಬಹುದು). ಪುರಂದರದಾಸರ–"ಮಧುಕರ ವೃತ್ತಿ ಎನ್ನದು ಬಲು ಚೆನ್ನದು, ಪದುಮನಾಭನ ಪಾದ ಪದುಮ ಮಧುಪವೆಂಬ..." ಎಂಬ ಕೀರ್ತನೆ ಜ್ಞಾಪಕಕ್ಕೆ ಬರಬಹುದೇನೋ –

ಈ ಪದ್ಧತಿಯನ್ನ ಈಗಲೂ ಅನುಸರಿಸ ಬಹುದಾದ ಸುಲಭ ಮಾರ್ಗ ಅನ್ಸುತ್ತೆ. ಇದರ ವಿಶೇಷ ಅಂದ್ರೆ, ನಾವೆಲ್ಲಾ (ಮನೆಯವರು) ತಿಂದುಣ್ಣುವುದರಲ್ಲಿ ಸ್ವಲ್ಪಭಾಗ ದಾನ ಮಾಡ್ತಿದೀವಿ ಅನ್ನೋ ಭಾವ ನಮ್ಮದಾಗುತ್ತೆ ಅಲ್ವಾ.

ನಾವು, ದಾನ ಧರ್ಮ ಮಾಡ್ತಾನೆ ಇಲ್ವೇ?. ಖಂಡಿತಾ ಮಾಡ್ತಿದೀವಿ. ದೇವಸ್ಥಾನ, ಮಠ ಮಂದಿರಗಳಿಗೆ, ಸಂಸ್ಥೆಗಳಿಗೆ ಧಾರಾಳವಾಗಿಯೇ ಕೊಡ್ತೀವಿ. ಕೆಲವೊಮ್ಮೆ ಅದು ನಮ್ಮ ದೊಡ್ಡಸ್ತಿಕೆಗೋ, ಪ್ರತಿಷ್ಠೆಗೋ ಆಗಿರಲೂಬಹುದು, ನಮ್ಮಲ್ಲಿ ಇದೆ ಕೊಡ್ತೀವಿ ಅನ್ನುವ ಭಾವವು ನಮ್ಮದಾಗಿರಬಹುದು. ಆದ್ರೆ ಈ "ಮುಷ್ಠಿ fund" (ಇದನ್ನ ಹೀಗೇ ಕರೆಯೋಣ, ನಂಗೆ ಸೂಕ್ತ ಪದ ಸಿಕ್ತಿಲ್ಲ) ಹಾಗಲ್ಲ ಅಲ್ವಾ. ನಾವು ಮಾಡುವ ಊಟದ ಸ್ವಲ್ಪ ಭಾಗವೇ ಇದಾಗಿರುತ್ತೆ, ಅದನ್ನ ಕೊಡ್ತಿದೀವಿ ಅನ್ನುವ ಭಾವ ನಮ್ದಾಗಿರುತ್ತೆ ಅಲ್ವಾ.

■

## ಡಾರ್ವಿನ್ ದರ್ಶನ

**(ಕೊರವಂಜಿಯಲ್ಲಿ ನಾ, ಕಸ್ತೂರಿ ಬರೆದ ಕವನ)**

ಡಾರ್ವಿನೇನು ಹೇಳಿದ ? ಕಪಿಗಳ ಸಂತತಿ ಎಂತಲೇ ?
ಸುಳ್ಳು ! ಸುಳ್ಳು ! ನಿಜವನರಿಯಲಿಲ್ಲ ಪಾಪ ಅವರು.
ಹಲ್ಲು ಕಿರಿಯುವಾಗ ನಾವು ಕಪಿಯ ಹೋಲಬಹುದು ಸರಿ !
ಆದರೇನು ? ಬರಿಯ ಕಪಿಯೆ ನಾವು ? ಇಲ್ಲ, ಇಲ್ಲ.
ಹಸಿದು ಎಲೆಯ ಮುಂದೆ ಕೂತು, ಬಾಯ ಬಿಲದ ಮೂಲಕ
ಕಸವ ಭರ್ತಿಮಾಡುವಾಗ........ತೋಳ , ಅಲ್ಲವೆ ?
ದ್ವೇಷವನ್ನ ಒಳಗೆ ಬೆಳೆಸಿ ಎಂದೊ ಹೇಗೊ ತೀರಿಸುವಾ ಆನೆ ;
ನಾವು ಕೂಗದಿದ್ದರೆ ಸೂರ್ಯ ಮೂಡಲೊಲ್ಲ ಎಂಬ ಕೋಳಿ ;
ಪವರು ದೊರೆಯೆ ಚೇಳು ; ಕಾಯ? ಹಂದಿ ; ಜರೂ ? ನವಿಲು ;
ಕರಡಿ ಪೂಜೆ ವೇಳೆಗೆ ; ಎರಡು ಜಿಹ್ವೆ ಇರುವ ಕೋಬ್ರ ;
ಜಿಂಕೆ ಹಿಂಡಿನಂತೆ ಇರುವ ಮಂಕ ಸಂಕುಲದ ನಡುವೆ ಸಿಂಹ ;
ಹೆದರಿ ಸಾಯ್ವ ಕುರಿ ; ಗಾಣದೆತ್ತು ; ಬಾಲಹೋದ ನರಿಯು ;
ಎಂಜಲೆಂದರದಕೆ ಹಾರಿ ಸ್ವಂತ ಜಾತಿ ವೈರ ಬೆಳೆಸಿ
ಬೊಗಳಿ ಬಾಲ ಮುದುರುವಾ ನಾಯಿ ; ಸಿಂಬ್ಳದಲ್ಲಿ ಬಿದ್ದ ನೊಣ ;
ಬೆಲ್ಲವೆಂದರದನು ಮುತ್ತಿಕೊಂಬ ಇರುವೆ ; ಕತ್ತೆ ಎಂದೇ
ಕರೆವರೆಮ್ಮನು ತಾಯಿ ತಂದೆ ಬಾಸು ಗುರುಗಳೆಲ್ಲ ಇಂದಿಗೂ ;
ಕಣ್ಣು ತೆರೆದೇ ಹಾಲು ಕುಡಿವಾ ಬೆಕ್ಕು ;
ಸಾಲದೇ ನಿದರ್ಶನ ? ಡಾರ್ವಿನ್ನನ ದರ್ಶನ
ಅರ್ಧ ಕುರುಡು , ಅರ್ಧ ಬರಡು,
ಸುಳ್ಳು, ಸುಳ್ಳು ! ನಿಜಕೆ ದೂರ.

## "ಬಾಡಿಗೆಗೆ ನಾಯಿ"

✍ಅರವಿಂದ. ಜಿ. ಜೋಷಿ

ಮನೆಯ ಜಗುಲಿಯ ಮೇಲೆ ಕುಳಿತು, ಆ ದಿನದ ಸ್ಥಳೀಯ ದಿನ ಪತ್ರಿಕೆ ಓದುತ್ತಿದ್ದ ಪಮ್ಮೀ, ಕೊನೆಯ ಪುಟದ ಒಂದು ಬಾಕ್ಸ್ ನಲ್ಲಿ "ಬಾಡಿಗೆಗೆ–ನಾಯಿ" ಎನ್ನುವ ಜಾಹಿರಾತು ನೋಡಿ ಕುಳಿತಲ್ಲಿಂದಲ್ಲೇ–ಪಾಟ್‌ಗಳಿಗೆ ನೀರು ಉಣಿಸುತ್ತಿದ್ದ ಪತಿ ಪರಮೇಶಿಗೆ– "ರೀ.. ನೋಡ್ರಿ ಇಲ್ಲಿ ಬಾಡಿಗೆಗೆ ನಾಯಿ ಕೊಡ್ತಾರಂತೆ" ಎಂದು ಕೂಗಿ ಹೇಳಿದಾಗ ಆತ ಆಶ್ಚರ್ಯ ದಿಂದ ಹುಬ್ಬೇರಿಸುತ್ತ– "ಏನೂ.. ಬಾಡಿಗೆಗೆ ನಾಯಿ ನಾ..?

ಅಲ್ವೇ ಈ ತನಕ ನಾನು ಬಾಡಿಗೆ ತಾಯಿ, ಬಾಡಿಗೆಗೆ ಮನೆ, ಬಾಡಿಗೆಗೆ ವಾಹನ ಅಂತೆಲ್ಲ ಕೇಳಿದ್ದೆ ಆದ್ರೆ ಇದೆನೋ ವಿಚಿತ್ರ ವಾಗಿದೆಯಲ್ಲ.. ಸರಿಯಾಗಿ ಓದಿ ಹೇಳು" ಎಂದ. ಅದಕ್ಕೆ ಪಮ್ಮೀ ಅದೇ ಸ್ವರದಲ್ಲಿ– "ರೀ.. ನಾನೇನು ಸುಳ್ಳು ಹೇಳ್ತಿದ್ದೀನಾ..? ಬೇಕಿದ್ರೆ ಬಂದು ನೋಡಿ ಇಲ್ಲಿ" ಎಂದು ಉತ್ತರಿಸಿದಳು. "ಇನ್ಯಾಕೆ ಇವಳೊಂದಿಗೆ ವಾದ" ಎಂದು ಮನದಲ್ಲೇ ಅಂದು ಕೊಂಡವ ಸ್ವಲ್ಪ ಜೋರಾಗಿ ಓದಿ ಹೇಳ್ತಿಯಾ..?" ಎಂದದ್ದೇ ಸಾಕು ಬೀದಿಯಲ್ಲಿ ಓಡಾಡುವ ಜನಕ್ಕೆಲ್ಲ ಕೇಳುವ ಹಾಗೆ,

"ನಮ್ಮಲ್ಲಿ ಎಲ್ಲಾ ಜಾತಿ/ತಳಿಯ ಆರೋಗ್ಯಕರ ನಾಯಿಗಳು ಬಾಡಿಗೆಗೆ ದೊರೆಯುತ್ತವೆ, ಆಸಕ್ತಿ ಉಳ್ಳವರು ಮೊಬೈಲ್ ಸಂಖ್ಯೆ.....ಯನ್ನು ಸಂಪರ್ಕಿಸಬಹುದು" ಎಂದು ಓದಿ ಮುಗಿಸಿ ಅದರ ಬೆನ್ನಲ್ಲೇ "ಸಧ್ಯ ನನ್ನ ಮನದ ಕೊರಗು ಆತನಿಗೆ ಕೇಳಿಸಿತ್ತೇನೋ.. ಎಂದು ಎಂದಾಗ,ಸುಮ್ಮನಿರಲಾರದ ಪರಮೇಶಿ "ಅಂಥದ್ದೇನೇ ನಿನ್ನ ಕೊರಗು" ಎಂದು ಕಿಚಾಯಿಸಿದ. ತುಸು ಮುನಿಸಿಕೊಂಡಂತೆ ಆಕೆ" ಮತ್ತಿನ್ನೇನ್ರೀ... ಈ ಮನೆಗೆ ಬಂದಾಗ್ನಿಂದಲೂ ನಿತ್ಯ ಬೆಳಗ್ಗೆ ಸಂಜೆ.. ಒಂದು ನಾಯಿ ತಕ್ಕೊಂಡು ಬನ್ನಿ.. ಬನ್ನಿ ಅಂತ ಹೇಳ್ತಾನೇ ಇದ್ದೀನಿ ಆದ್ರೆ ನೀವು ಮಾತ್ರ ನನ್ನ ಮಾತನ್ನ ಒಂದು ಕಿವಿಲಿ ಕೇಳ್ಸಕ್ಕೊಂಡು ಮತ್ತೊಂದು ಕಿವಿಲಿ ಬಿಟ್ ಬಿಡ್ತಿರ., ಒಂಟಿ ಮನೆ–ಸುತ್ಲೂ ಕಾಡು ಬೆಳ್ದಂಗೆ ಗಿಡ ಗಂಟಿ ಬೆಳ್ದು ನಿಂತಿವೆ ನಾಳೆ ಏನಾದ್ರೂ ಹೆಚ್ಚು ಕಮ್ಮಿ ಆದ್ರೆ ಯಾರ್ ಬರ್ತಾರೆ...,ಸ್ವಲ್ಪಾನೂ ಜವಾಬ್ದಾರಿ ಇಲ್ಲ,ಮೂರ್ಹೋತ್ತು ನಿಮ್ಮ ಕೆಲಸ ಲ್ಯಾಪ್ ಟಾಪ್ ಆಯ್ತು...."ಎಂದು ಪುಷ್ಪಾರ್ಚನೆ ಶುರು ಮಾಡಿದಳು. ಇದನ್ನು ಕೆಳಿಸಿಕೊಂಡ ಪರಮೇಶಿ ಇನ್ನು ಈ ವಿಷಯಕ್ಕೆ ಸೂಕ್ತವಾಗಿ ಪ್ರತಿಕ್ರಿಯೆ ನೀಡಲು ಹಿಂದೇಟು ಹಾಕಿದರೆ ಫಿನಿಷ್.. ಪ್ರಸಂಗ ಎಲ್ಲಿಂದ ಎಲ್ಲೆಲ್ಲಿಗೋ ಹೋಗಿ ರಾಮಾಯಣ ಮಹಾಭಾರತ ಆಗುವುದು ಗ್ಯಾರಂಟಿ ಎಂಬ ಸೂಕ್ಷ್ಮ ಅರಿತವ "ಆಯ್ತು.. ಅದೆಲ್ಲಿ ಬರತ್ತೆ ಅಂತ ವಿಚಾರ ಮಾಡು" ಎಂದು ಹೇಳಿದ್ದೇ ತಡ ಪಕ್ಕದಲ್ಲಿದ್ದ ಮೊಬೈಲ್ ಎತ್ತಿಕೊಂಡು ಆ ಜಾಹಿರಾತುದಾರನಿಗೆ ಫೋನಾಯಿಸಿ "ನಮಸ್ಕಾರ್ ಸಾರ್..ಈ ದಿನದ ಪತ್ರಿಕೆಯಲ್ಲಿ ತಮ್ಮ ಜಾಹೀರಾತು ನೋಡಿದೆ ಸಂತೋಷ ಆಯ್ತು, ನಿಮ್ಮಲ್ಲಿ ಯಾವ ಯಾವ ಜಾತಿ ಐ ಮೀನ್ ತಳಿಯ ನಾಯಿಗಳಿವೆ? ಬಾಡಿಗೆ ಎಷ್ಟು ಅನ್ನೊದನ್ನ ದಯವಿಟ್ಟು ಸ್ವಲ್ಪ ಡಿಟೇಲಾಗಿ ಹೇಳ್ತಿರಾ...?"ಎಂದಳು. ಆ ಬದಿಯಿಂದ ಆತ"ಮೇಡಂ ಅದೆಲ್ಲಾ ಡಿಟೇಲ್ಸ ತುಂಬಾನೇ ಇದೆ, ಫೋನ್ ನಲ್ಲಿ ಹೇಳೋಕಾಗಲ್ಲ ನಮ್ಮ ಅಡ್ರೆಸ್ ಕೊಡ್ತೆನೆ ಬರ್ಕೊಳ್ಳಿ" ಎಂದು ವಿಳಾಸ ಹೇಳಿ ಕಾಲ್ ಕಟ್ ಮಾಡಿದ.ಪಮ್ಮೀ ಈ ವಿಷಯವನ್ನು ಯಥಾವತ್ತಾಗಿ ಪತಿಯ ಕಿವಿಗೆ ವರ್ಗಾಯಿಸಿದಳು.ಆಗ ಆತ

"ಆಯ್ತು ಬಿಡು.. ಸಂಜೆ ಹೋಗಿ ಬರೋಣ"ಎಂದು ಭರವಸೆ ನೀಡಿದ.

ಆ ದಿನ ಸಾಯಂಕಾಲದ ಕಾಫೀ ಸೇವನೆ ನಂತರ ತನ್ನ ಪತ್ನಿಯನ್ನು ಸ್ಕೂಟರ್ ಮೇಲೆ ಕೂರಿಸಿಕೊಂಡು "ಬಾಡಿಗೆಗೆ ನಾಯಿ" ವಿಳಾಸದ ಜಾಗಕ್ಕೆ ತಲುಪಿದ.ಮನೆಯ ಕಾಂಪೌಂಡ್ ಮೂರೂ ಬದಿ ದಪ್ಪಕ್ಷರಗಳಲ್ಲಿ "ನಾಯಿಗಳು ಬಾಡಿಗೆಗೆ ದೊರೆಯುತ್ತವೆ" ಎನ್ನುವ ಬೋರ್ಡ್ ಕಂಡು, ಗಾಡಿ ಪಾರ್ಕ್ ಮಾಡಿ, ಒಮ್ಮೆ ಅತ್ತಿತ್ತ ಕಣ್ಣಾಡಿಸುತ್ತ ತನ್ನಷ್ಟಕ್ಕೆ ತಾನು "ಅರೇ...ಮನೆ ನೋಡಿದ್ರೆ ಇಷ್ಟು ಚಿಕ್ಕದಾಗಿದೆ.. ಅಷ್ಟೊಂದು ನಾಯಿಗಳೆಲ್ಲಿವೆ...?" ಎಂದು ಅನುಮಾನದಿಂದ ಒಟಗುಡುತ್ತಿದ್ದಾಗ ಆತನ ಅರ್ಧಾಂಗಿ.. "ರೀ... ಏನು ಹುಡಕ್ತಿದ್ದೀರಾ..? ಇದೇ ಬನ್ನೀ" ಎನ್ನುತ್ತ ಒಳಕ್ಕೆ ಕರೆತಂದಳು.ವೆರಾಂಡಾದಲ್ಲಿ ಒಂದು ದೊಡ್ಡ ಟೇಬಲ್, ಅದರ ಮೇಲೆ ಅದೇ ಅಳತೆಯ ಗಾಜು, ಅದರಡಿ ನಾನಾ ವಿಧದ ನಾಯಿಗಳ ಚಿತ್ರಗಳಿದ್ದವು. ಟೇಬಲ್‌ನ ಎರಡೂ ಬಾಜು ಇಟ್ಟಿದ್ದ ಟ್ರೇ ನಲ್ಲಿ ಒಂದಿಷ್ಟು ಖಾಲೀ ಫಾರ್ಮ್,ಮತ್ತಿನ್ನೇನೊ ಕಾಗದ ಗಳಿದ್ದವು. ಆ ಬದಿಯ ಕುರ್ಚಿ ಮೇಲೆ ಸುಖಾಸೀನನಾಗಿ ಕುಳಿತ ಮಧ್ಯೆ ವಯಸ್ಸಿನ ಧಡೂತಿ ಆಸಾಮಿ ಇವರನ್ನು ಕಂಡು ಮುಗುಳು ನಗೆ ಬೀರುತ್ತ"ಬನ್ನಿ ಮೇಡಂ, ಬನ್ನಿ ಸಾರ್, ಎನ್ನುತ್ತ ತನ್ನ ಎದುರಿಗಿದ್ದ ಕುರ್ಚಿಯತ್ತ ಕೈ ತೋರಿಸಿದ.ಇಬ್ಬರೂ ಕುಳಿತ ನಂತರ ಆತ ಮತ್ತೆ"ನಮಸ್ತೆ ಮೇಡಂ... ತಾವು ಪ್ರಮಿಳಾದೇವಿ.."ಎಂದಾಗ, ಪಮ್ಮಿ "ಹಾಂ ಹೌದು.. ಇವ್ರು ನನ್ನ ಪತಿ ಪರಮೇಶಿ, ಬೆಳಿಗ್ಗೆ ಕಾಲ್ ಮಾಡಿದ್ದೆ.."ಎಂದಳು.

ಗಂಟಲು ಸರಿಪಡಿಸಿಕೊಂಡು ಆತ ಇಪ್ಪತ್ತು ನಿಮಿಷಗಳ ತನಕ ತನ್ನಲ್ಲಿರುವ ವಿವಿಧ ನಾಯಿಗಳ ಫೋಟೋ ತೋರಿಸುತ್ತ ವಿವರ ನೀಡತೊಡಗಿದ.ಆತನ ಮಾತು.. ಫೋಟೋ ಗಳಿಂದ ಇಂಪ್ರೆಸ್ ಆದ ಪಮ್ಮೀ ಈ ಮುಧೋಳ್ ತಳಿ ಬೇಟೆ ನಾಯಿ ಹೇಗೆ..?"ಎಂದು ಕೇಳಿದ್ದೇ ತಡ ಆಸಾಮಿ ಅದರ ಮೇಲೆ ಇಪ್ಪತ್ತು ನಿಮಿಷ ಕೊರೆದ.

ಪಮ್ಮೀ ತನ್ನ ಮನೆಯ ಸ್ಥಿತಿ ಗತಿ ವಿವರಿಸಿದ ನಂತರ ಆತ"ಇಲ್ಲಾ ಮೇಡಂ ಬೇರೆ ಏನೂ ಆಯ್ಕೆ ಮಾಡಬೇಡಿ ನಿಮ್ಮ ಅವಶ್ಯಕತೆಗೆ ಮುಧೋಳ್ ತಳಿ ನಾಯಿನೇ ಉತ್ತಮ"ಎನ್ನುವ ಹುಳು ಅವಳ ತಲೆಯೊಳಗೆ ಬಿಟ್ಟ. ಈ ಮಧ್ಯ ಪರಮೇಶಿ ಬಾಯಿಹಾಕಿ.."ಸಾರ್ ಏನದರ ವಿಶೇಷತೆ?" ಎಂದು ಪ್ರಶ್ನಿಸಿದಾಗ ಪಮ್ಮೀ ಆತನ ಭುಜ ಚಿವುಟುತ್ತ" ರೀ...ತಾಳ್ರೀ.. ಅವ್ರು ಅದನ್ನೇ ಹೇಳ್ತಿದ್ದಾರೆ"ಎನ್ನುತ್ತ ಮಾಲಿಕನ ಕಡೆಗೆ ತಿರುಗಿ "ಸಾರ್ ನೀವು ಮುಂದುವರೆಸಿ ಇವ್ರು ಸ್ವಲ್ಪ ಹಾಗೆನೇ..."ಎಂದಾಗ ಬೆಪ್ಪಾದ ಪರಮೇಶಿ ಗೋಡೆಯ ಮೇಲಿದ್ದ ಮುಧೋಳ್ ತಳಿ ನಾಯಿಯ ಚಿತ್ರ ನೋಡತೊಡಗಿದ. ಪುನ: ಗಂಟಲು ಸರಿಪಡಿಸಿಕೊಡ ಮಾಲೀಕ ಅದರ ಬಗ್ಗೆ ಪಮ್ಮೀಗೆ ಹೇಳುತ್ತಿದ್ದಾಗ ಸ್ವಲ್ಪ ಆಚೆಗೆ ಎದ್ದು ಹೋಗಿ ಒಳಗೆ ಬಂದ ಪರಮೇಶಿ "ಸಾರ್ ಎಲ್ಲೀ ಒಂದೂ ನಾಯಿನೇ ಕಾಣ್ತಿಲ್ಲ"ಎಂದು ಅನುಮಾನದ ಪ್ರಶ್ನೆ ಇಟ್ಟ. ಅದಕ್ಕೆ ಆ ವ್ಯಕ್ತಿ "ಸಾರ್ ಅವೆಲ್ಲಾ ನಮ್ಮ ತೋಟದ ಮನೆ ಶೆಡ್ ನಲ್ಲಿವೆ" ಎಂದು ಆತನಿಗೆ ಉತ್ತರಿಸಿ, ಪಮ್ಮೀಯತ್ತ ತಿರುಗಿ–"ನೋಡಿ ಮೇಡಂ ನಮ್ಮಲ್ಲಿ ನಾಯಿ ಬಾಡಿಗೆಗೆ ಪಡೀ ಬೇಕೆಂದ್ರೆ ಕನಿಷ್ಠ ಮೂರು ತಿಂಗಳ ಅವಧಿಗೆ ಪಡೆಯಲೇಬೆಕು.– ಎಂದು ಹೇಳುತ್ತಿದ್ದವನ ಮಧ್ಯೆ ಪಮ್ಮೀ.. "ಈ ಮುಧೋಳ್ ತಳಿ ನಾಯಿ ಬಾಡಿಗೆ ತಿಂಗಳಿಗೆಷ್ಟು...? ಎಂದು ಕೇಳಿದಾಗ ಆತ "ಮೇಡಂ ಮುಧೋಳ್ ತಳಿ ನಾಯಿ ಬಾಡಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿ.ಇದರ ಹೊರತಾಗಿ ಮೂವತ್ತೈದು

ಸಾವಿರ ಮುಂಗಡ ಪಾವ್ತಿಬೇಕಾಗತ್ತೆ. ಈ ಮುಂಗಡ ಹಣ, ನೀವು ನಾಯಿ ವಾಪಸ್ ಕೊಟ್ಟ ದಿನದಂದೇ ನಿಮಗೆ ಮರುಪಾವ್ತಿಸಲಾಗುತ್ತೆ. ನಿಮಗೆ ನಾಯಿ ಹ್ಯಾಂಡೊವರ್ ಮಾಡುವಾಗ ಒಂದು ಸ್ಪೆಷಲ್ ಬೆಲ್ಟು ಹಾಗೂ ಒಳ್ಳೆ ಕ್ವಾಲಿಟಿ ಚೈನು ಫ್ರೀ ಆಗಿ ಕೊಡ್ತೆವೆ. ಅದಕ್ಕಿಂತ ಮುಖ್ಯ ವಿಷಯ ಏನೆಂದ್ರೆ ನಾವು ನಾಯಿ ಕೊಡುವಾಗ ಪಶುವೈದ್ಯರಿಂದ ಫಿಜಿಕಲ್ ಫಿಟ್ನೆಸ್ ಸರ್ಟಿಫಿಕೆಟು ಕೊಡ್ತೆವೆ, ಅದೇ ತರಹ ನೀವು ನಮಗೆ ನಾಯಿ ವಾಪಸ್ ಕೊಡುವ ದಿನ ಆಂದೇ ಮಾಡಿಸಿದ ಫಿಟ್ನೆಸ್ ಸರ್ಟಿಫಿಕೆಟು ಕೊಡಬೇಕು. ಬಾಡಿಗೆ ಅವಧಿಯಲ್ಲಿ ನಾಯಿಯ ಆರೊಗ್ಯದಲ್ಲೆನಾದರೂ ಏರು ಪೇರಾದರೆ ಅದೆಲ್ಲ ನಿಮ್ಮ ಜವಾಬ್ದಾರಿ. ಈ ಮುಧೋಳ್ ತಳಿ ನಾಯಿ ಸ್ವಲ್ಪ ಚುರುಕು ಜಾಸ್ತಿ, ಅದನ್ನು ಕಡ್ಡಾಯವಾಗಿ ಬೆಳಿಗ್ಗೆ ಮತ್ತು ಸಾಯಂಕಾಲ ಕನಿಷ್ಠ ಮೂರು ಕಿಮೀ ವಾಕ್ ಕರೆದೊಯ್ದು ಬೇಕು...

ಎನ್ನುತ್ತಿದ್ದಂತೆ ಪಮ್ಮಿ"ಅದೆಲ್ಲಾ ನಮ್ಮ ಯಜಮಾನ್ರು ನೋಡ್ಕೋತಾರೆ..ಅಲ್ವೇನ್ರೀ ಎಂದು ಪತಿಯ ಕಡೆ ಮುಖ ಮಾಡಿದಾಗ ಆತ ಹ್ಯಾಪು ಮೋರೆ ಹಾಕಿಕೊಂಡು ಮಾತನಾಡದೇ ಕುಳಿತಿದ್ದ.ಮುಂದುವರೆದ ಮಾಲೀಕ–"ಮೇಡಂ ಈ ನಾಯಿಗೆ ಬೆಳಿಗ್ಗೆ ಮತ್ತು ಸಾಯಂಕಾಲ ತಪ್ಪದೇ ಶುದ್ಧ ಒಂದು ಲೀಟರ್ ಹಾಲು ಕೊಡಬೇಕು. ಎರಡು ದಿನಕ್ಕೊಮ್ಮೆ  ಒಂದು ಕೆ.ಜಿ. ಮಾಂಸ ಕೊಡಬೇಕು" ಎಂದಾಗ ಪಮ್ಮೀ ಮುಖ ಕಿವುಚಿಕೊಳ್ಳುತ್ತ "ಛೀ.. ಸಾರ್ ನಾವು ಮಾಂಸಾ ಗೀಂಸಾ ತಿನ್ನೋವವರಲ್ಲ.." ಎಂದು ಅಸಹ್ಯ ಪಟ್ಟು ಹೇಳಿದ್ದನ್ನು ಕೇಳಿಸಿಕೊಂಡ ಆತ–"ಆಯ್ತು ಬಿಡಿ, ಮಾಂಸದ ಬದಲಿ ಆರು ಕೋಳಿ ಮೊಟ್ಟೆನಾದ್ರೂ ಕೊಡಲೇಬೇಕು"ಎಂದ.

ಇಷ್ಟೆಲ್ಲಾ ಪುರಾಣ ಹೇಳಿದ ನಂತರ ಆತ ನಿಮಗೆ ನಮ್ಮ ಕಂಡೀಷನ್ ಒಪ್ಪಿಗೆ ಆಗಿದೆ ಅಂತ ತಿಳ್ಕೊಂಡಿದ್ದೀನಿ"ಎನ್ನುತ್ತ ಅವಳ ಕೈಗೆ ಐದಾರು ನಮೂನೆ ಫಾರ್ಮ ಕೊಡುತ್ತ ಇದನ್ನು ಭರ್ತಿ ಮಾಡಿಕೊಡಿ ಎಂದವನು, ಪುನಃ ಮೇಡಂ ಮುಂಗಡ ಹಣ ಕ್ಯಾಶ್ ಆಂಡ್ ಕ್ಯಾರಿ"ಎಂದು ಹೇಳಿದಾಗ ಪಮ್ಮೀ "ಅಷ್ಟೊಂದು ಕ್ಯಾಶ್ ತಂದಿಲ್ವಲ್ಲಾ ಸಾರ್"ಎಂದಳು. ಅದಕ್ಕವ "ನೋಡಿ ನಮ್ಮ ಮನೆ ಹಿಂಭಾಗದಲ್ಲಿ ಎ.ಟಿ.ಎಂ.ಇದೆ ನಿಮ್ಮ ಯಜಮಾನ್ರಿಗೆ ಹೇಳಿ ತಂದು ಕೊಡ್ತಾರೆ"ಎಂದು ಹಲ್ಲು ಕಿರಿದ.ಅಷ್ಟಕ್ಕೇ ಪಮ್ಮೀ ಪರಮೇಶಿಯ ಭುಜ ತಿವಿದು "ಏನು ನೋಡ್ತಿದ್ದೀರಿ ಹೋಗ್ರೀ..."ಎಂದಾಗ ಪಾಪದ ಪರಮೇಶಿ ಮನದಲ್ಲೇ "ಒಳ್ಳೇ ಗ್ರಹಚಾರ ಬಂತಲ್ಲ"ಎಂದುಕೊಳ್ಳುತ್ತಲೇ ಎದ್ದು ಹೋಗಿ ದುಡ್ಡು ತಂದು ಆತನ ಕೈಗಿತ್ತ.ಭರ್ತಿ ಮಾಡಿದ ಫಾರ್ಮ ನೋಡಿ ಹಣ ಎಣಿಸಿಕೊಂಡ ಆತ  ಕಾಲು ಘಂಟೆ ಒಳಗೆಲ್ಲ ತೋಟದ ಮನೆಯಿಂದ ನಾಯಿ ತರಿಸಿ ಪಮ್ಮೀಯ ಸುಪರ್ದಿಗೆ ವಹಿಸಿ"ಆಲ್ ದಿ ಬೆಸ್ಟ್ "ಅಂತ ಹೇಳಿ ಅವರನ್ನು ಬೀಳ್ಕೊಟ್ಟ.

ಮರುದಿನ ಬೆಳಿಗ್ಗೆ ಪರಮೇಶಿ ಆರೋಗ್ಯ ಸರಿ ಇರದ ಪ್ರಯುಕ್ತ ನಾಯಿಗೆ ಹಾಲು ಕುಡಿಸಿ,ಪಮ್ಮೀಯೇ ಅದನ್ನು ವಾಕಿಂಗ್ ಗೆ ಎಳೆದೊಯ್ದಳು.ಸ್ವಲ್ಪ ದೂರ ಹೋಗುವಷ್ಟರಲ್ಲಿ ಪಮ್ಮೀಯ ಗೆಳತಿ ಎದುರಾದಾಗ ಅವಳೊಂದಿಗೆ ಮಾತಿಗೆ ನಿಂತಳು. ಅರ್ಧ ಘಂಟೆ ಕಳೆದರೂ ಮಾತು ಮುಂದುವರೆದಿತ್ತು.ಆದರೆ ನಾಯಿ ಮಾತ್ರ ಬೇಸರಿಸಿ "ಹೋಗೋಣ–ಹೋಗೋಣಾ.."ಎನ್ನುವಂತೆ ಜಗ್ಗಾಡತೊಡಗಿತು.

ಹೀಗೆ ಮತ್ತೆ ಹತ್ತು ನಿಮಿಷ ಕಳೆದ ನಂತರ ಇವರ ಪಕ್ಕದಲ್ಲೇ ಒಂದು ಓಪನ್ ಲಾರಿ ಬಂದು ನಿಂತಿತು.ಅದರೊಳಗೆ ಇದ್ದ ಇದೇ ಮಾದರಿಯ ಮತ್ತೊಂದು

ಮುಧೋಳ್ ತಳಿ, ಈ ನಾಯಿಯನ್ನು ಕಂಡು ಅಮಿತ ಉತ್ಸಾಹ ಗೊಂಡು ತನ್ನದೇ ಭಾಷೆಯಲ್ಲಿ ಮಾತನಾಡತೊಡಗಿದಾಗ, ನೋಡು ನೋಡುತ್ತಿದ್ದಂತೆ ಪಮ್ಮೀಯ ಕೈಯಿಂದ ಬಿಡಿಸಿಕೊಂಡು ಸರಪಳಿ ಸಮೇತ ಛಂಗ್ ಎಂದು ಹಾರಿ ನಾಯಿ ಲಾರಿಯೊಳಗೆ  ಕುಳಿತಿತು.ಅದನ್ನು ಕಂಡ ಪಮ್ಮೀ ಜೋರಾಗಿ "ಏ...ನಾಯೀ...ನಾಯೀ.." ಅಂತ ಬೊಬ್ಬೆ ಹಾಕುತ್ತಿದ್ದಂತೆ  ಸ್ಟಾರ್ಟ್ ಆದ ಲಾರಿ ಭರೋ ಎಂದು ವೇಗವಾಗಿ ಹೊರಟು ಹೋಯಿತು.

ಪೆಚ್ಚು ಮೋರೆ ಹಾಕಿಕೊಂಡು ಮನೆಗೆ ಬಂದ ಪಮ್ಮೀ ನಡೆದುದೆಲ್ಲವನ್ನೂ ಪತಿ ಪರಮೇಶಿಗೆ ತಿಳಿಸಿದಾಗ ಆತ ಅಷ್ಟೇ ಪೆಚ್ಚು ಮುಖ ದೊಂದಿಗೆ "ಈ ತಿಂಗ್ಳು ನನ್ನ ನಸೀಬಿನಲ್ಲಿ ಮೂವತ್ತೈದು ಸಾವಿರ ರೂಪಾಯಿ ಕಳ್ಕೊಬೇಕಂತ ಬರೆದಿತ್ತು, ಅದು ಹಾಗೇ ಆಯ್ತು.. ಅದಕ್ಕೆ ನೀನೇನು ಮಾಡ್ತಿ ಬಿಡು.." ಎಂದು ಸಂಕಟದ ಸ್ವರದಲ್ಲಿ ಸಮಾಧಾನಿಸಿದಾಗ ಆಕೆ.. "ರೀ...ಐ ಎಮ್ ವೆರಿ ವೆರಿ ಸ್ಸಾರಿ...." ಎನ್ನುತ್ತ ಅಲ್ಲಿಂದ ನಿರ್ಗಮಿಸಿದಳು.

■



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ಸ್ಟಾಕ್ ಮಾರ್ಕೆಟ್: ತಾಳ್ಮೆ ಇಲ್ಲದಿರುವವನ ಬಳಿ ಇರುವ ಹಣವನ್ನು ತಾಳ್ಮೆ ಇರುವವನಿಗೆ ವರ್ಗಾಯಿಸಲು ಇರುವ ಸಾಧನ.
- ✓ ಟು ಎ ಲಾರ್ಜ್ ಎಕ್ಸ್ಟೆಂಟ್ ಯು ಆರ್ ವಾಟ್ ಮೋಸ್ಟ್ ಅದರ್ಸ್ ಥಿಂಕ್ ಆಫ್ ಯು.
- ✓ ನಿಮ್ಮ ಪ್ರಯತ್ನಗಳ ಬಗ್ಗೆ ಯಾರಿಗೂ ಕಾಳಜಿ ಇರದು. ಫಲಿತಾಂಶವಷ್ಟೇ ಮುಖ್ಯ.
- ✓ ಇತರರಲ್ಲಿ ಒಳ್ಳೆಯತನವನ್ನು ನೀವು ಕಂಡುಕೊಳ್ಳುತ್ತಿದ್ದರೆ ನಿಮ್ಮ ಒಳ್ಳೆಯತನವೂ ನಿಮಗೆ ಕಾಣಿಸತೊಡಗುತ್ತದೆ.
- ✓ ಲೈಫ್ ಕೆನ್ ಓನ್ಲಿ ಬಿ ಅಂಡರ್‌ಸ್ಟುಡ್ ಬ್ಯಾಕ್‌ವರ್ಡ್ಸ್ ಬಟ್ ಇಟ್ ಮಸ್ಟ್ ಬಿ ಲಿವ್ಡ್ ಫಾರ್‌ವರ್ಡ್ಸ್.
- ✓ ವಿಶ್ವವನ್ನು ಬದಲಿಸಲು ನಿಮಗೆ ಸಾಧ್ಯವಾಗದಿರಬಹುದು ಆದರೆ ನಿಮ್ಮ ಸುತ್ತಮುತ್ತಲನ್ನು ನೀವು ಬದಲಿಸಬಹುದು.
- ✓ ಹಣದಿಂದ ಕೊಳ್ಳಬಹುದಾದ ಎಲ್ಲವೂ ನಮ್ಮ ಬಳಿ ಇದ್ದರೆ ಬೇರೆ ಇನ್ನೇನು ಮಾಡಲು ಉಳಿದಿರುತ್ತದೆ?
- ✓ ಐಡಿಯಾಸ್ ಡೋಂಟ್ ವರ್ಕ್ ವಿಥೌಟ್ ಯು ಡೂಯಿಂಗ್ ದಿ ವರ್ಕ್.
- ✓ ಸಂಬಂಧಗಳು ಎರಡು ಸೊನ್ನೆಗಳಂತಿರಬೇಕು. ಅವೆರಡನ್ನೂ ಸೇರಿಸಲು ಪ್ರಯತ್ನಿಸಿದರೆ ಮೊತ್ತ ಅಷ್ಟೇ ಇರುತ್ತದೆ, ಕಳೆಯಲು ಹೊರಟರೂ ಅಷ್ಟೇ ಇರುತ್ತದೆ. ಆದರೆ ಭಾಗಿಸಲು ಮಾತ್ರ ಅಸಾಧ್ಯ.
- ✓ ನಾಟ್ ಎವೆರಿಒನ್ ವಿಲ್ ಅಂಡರ್‌ಸ್ಟಾಂಡ್ ಯುವರ್ ಜರ್ನಿ. ಜಸ್ಟ್ ಬಿ ಯುವರ್ ಸೆಲ್ಫ್ ಅಂಡ್ ಕ್ಯಾರಿ ಆನ್.
- ✓ ನಿಮ್ಮ ಬಾಲ್ಯ ನಿಮ್ಮೊಡನೆ ಸದಾ ಇದ್ದರೆ ನಿಮಗೆ ವಯಸ್ಸಾಗುವದೇ ಇಲ್ಲ.
- ✓ ಅಗತ್ಯ ಅವಕಾಶ ಇಲ್ಲದೆ ಇದ್ದಾಗ ಹೇಗಿರ್ತಿಯೋ ಅಗತ್ಯ ಅವಕಾಶ ಬಂದಮೇಲೂ ಸಹ ಬದಲಾಗದೆ ಇರುವುದೇ ನಿಜವಾದ ವ್ಯಕ್ತಿತ್ವ.
- ✓ ಲೈಫ್ ಈಸ್ ನಾಟ್ ಅಬೌಟ್ ದಿ ಪೀಪಲ್ ಹು ಆಕ್ಟ್ ಟ್ರು ಟು ಯುವರ್ ಫೇಸ್. ಇಟ್ಸ್ ಅಬೌಟ್ ಪೀಪಲ್ ಹು ರಿಮೇನ್ ಟ್ರು ಬಿಹೈಂಡ್ ಯುವರ್ ಬ್ಯಾಕ್.
- ✓ ಅನೇಕ ವೇಳೆ ಇತರರ ತಪ್ಪುಗಳನ್ನು ಗಮನಿಸದಿರುವುದೇ ವಾಸಿ. ಅದರಿಂದ ನಿಮ್ಮ ಬಾಳಿನಲ್ಲಿ ಶಾಂತಿ ನೆಲೆಸುತ್ತದೆ. ಜನಗಳು ಬದಲಾಗರು. ಇತರರನ್ನು ಒಪ್ಪಿಕೊಳ್ಳುವ ನಿಮ್ಮ ಧೋರಣೆಯಲ್ಲಿ ಬದಲಾವಣೆ ಅಗತ್ಯವಾಗುತ್ತದೆ.

■

# ಮುನ್ನುಡಿಯೆಂಬ ಮುಳ್ಳಿನ ಹಾದಿ

**✍ಕೆ.ಎನ್. ಮಹಾಬಲ**

ನನ್ನ ಗೆಳೆಯನೊಬ್ಬ ಕವನ ಸಂಕಲನವೊಂದನ್ನು ಪ್ರಕಟಿಸಿರುವ ಸುದ್ದಿ ನನಗೆ ಅವನಿಂದಲೇ ತಿಳಿಯಿತು.ಮುಖತಃ ಭೇಟಿಯಾದಾಗಲೇ ಪ್ರತಿಯನ್ನು ಪಡೆಯಲೂ ಸೂಚಿಸಿದ್ದ ಅದರಂತೆ ಅವನಿಗೆ ಪೂರ್ವಸೂಚನೆ ಕೊಟ್ಟು ಒಂದು ದಿನ ಅವನ ಮನೆಗೆ ಹೋದೆ.ಕಾಫಿ ಇತ್ಯಾದಿ ಉಪಚಾರ,ಉಭಯಕುಶಲೋಪರಿ ವಿಚಾರಣೆ ಎಲ್ಲ ಆದ ಮೇಲೆ ಗೆಳೆಯ ಕವನದ ಪ್ರತಿ ತಂದು "ಅಭಿಪ್ರಾಯ ಬಯಸಿ "ಎಂಬ ಷರಾ ಬರೆದು ನನ್ನ ಕೈಗಿತ್ತ.

ನಾನು  ಸಾಮಾನ್ಯವಾಗಿ ಕವನ ಕುತೂಹಲನಾದದ್ದರಿಂದ ಸರಸರ ಪುಟ ತಿರುವಿ ಹಾಕಲು ಆರಂಭಿಸಿದೆ. ಮುಖಪುಟ, ಒಳಪುಟ, ತಾಂತ್ರಿಕ ಪುಟ, ಬೆನ್ನುಡಿ ಎಲ್ಲ ಅದರದರ ಸ್ಥಾನಗಳಲ್ಲಿ ಅಚ್ಚುಕಟ್ಟಾಗಿ ಇದ್ದವು. ಆದರೆ ಮುನ್ನುಡಿ ಕಾಣಲೇ ಇಲ್ಲ. ನಾನು "ಇದೇನಯ್ಯಾ ಕವಿಮಿತ್ರ? ಮುನ್ನುಡಿಯೇ ಇಲ್ಲವಲ್ಲ. ರವಿಯಾಕಾಶಕೆ ಭೂಷಣಂ ಎಂಬ ಹಾಗೇ ಕೃತಿಗೆ ಮುನ್ನುಡಿಯೇ ಭೂಷಣ ಅಲ್ಲವೇನಯ್ಯ.ಅದರಲ್ಲೂ ಕವನ ಸಂಕಲನಕ್ಕಂತೂ ಮುನ್ನುಡಿ ಅತ್ಯಗತ್ಯ. ಅಲ್ಲಿನ ಅರ್ಥವಾಗದ ಕವನಗಳಿಗೆ ಮುನ್ನುಡಿಯೇ ಒಂದು ಬಗೆ ದಾರಿದೀಪದಂತೆ." ಇನ್ನೂ ಹೇಳುವುದು ಬಾಕಿ ಇತ್ತು.ಅಷ್ಟರಲ್ಲಿ ಮಿತ್ರ ತಡೆದು "ನಿಲ್ಲಿಸಯ್ಯ ಸಾಕು.ಕವನ ಸಂಕಲನಕ್ಕೆ ಮುನ್ನುಡಿ ಮುಖ್ಯ ಒಪ್ಪಿದೆ.ಆದರೆ ನಾನೇನೂ ಮುನ್ನುಡಿಗಾಗಿ ಸೈಕಲ್ ಹೊಡೆದಿಲ್ಲ ಅಂತ ಅಂದುಕೊಂಡಿದ್ದೀಯಾ?" ಖಾರವಾಗಿ ಪ್ರಶ್ನಿಸಿದ.

"ಸೈಕಲ್ ಏಕಯ್ಯ ಮನೆಮುಂದೆ ಲಕ್ಷಣವಾಗಿ ಸ್ಕೂಟರ್ ಕಾರು ಎರಡೂ ನಿಂತಿರುವಾಗ?" ಗೊಂದಲದಿಂದ ಕೇಳಿದೆ. "ಅಯ್ಯಾ ಮಂಕುಸಾಂಬ್ರಾಣಿ! ಸೈಕಲ್ ಹೊಡೆಯೋದು ಅಂದ್ರೆ ಪಡ್ಡೆಗಳ ಭಾಷೇಲಿ ಕಷ್ಟ ಪಡೋದು ಅಂತ ಅಷ್ಟೂ ತಿಳೀದೆ' ಕೆರಳಿದ ಮಿತ್ರ.

"ಸರಿ ಇನ್ನು ಸುಮ್ಮನಿರುತ್ತೇನೆ .ಹೇಳುವವನಂಥವನಾಗು ನಿನ್ನ ಮುನ್ನಡಿಯ ವ್ಯಥೆ."ಎಂದೆ. "ಮೊದಲು ನಾನು ಮುನ್ನುಡಿಗಾಗಿ ಕೇಳಿದ್ದು. ಕವಿವಾಚಸ್ಪತಿಯವರನ್ನು. ಅವರು ಇಮೇಲ್ ನಲ್ಲಿ ಸುದೀರ್ಘವಾಗಿ ಉತ್ತರಿಸಿ 'ಮಗೂ ನಿನಗೆ ಮುನ್ನುಡಿ ಬರೆದುಕೊಡುವುದು ನನಗೆ ಸದಾ ಸಂತಸದ ವಿಷಯವೇ.ನಿಮ್ಮ ಬ್ಯಾಂಕಿನಲ್ಲಿ ನನ್ನ ಅಕೌಂಟ್ ಇದ್ದಾಗ  ಕೌಂಟರಿನಲ್ಲಿ ಎಷ್ಟು ಚೆನ್ನಾಗಿ ಸೇವೆ ಮಾಡಿದ್ದೆ. ನಾನು ಕಾರು ಕೊಳ್ಳಲು ನಿಮ್ಮ ಬ್ಯಾಂಕ್ ಸಾಲನೀಡಿದ್ದು ನಿನ್ನ ಪ್ರಯತ್ನದಿಂದಲೇ ಅಲ್ಲವೆ?ಆದರೆ ನಾನೀಗ ಅಮೆರಿಕಾ ಪ್ರವಾಸದಲ್ಲದ್ದೇನೆ.ಮಗಳು ಅಳಿಯ ನಿನ್ನೆ ಕ್ಯಾಲಿಫೋರ್ನಿಯಾದ ರೆಡ್ ವುಡ್ ಕಾಡಿಗೆ ಕರೆದುಕೊಂಡು ಹೋಗಿದ್ದರು. ಎಷ್ಟು ಚೆನ್ನಾಗಿದೆ ಅಂತೀಯಾ? ನೀನೂ ಒಂದು ಸಲ  ಅಲ್ಲಿಗೆ ಹೋಗುವ ಯೋಜನೆ  ಹಾಕು. ನಾನಂತೂ ಇನ್ನು ಮೂರು ತಿಂಗಳು ನನ್ನ ಕಾವ್ಯಕೃಷಿಗೆ ಪೂರ್ಣವಿರಾಮ ಹಾಕಿ ಪ್ರವಾಸದ ಮೋಜು ಅನುಭವಿಸುತ್ತಿದ್ದೇನೆ.ಬೆಂಗಳೂರಿಗೆ ವಾಪಸಾಗುವ ತನಕ ಕಾದರೆ ನಿನ್ನ ಮುನ್ನುಡಿ ಬರೆಯಬಲ್ಲೆ' ಹೀಗೆ ಮೊದಲ ವಿಕೆಟ್ ಬಿತ್ತಯ್ಯ"ಎಂದು ದುಃಖಿಸಿದ.

"ನಿನ್ನ ಜತೆ ಒಂದೆರಡು ಬಾರಿ ಕವಿಗೋಷ್ಠಿಯಲ್ಲಿ ವೇದಿಕೆ ಹಂಚಿಕೊಂಡಿದ್ದ ಆ ಸುಂದರ  ಕವಯಿತ್ರಿಯನ್ನು ಕೇಳಲಿಲ್ಲವೆ?"ನನಗೆ ತೋಚಿದ ಪ್ರಶ್ನೆ ಕೇಳಿದೆ.

"ಕೇಳಿದೆನಯ್ಯ, ಕೇಳಿದೆ. ಅದಕ್ಕೆ ಆಕೆ ತಾನು ತಮ್ಮೂರಿನ ಹತ್ತಿರದ ಒಂದು ಹಳ್ಳಿಯಲ್ಲಿ ಜಮೀನು ಕೊಂಡಿರುವುದಾಗಿಯೂ, ಈಗ ಕೃಷಿ ಚಟುವಟಿಕೆಯಲ್ಲಿ ಮುಳುಗಿರುವುದಾಗಿಯೂ, ಟ್ರಾಕ್ಟರ್ ಓಡಿಸುವುದನ್ನು ಕಲಿಯುತ್ತಿರುವುದರಿಂದ ಮುನ್ನುಡಿ ಬರೆಯಲು ಸಾಧ್ಯವಿಲ್ಲ, ಸಮಯವೂ ಇಲ್ಲ ಕ್ಷಮಿಸಿ. ಕೃತಿ ಹೊರಗೆ ಬಂದ ಮೇಲೆ ನನಗೊಂದು ಪ್ರತಿ ಕಳುಹಿಸಿ"ಎಂದು ಉತ್ತರಿಸಿದ್ದಾರೆ ಎಂದ ಮಿತ್ರ.

"ಮತ್ತೆ ಕಾಲೇಜಿನಲ್ಲಿ ನಿನಗೆ ಪಾಠ ಮಾಡುತ್ತಿದ್ದ ನಿನ್ನ ಮೆಚ್ಚಿನ ಉಪಾಧ್ಯಾಯರು? ಈಗ ಕವಿಯೂ ಆಗಿದ್ದಾರಂತಲ್ಲ?"ಕೇಳಿದೆ. "ಅವರನ್ನೂ ಕೇಳಿದೆನಯ್ಯ.ಅವರು ತಮ್ಮ ಮಗನಿಗೆ ಚಾಮರಸನ ಪ್ರಭುಲಿಂಗಲೀಲೆ ಕಾವ್ಯದಲ್ಲಿ ಬರುವ ಮಾಯೆಯನ್ನು ನೆನಪಿಸುವ ಒಬ್ಬ ಮುದ್ದಾದ ಮಗಳು ಜನಿಸಿದ್ದಾಳೆಂದೂ,ಆ ಮೊಮ್ಮಗಳ ಆಟ ವಿನೋದಗಳಲ್ಲಿ ತಮಗೆ ಕಾಲಹೋಗುವುದೇ ತಿಳಿಯುತ್ತಿಲ್ಲವೆಂದೂ, ಕಾವ್ಯಕ್ಕಾಗಿ ಸಮಯ ನೀಡುವ ಮನಸ್ಥಿತಿಯಲ್ಲಿ ತಾವು ಇಲ್ಲವೆಂದೂ ತಿಳಿಸಿ,ಒಮ್ಮೆ ಮನೆಗೆ ಬಂದು ಮುದ್ದು ಮೊಮ್ಮಗಳನ್ನು ನೋಡಿ ಹರಸಬೇಕೆಂದೂ ಆಹ್ವಾನಿಸಿದ್ದರು." ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ ಎಂಬಂತೆ ಆಯಿತು."

"ಮತ್ತೊಬ್ಬರು ಕವಿಗಳನ್ನು ಯಾರದೋ ಮೂಲಕ ಭೇಟಿಯಾದೆ. ಅವರು ತಾವೀಗ ಪರಭಾಷೆಯ ಡಬ್ಬಿಂಗ್ ಸಿನಿಮಾದ ಒಂದರ ಹಾಡುಗಳನ್ನು ತುರ್ತಾಗಿ ಕನ್ನಡಕ್ಕೆ ತರ್ಜುಮೆ ಮಾಡುವ ಕಾಯಕದಲ್ಲಿ ಮುಳುಗಿದ್ದು ನಾಳೆಯಿಂದ ಅದಕ್ಕಾಗಿ ಒಂದು ಅಜ್ಞಾತ ಸ್ಥಳಕ್ಕೆ ಹೋಗುತ್ತಿರುವುದಾಗಿ ನಯವಿನಯದಿಂದಲೇ ಹೇಳಿ ಮುನ್ನುಡಿ ಬರೆಯಲು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು ." ಎಂದು ಪ್ರಲಾಪಿಸಿದ ಮಿತ್ರ.

"ಕವಿಗಳನ್ನು ಬಿಡಯ್ಯ.ಯಾರಾದರೂ ವಿಮರ್ಶಕರನ್ನು ಅಂದರೆ ಹಾಯದ ಒದೆಯದ ಸಹೃದಯ ವಿಮರ್ಶಕರನ್ನು ಕೇಳಬಹುದಿತ್ತವೆ?"ಎಂದು ನನ್ನ ಪ್ರಶ್ನಾವಳಿ ಮುಂದುವರೆಸಿದೆ. "ಅದನ್ನೂ ಮಾಡಿದೆ, ಪ್ರಜೆ. ಎಲ್ಲ ತಾರಮ್ಮಯ್ಯ ಆಡಿದರು. ಒಬ್ಬರಂತೂ ತಾವು ಇತ್ತೀಚಿನ ಕವನಗಳ ಬಗ್ಗೆ ಭ್ರಮನಿರಸನ ಹೊಂದಿರುವುದಾಗಿಯೂ, ಹೆಚ್ಚಿನವರಿಗೆ ಕಾವ್ಯಪರಂಪರೆ ಬಗ್ಗೆ ಅರಿವಿಲ್ಲವೆಂದೂ,ಕಾಗುಣಿತವಂತೂ ದೇವರಿಗೇ ಪ್ರೀತಿ ಎಂದೂ ಘಂಟಾಘೋಷವಾಗಿ ತಿಳಿಸಿ ನನ್ನ ಮುನ್ನುಡಿಯ ಬಯಕೆಗೆ ತೆರೆ ಎಳೆದರು.

ಈ ಮಧ್ಯೆ ಪ್ರಕಾಶಕರು ತಾವು ಅಮೆರಿಕೆಗೆ ಮಗಳ ಬಾಣಂತನಕ್ಕಾಗಿ ಪತ್ನಿಸಮೇತ ಆರು ತಿಂಗಳು ಅಮೆರಿಕಕ್ಕೆ ಹಾರುತ್ತಿರುವುದಾಗಿಯೂ ನಿಮ್ಮ ಕವನ ಸಂಕಲನ ಈಗ ಮಾಡಿದರೆ ಉಂಟು ಇಲ್ಲದಿದ್ದರೆ ಆರು ತಿಂಗಳು ಕಾಯಬೇಕು'ಎಂದು ನೋಟೀಸ್ ಕೊಟ್ಟೇಬಿಟ್ಟರು. "ಮುನ್ನುಡಿ ಎಂದು ಶೀರ್ಷಿಕೆ ಕೊಟ್ಟು ಎರಡು ಖಾಲಿಪುಟ ಬಿಡಬಹುತ್ತಲ್ಲವೆ?" ಛಲ ಬಿಡದೆ ಕೇಳಿದೆ.

"ಆ ಯೋಚನೆಯೂ ಬಂದಿತ್ತಯ್ಯ.ಆದರೆ ಪ್ರಕಾಶಕರು ಒಪ್ಪಲಿಲ್ಲ. ಹಾಗೆ ಖಾಲಿ ಬಿಟ್ಟರೆ ಅದು ಮುದ್ರಕರ ಪ್ರಮಾದ ಎಂದು ಆಪಾದನೆ ಬರಬಹುದು ಅನ್ನುವುದು ಅವರ ಭಯ" ಎಂದ. "ಸರಿ, ಬಿಡು. ಆ ಲೆಕ್ಕದಲ್ಲಿ ನೀನು ಮಾಡಿದ್ದು ಸರಿ ಇದೆ" ಎನ್ನುತ್ತ ಕವನ ಸಂಕಲನದ ಪ್ರತಿ ಎತ್ತಿಕೊಂಡು, ಅಭಿಪ್ರಾಯ ತಿಳಿಸುವ ಮಾತು ಕೊಟ್ಟು ಮುನ್ನುಡಿಯೆಂಬ ಮುಳ್ಳಿನ ಹಾದಿಯ ಬಗ್ಗೆ ಚಿಂತಿಸುತ್ತ ಮನೆಗೆ ಮರಳಿದೆ. ■

# ಪುಸ್ತಕ ಪರಿಚಯ "ಸೆಲ್ಫೀ"

✍ನಳಿನಿ ಭೀಮಪ್ಪ

ಸೆಲ್ಫೀ ಎಂಬ ಕ್ಯಾಚೀ ವರ್ಡ್ನ ಶೀರ್ಷಿಕೆಯನ್ನು ಹೊಂದಿದ ನಳಿನಿ. ಭೀಮಪ್ಪ ಅವರ ಪ್ರಬಂಧ ಸಂಕಲನ ಒಟ್ಟು 32 ಪ್ರಬಂಧಗಳನ್ನೊಳಗೊಂಡ ಒಂದು ಕೃತಿ. "ನಮ್ಮನ್ಮದ್ದೇ ಪ್ರಪಂಚ" ಎಂಬ ಅಡಿಬರಹವನ್ನು ಹೊಂದಿದ ಈ ಕೃತಿ ಹೆಸರಿಗೆ ತಕ್ಕಂತೆ ತನ್ನದೇ ಆದ ವಿಶಿಷ್ಟ ಪ್ರಪಂಚವನ್ನು ಓದುಗರ ಮುಂದೆ ತೆರೆದಿಡುತ್ತದೆ. ಲೋಕದ ಅಂಕು ಡೊಂಕುಗಳನ್ನು ಇಷ್ಟೊಂದು ಸ್ವಾರಸ್ಯವಾಗಿ ಕಾಣಲು, ಬರಹಗಾರನಾದವನಿಗೆ ಒಂದು ಒಳಗಣ್ಣಿರಬೇಕಿರುತ್ತದೆ. ಸಾಮಾನ್ಯವಾದುದನ್ನೂ ಅಸಾಮಾನ್ಯವೆಂದು ನಿರೂಪಿಸುವ ಗುಣ ನಳಿನಿ ಅವರಲ್ಲಿದೆ. ಹಾಗಾಗಿ ಅವರ ಬರಹಗಳು ಒಂದೇ ಬೈಟಕ್ಕಿನಲ್ಲಿ ಓದಿ ಮುಗಿಸುವ ಗುಣವನ್ನು ಹೊಂದಿವೆ.

ನಳಿನಿ ಅವರ ಎಲ್ಲ ಪ್ರಬಂಧಗಳೂ ಒಂದಲ್ಲ ಒಂದು ಪತ್ರಿಕೆಗಳಲ್ಲಿ ಪ್ರಕಟಗೊಂಡು ಓದುಗರಿಂದ ಓದಿಸಿಕೊಂಡಿದ್ದರೂ ಕೂಡ ಇದೀಗ ಪುಸ್ತಕ ರೂಪದಲ್ಲಿ ಬಂದು ತಾಜಾ ಬರಹಗಳಂತೆ ಮನವನ್ನು ಮುದಗೊಳಿಸುತ್ತವೆ. ನಳಿನಿ ಅವರು ಬದುಕನ್ನು ನೋಡುವ, ಆಸ್ವಾದಿಸುವ, ಜೀವಿಸುವ ವೈಶಿಷ್ಟತೆಯನ್ನು ಅವರ ಪ್ರಬಂಧಗಳು ಉಸುರುತ್ತವೆ. ಜೀವನದುದ್ದಕ್ಕೂ ಮಿಳಿತಗೊಂಡಿರುವ ಸುಖ–ದು:ಖ, ಸಿಹಿ–ಕಹಿ, ಸೋಲು–ಗೆಲುವು, ಏರು–ಇಳಿವುಗಳೆರಡನ್ನೂ ಸಮಾನ ಮನಸ್ಥಿತಿಯಿಂದ ಸ್ವೀಕರಿಸುವ ಅವರ ದೃಷ್ಟಿಕೋನದ ಪರಿಚಯವನ್ನು ಮಾಡಿಕೊಡುತ್ತವೆ ಪ್ರಬಂಧಗಳು.

ದಿನ ನಿತ್ಯದ ಜಂಜಾಟಗಳಲ್ಲಿ ಹಾಸುಹೊಕ್ಕಾಗಿರುವ ವಿಷಯಗಳನ್ನೇ ಇಟ್ಟುಕೊಂಡು ಅವುಗಳಿಗೆ ಹಾಸ್ಯದ ಲೇಪನಗೈದು, ಜೀವ ತುಂಬಿ ಸ್ವಾರಸ್ಯಕರವಾಗಿ ಓದುಗರೊಂದಿಗೆ ಚರ್ಚೆಗಿಳಿದಂತೆ ವಿಷಯವನ್ನು ಮಂಡಿಸುವಲ್ಲಿ ಸಿದ್ಧಹಸ್ತರು ನಳಿನಿ. ಗುಟ್ಟು, ಸಿಟ್ಟು, ಮೆಟ್ಟಿಲು, ಹೊಟ್ಟೆ, ರೊಟ್ಟಿಯಂತಹ ವಿಷಯಗಳ ಮೇಲೂ ವೈವಿಧ್ಯಮಯವಾಗಿ ವಾಚಾಮಗೋಚರವಾಗಿ ಬರೆಯಬಲ್ಲರು. ಓದುಗರಲ್ಲಿ "ಹೌದಲ್ಲ?" ಎಂಬ ಭಾವ ಮೂಡುವಂತೆ, ತುಟಿಯ ಮೇಲೊಂದು ಕಿರುನಗೆ ಹೊಮ್ಮುವಂತೆ ಲಾಲಿತ್ಯವನ್ನು ಪ್ರಬಂಧಗಳಲ್ಲಿ ತುಂಬಬಲ್ಲರು. ಇವರ ಲೇಖನಿಗೆ ಎಲ್ಲ ವಿಷಯಗಳೂ ಆಹಾರವಾಗಿ ಬರೆಯಲಿನ್ನು ವಿಷಯಗಳೇ ಇಲ್ಲ ಎಂದುಕೊಳ್ಳುತ್ತಿರುವಾಗ ಹೊಸದೊಂದು ವಿಷಯದೊಂದಿಗೆ ಪ್ರತ್ಯಕ್ಷರಾಗಿರುತ್ತಾರೆ.

ತೆಲಿ ಇರೋ ಮಟ, ಟ್ರಯಲ್ ರೂಂ, ನಾನೂ ಸಿಟ್ಟಾಗಬೇಕು, ಮಾತ್ರೆಗಳ ಕಾಲವಯ್ಯಾ, ನೀರಿರಲು ಮನೆಯಲ್ಲಿ ಪ್ರಬಂಧಗಳು ತಿಳಿ ಹಾಸ್ಯದಿಂದ ಕೂಡಿದ್ದು ನಗು ಉಕ್ಕಿಸುತ್ತವೆ. "ಆಧುನಿಕ ಜಗತ್ತಿನತ್ತ ವಕ್ರನೋಟ ಬೀರುವುದು ನಳಿನಿಯವರಿಗೆ ನೀರು ಕುಡಿದಷ್ಟೇ ಸಲೀಸು" ಎಂದು ಕೃತಿಯ ಪ್ರಕಾಶಕರು ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ಜೀವನದಲ್ಲಿ ಮುಖಾಮುಖಿಯಾಗುವ ಮಾನವ ಸಹಜ ನಡವಳಿಕೆಗಳನ್ನೇ ವಿಷಯವಸ್ತುವನ್ನಾಗಿಸಿಕೊಂಡು, ಯಾರನ್ನೂ , ಯಾವುದನ್ನೂ ಟೀಕಿಸದೇ ಬರೆಯಬಲ್ಲವರು ನಳಿನಿ. ಆದರೆ ಪ್ರಬಂಧಗಳ ಹರವು ಇನ್ನಷ್ಟು ವಿಸ್ತಾರವಾಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ಪ್ರತೀ ಪ್ರಬಂಧದ ಮುಕ್ತಾಯದಲ್ಲೂ ಅನ್ನಿಸುವುದು ನನ್ನ ವೈಯಕ್ತಿಕ ಅಭಿಪ್ರಾಯ.

ಲಲಿತ ಪ್ರಬಂಧ ಪ್ರಕಾರದಲ್ಲಿ ಹೆಸರು ಮಾಡುತ್ತಿರುವ ನಳಿನಿ ಅವರ ಲೇಖನಿಗೆ ಇನ್ನೂ ಹೆಚ್ಚು ಹೆಚ್ಚು ವಿಷಯಗಳು ದಕ್ಕಲಿ, ಅವರಿಂದ ಇನ್ನೂ ಹೆಚ್ಚು ಹೆಚ್ಚು ಕೃತಿಗಳು ಹೊರ ಹೊಮ್ಮಿ ಓದುಗರಿಗೆ ರಸದೌತಣವಾಗಲಿ ಎಂಬ ಶುಭ ಹಾರೈಕೆಗಳೊಂದಿಗೆ,–

**ಲೇಖಕರು : ಗೌರಿ ಚಂದ್ರ ಕೇಸರಿ**

# ಪಾತ್ರೆಗಳ ಕುಕ್ಕಾಟದ ನಡುವೆ !

✍ ಇ.ಆರ್. ರಾಮಚಂದ್ರನ್

'ಲೇ! ಮಾತಾಡ್ಬೇಡ್ವೆ! ನನ್ನ ಮಗನ್ನ ಬುಟ್ಟಿಲಿ ಹಾಕೊಂಡ್ಬಿಟ್ಟು ಏನು ಗೊತ್ತಿಲ್ದಿರೋ ಹಾಗೆ ಮಾತಾಡ್ತಿಯ ಸುಪನಾತಿ! ಸರಿಯಾಗಿ ಒಂದು ಪಾತ್ರೆ ಅನ್ನ ಬೇಯ್ಸಕ್ಕೆ ಬರೋಲ್ಲ. ಒಂದು ಕೆಲ್ಸ ನೆಟ್ಟಗೆ ಮಾಡೋದನ್ನ ನಾನು ನೋಡಿಲ್ಲ... ಏನೂಂತ ಬೆಳಸಿದಾರೋ ಇವಳ್ನ!'

'ಆಗ್ಲೇ ಹೇಳಿದಿನಿ ನಿಮಗೆ... ನಮ್ಮೆನವ್ರ ವಿಚಾರ ತೆಗೀಬೇಡಿ....ಒಳ್ಳೆಯದಲ್ಲ.....ಏನು ಬೈತೀರೋ ಕೇಳಿಸಿಸೋಹಾಗೆ ಹೇಳಿ.. ನಿಮೆಗೇ ಎಲ್ಲಾ ಬರುತ್ತಲ್ಲ.... ನೀವೇ ಮುದ್ದು ಮಗನಿಗೆ ಮಾಡ್ಹಾಕಿ ಹಾಕಿ ದಿನಾಗ಼್್ಲೂ..!,,, ಬೇಕಾದ್ರೆ ತಿನ್ಲೀ !!'

'ಜವಾಬ್ ಕೊಡೋಕ್ಕೆ ಮಾತ್ರ ಬರುತ್ತೇ....ಪಾತ್ರೆ ತೋರಿಸಿ ಏನೇ ಹೆದರ್ಸ್ತಿಯ.?..ಎಸೀತಿಯೇನು?'

ಪಾತ್ರೆ ಮತ್ತು ಚೊಂಬು ಮಾತಾಡ್ತಿದ್ವು.

'ನೋಡಿದ್ರಾ ಚೊಂಬಮ್ನೋರೇ! ಕೋಪ ಬಂದ್ರೆ ನಮ್ಮನ್ನ ಹೇಗೆ ಎತ್ತಿ ಕುಕ್ತಾರೆ...ಅತ್ತೆ ಸೊಸೆ ಜಗಳದ ಮಧ್ಯೆ ನನ್ನ ಹೊಟ್ಟೆ ಎಲ್ಲಾ ಜಜ್ ಹೋಗಿದೆ.. ನನ್ನ ಬಾಟಮ್ ಅಂತೂ ಕೇಳ್ಬೇಡಿ... ಎಷ್ಟು ಸ್ಮೂತಾಗಿದೀನೀಂತ ಮುಂಚೆ ಜಂಭ ಕೊಚ್ಚಿಕೊಳ್ತಿದ್ದೆ... ಈಗ ಎಲ್ಲಾ ಕಡೆ ಡೆಂಟ್ಸ್ ಬಂದಿದೆ! ನನ್ನ ಬ್ಯೂಟಿ ಎಲ್ಲಾ ಹಾಳಾಯ್ತು'.

'ಪಾತ್ರಮ್ನವ್ರೇ! ಹೌದು...ನಾನೂ ನೊಟಿಸ್ ಮಾಡ್ದೆ... ನಾನೂ ಕೆಳಗೆ ಬಿದ್ದೂ ಬಿದ್ದೂ ನನ್ನ ಮೂತಿ ಸೊಟ್ಟಕ್ಕೆ ಆಗಿದೆ..ನನ್ನ ಗೋಲ್ಡನ್ ಕಲರ್ ಈಗ ಕಿಲುಬಿನ ಕಲರ್ಗೆ ತಿರುಗಿದೆ. ಮುಂಚೆ ಥಳಥಳಾಂತ ಹೊಳೀತಾಇದಿಯಾ ಅನ್ನೊವ್ರು.. ಈಗ ಯಾಕೆ ಗೂಬೆ ಬಣ್ಣಕ್ಕೆ ತಿರುಗಿದಿಯಾ ಅಂತ ಕೇಳ್ತಾರೆ ಎಲ್ಲಾರೂ..'

'ಹೌದು.. ನಿಮ್ಮ ಮುಖಕ್ಕೆ ಈಗ ಸ್ವಲ್ಪ ಮಣ್ಣು ಬಣ್ಣ ಬಂದಿದೆ'.

ಇದು ದಿನ ನಿತ್ಯ ಇವರಿಬ್ಬರ ಗೋಳು.

ಅತ್ತೆ ಸೊಸೆ ಇವತ್ತು ಸರಿ ಇದ್ರೆ ನಾಳೆ ದೂರ್ವಾಸ ಮುನಿ ಮಧ್ಯೆ ಬಂದ ಹಾಗೆ... ಇಬ್ಬರಿಗೂ ಭಯಂಕರ ಕೋಪ. ಎಲ್ಲಾ ಕೋಪಾನೂ ಕೈಲಿ ಏನಿದ್ರೆ ಅದನ್ನ ಕುಕ್ಕಿ, ಎತ್ತಿಹಾಕಿ, ಎಸೆದು ತೋರಿಸ್ತಾರೆ..ಹಾಲಿನ ಡಬರ, ಮಿಕ್ಸಿ ಜಾರ್, ಸೌಟು ಇಕ್ಕಳ..,ಕೈಗೆ ಏನು ಸಿಕ್ಕಿದ್ರೆ ಅದು ಮಿಸ್ಸೈಲ್ ತರಾ ಹಾರುತ್ತೆ....ಎಲ್ಲಾನೂ ಅಲ್ಲಲ್ಲಿ ಚೆನ್ನಾಗಿ ಏಟು ತಿಂದಿವೆ.

ಮದುವೆ ಸೀಸನಲ್ಲಂತೂ ಕೇಳ್ಬೇಬೇಡಿ.

ಮೊನ್ನೆ ಒಂದು ಮದುವೇಲಿ,

ಗಂಡಿನ ತಾಯಿ: 'ಈ ತರಹ ಮದುವೆ ಮಾಡ್ತೀರಾ ಅಂತ ಗೊತ್ತಿದ್ರೆ ನಾನಂತೂ ಈ ಮದುವೆಗೆ ಖಂಡಿತ ಒಪ್ಪಿರ್ಲಿಲ್ಲ.. ಎಲ್ಲೊ ಚೌಕಾಸಿ ಮಾಡಿ ಅರ್ಧ ಬೆಲೇಗೋ ಇನ್ನೂ ಕಡಿಮೆಗೋ ಮದುವೆ ಮಾಡ್ತಿರೋ ಹಾಗಿದೆ. ತಾಳಿ ಕಟ್ಟಿಬಿಟ್ಟರೆ ಎಲ್ಲಾ

ಅಗೋಯ್ತು ಅಂತ ಅನ್ಕೊಬೇಡಿ. ಇನ್ನೂ ಹೆಣ್ಣು ಒಪ್ಸೋದು ಬಾಕೀ ಇದೆ. ಜ್ಞಾಪಕ ಇರ್ಲಿ..!'

ಹೆಣ್ಣಿನ ತಂದೆ: 'ಅಯ್ಯೋ ಅಮ್ಮ! ಕೋಪಿಸ್ಕೋ ಬೇಡಿ. ಸ್ವಲ್ಪ ಅಡ್ಜಸ್ಟ್ ಮಾಡ್ಕೊಳಿ.. ನೀವು ಕೇಳಿದ್ದು ಮಾಡ್ಕೊಡ್ತಿವಿ. ಅಯ್ಯೋ, ತಾಂಬಾಳಾನ ಎಸೀಬೇಡಿ! ನಿಮಗೆ ಬೇಕಿದ್ದ ಸೀರೆ ತರ್ತೀನಿ'.

ತಾಂಬಾಳಮ್ಮ ಸ್ಟೀಲ್ ಪರಾತಮ್ಮನ ಹತ್ರ ಹೇಳ್ಕೊಳ್ತಿತ್ತು.

'ಪರಾತಮ್ಮ! ನೋಡಿದ್ರಾ ಅವಳ್ನ ..ವರನ ಅಮ್ಮ ಛತ್ರಕ್ಕೆ ಬಂದಾಗ್ನಿಂದ ಒಂದೇ ಸಮ ಸಿಡಿ ಸಿಡಿ ಮಾಡ್ತಿದಾಳೆ! ಬೆಳಿಗ್ಗೆ ಅವ್ಳು ಬಂದಾಗ ವಾಲಗದವ್ರು,' ಭಾಗ್ಯಾದ ಲಕ್ಷ್ಮಿ ಬಾರಮ್ಮಾ'. ಹಾಡು ಬಾರಿಸ್ಲಿಲ್ವಂತೇ ಕಣ್ರೇ... ಛತ್ರದಲ್ಲಿ ವೈ-ಫೈ ಇಲ್ಲ, ಲೇಡೀಸ್ ಕ್ಲಬ್ ಮೆಂಬರ್ಸ್ಗೆ ಫೋಟೋ ಕಳಿಸಕ್ಕೆ ಅಗ್ಲಿಲ್ಲ ಅಂತ ಅವ್ಳ ಕೋಪ ಜಾಸ್ತಿ ಆಯ್ತು. ಧಾರೆಗೇಂತ ಹೆಣ್ಣಿನ್ ಮನೇವ್ರು ತಂದಿದ್ದ ಮದ್ವೆ ಸೀರೆ ಕುಪ್ಸ, ಹಳ್ದಿ ಕುಂಕುಮ ನನ್ನ ಮೇಲೆ ಇಟ್ಟು ಅದನ್ನ ಅವ್ರು ಕೊಡಕ್ಕೆ ಹೋದಾಗ ಕೋಪದಿಂದ ನನ್ನನ್ನು ಸೀರೆ, ರವ್ಕೆ ಜೊತೆ ಕೆಳಗೆ ರಪ್ ಅಂತ ಎಸೆದ್ಲು... ಮೇಲಿಂದ ಬಿದ್ದಿದ್ದು ಮೂಗೇಟು....ಅಲ್ಲಲ್ಲಿ ತರಚಿದೆ.....ಅವ್ಳಿಗೆ ರೇಷ್ಮೆ ಸೀರೆ ಕೊಡ್ಲಿಲ್ಲಾಂತ ಸಿಟ್ಟಂತೆರೀ...'

'ತಾಂಬಾಳಮ್ಮ! ಅಯ್ಯೋ! ಹುಷಾರಾಗಿ ನೋಡ್ಕೋಳಿ.. ಅವ್ಳ ಅಕ್ಕ ಏನೂ ಕಡಿಮೆ ಇಲ್ಲ.. ಅವ್ಳ ಕಾಲ್ಗೆ ಲಕ್ವ ಹೊಡೆದಿದೆಯಂತೆ.. ಕೂತ್ರೆ ನಿಂತ್ರೆ ಅವ್ಳ ಸೇವೆ ಎಲ್ಲಾ ಅಲ್ಲೇ ಆಗ್ಬೇಕು.. ಬ್ರೆಕ್ಫಾಸ್ಟ್ ಆದ್ಮೇಲೆ ಅವ್ಳ ಹತ್ರ ನನ್ನ ಮೇಲೆ ತಾಂಬೂಲ, ಹಣ್ಣು ಹೇರ್ಬಿಟ್ಟು ಅವ್ಳ ಹತ್ರ ಇಟ್ಟಿದ್ರು. ಅವ್ಳಿಗೆ ಅದು ಸರಿಯಾಗಿ ಎಟಕ್ಲಿಲ್ಲಾಂತ ನನ್ನ ಕೂತ್ಕಡೆಯಿಂದಾನೇ ಟೇಬಲ್ಲಿಂದ ದಬ್ಬಿದ್ಲು... ತಾಂಬೂಲ, ಅಡ್ಕೆ, ಸುಣ್ಣ ಮೈಮೇಲೆ ಹಾಕ್ಕೊಂಡು ಬಿದ್ದೆ ನೋಡಿ.....ಸುಣ್ಣದಿಂದಾ ಮೈಯೆಲ್ಲಾ ಉರಿ! ಅಡ್ಕೆ ಪುಡಿ ಸದ್ಯ ನನ್ನ ಕಣ್ಣು ಒಳಗೆ ಹೋಗ್ಲಿಲ್ಲ. ತಾಂಬೂಲ ನನ್ನ ಮುಖ ಮುಚ್ಚಿದ್ದು..ಎಲ್ಲಿ ಬೀಳ್ತೀನೀಂತ ಗೊತ್ತಾಗ್ಲಿಲ್ಲ.. ಮೈ ಕೈ ಎಲ್ಲಾ ನೋವು.... ನೀವು ಸ್ವಲ್ಪ ಬಿಸಿ ಸಾರಿದ್ರೇ ಅಡಿಗೇವ್ರಿಗೆ ಹೇಳಿ ಹಾಕ್ಸಿ... ಬಿಸಿ ಬಿಸಿ ಸಾರು ಎರಡು ಹೊತ್ತು ಮೈಗೆ ಬಿದ್ರೆ ನೋವು ಕಡಿಮೆ ಆಗುತ್ತೆ'.

'ಖಂಡಿತ.. ಮೆಣಸಿನ ಸಾರು ಬಿದ್ರೆ ಇನ್ನೂ ಒಳ್ಳೇದು ಬೇಗ ವಾಸಿಯಾಗುತ್ತೆ.. ಅದನ್ನು ಮಾಡ್ಸಿ ನಾನೂ ಹಾಕ್ಕೋಳ್ತೀನಿ.. ನಾವು ಇಲ್ಲಿಗೆ ಬಂದ್ವಲ್ಲಾ.. ನಮ್ಮ ಟ್ರಾವೆಲ್ ಕೂಡ ಹಾರಿಬಲ್ಲ್.. ಈಗೆಲ್ಲಾ ಫ್ಲೈಟಲ್ಲಿ ಕರ್ಕೊಂಡು ಹೋಗ್ತಾರೆ. ನಮ್ಮಕಡೆ ದೂರದ ಸಂಬಂಧ ಒಂದು ಫ್ಯಾಮಿಲಿನ ಬಾಲಿವುಡ್ ಮದುವೆಗೆ ಮುಂಬೈಯಿಂದ ರಾಜಾಸ್ತಾನ್‌ಗೆ ಕರಕೊಂಡು ಹೋಗಿದ್ರಂತೆ..... .ಜೈಪೂರ್ ಪ್ಯಾಲೆಸ್ನಲ್ಲಿ ಮದ್ವೆ! ಅಲ್ಲಿ ಅವ್ರಿಗೆ ಫೈವ್ ಸ್ಟಾರ್ ಟ್ರೀಟ್ಮೆಂಟು...ಪ್ಲೇನ್ನಲ್ಲಿ ಹೋಗಿ ಇಳಿದ ತಕ್ಷಣ ಸ್ಯಾಟಿನ್ ಪ್ಯಾಕಿಂಗ್ ಮಾಡಿ ಜ್ವೇಲರಿ ಬಾಕ್ಸಲ್ಲಿಟ್ಟು ಅವರನ್ನ ಸೂಟ್‌ಕೇಸಲ್ಲಿ ಇಟ್ಟು ಕರ್ಕೊಂಡ್ ಹೋದ್ರಂತೆ. ಬಫೆ ಊಟದಲ್ಲಿ ಬಹಳ ಮರ್ಯಾದೆ ಕೊಟ್ಟರು ಅಂದ್ಲು. ಕುಕ್ಸ್ ಎಲ್ಲಾ ಬಿಳಿ ಕ್ಯಾಪ್, ಗ್ಲೋವ್ಸ್ ಹಾಕ್ಕೊಂಡು ಜಂಟಲ್ಮನ್‌ಲಿ ಬಿಹೇವಿಯರ್ ಅಂತೆ ಕಣ್ರೇ... ಎಲ್ಲಾ ಹೈ ಫೈ ಅಂತೆ ಪರಾತಮ್ಮ'.

'ತಾಬಾಳಮ್ನೋರೇ! ಅವ್ರೆಲ್ಲಾ ಫ್ಲೈಟ್ ಅಲ್ಲಿ ಹೋದ್ರು..ಇಲ್ಲಿ ನಮ್ಮ ಫ್ಲೈಟ್

ನೋಡಿ! ನಮ್ಮನ್ನೆಲ್ಲಾ ಮೂಟೆ ಕಟ್ಟಿ ಕೆಂಪು ಎಸ್ ಟಿ ಬಸ್ ಟಾಪಲ್ಲಿ ಹಾಕ್ಕೊಂಡ್ ಬಂದ್ರಲ್ವ? ದಾರೀಲಿ ಒಂದೇ ಸಮ ಕುಲ್ಕಿ ಕುಲ್ಕಿ ನನಗೆ ರಾತ್ರಿಯೆಲ್ಲಾ ನಿದ್ದೆಯಿಲ್ಲ...ಬಸ್ ಕ್ಲೀನರ್ ಮೂಟೇನಾ ಹಾಗೇ ಮೇಲಿಂದ ಕೆಳಕ್ಕೆ ಎಸೆದ.. ಕೆಳಗೆ ಬಿದ್ವಿ ಮೈ ಕೈ ಜಖಂ...ಕಚಡಾ ನೀರಲ್ಲಿ ಸ್ನಾನ. ತಕ್ಷಣ ಕೆಲಸಕ್ಕೆ ಹಾಕಿದ್ರು....ಸ್ಯಾಟಿನ್ ಪ್ಯಾಕ್ ಇರಲಿ..ಎಲ್ಲಾರ್ನೂ ಸೇರ್ಸಿ ಒಂದು ಟವಲಲ್ಲೂ ಸುತ್ತಿಲ್ಲ.. ಬಹಳ ನಾಚ್ಕೆ ವಿಷಯ..'

'ಇದಕ್ಕೆಲ್ಲಾ ಕೇಳ್ಕೊಂಡು ಬಂದಿರ್ಬೇಕು... ನಮ್ಮ ಬಾಳು ಹೀಗೇ ಬರೀ ಗೋಳೇನಾ..? ಯಾರ ಹತ್ರ ಹೇಳ್ಕೋಬೇಕು. ಇದೆಲ್ಲಾ ನಮ್ಮ ಕರ್ಮ ಪರಾತಮ್ನೋರೇ'.

**

ಇವರ ಒಂದು ಗ್ರೂಪು ಕಿಟ್ಟಿ ಪಾರ್ಟಿಲಿ ರಾತ್ರಿ ಹೋಟ್ಲಲ್ಲಿ ಗಪ್ಪ ಹೊಡೀತಿರುವಾಗ..

# 'ನಿಮಗೆಲ್ಲಾ ಏನಂಸುತ್ತೋ ... ನನಗಂತೂ ಅವನು 'ಚಮಚ' ಅವಳು 'ಚಮಚ' ಅಂತ ಮಾತು ಕಿವಿಗೆ ಬಿದ್ದು ಕಿವಿ ತೂತಾಗಿದೆ! ಯಾರಾದ್ರೂ ಅವ್ರ ಬಾಸ್ಗೋ, ಮಿನಿಸ್ಟರ್ಗೋ ಕ್ಲೋಸ್ ಆದ್ರೆ ಅವ್ರಿಗೆ ನಮ್ಮ ಹೆಸರಿಟ್ಟು ನಮಗೆ ಅವಮಾನ ಮಾಡ್ತಾರೆ. ಐ ಕಾನ್ಟ್ ಸ್ಟಾಂಡ್ ಇಟ್'.

# ಹೋದ ವರ್ಷ ಎನ್ವೈರನ್ಮೆಟ್ ಡೆ ಅಂತ ಮಾಡಿ ನಮ್ ಕ್ಯಾಂಪಸ್ ನಲ್ಲಿ ಫಂಕ್ಷನ್ ಆದ್ಮೇಲೆ ನಮ್ಮನ್ನು ಅಲ್ಲಲ್ಲೆ ಎಸ್ದು ಹೋಗಿದ್ರು.. ನೆಕ್ಸ್ಟ್ ಡೆ ನಮ್ ಫೋಟೊ ಎಲ್ಲಾ ಪೇಪರ್ನಲ್ಲಿ ಹಾಕಿದ್ರು ಪ್ಲೇಟ್ಸ್. ಸ್ಪೂನ್ಸ್. ಅವೆಲ್ಲಾ ಅಲ್ಲಲ್ಲೆ ಬಿದ್ದಿತ್ತು .... ನಮಗೆ ಎಷ್ಟು ಇನ್ಸಲ್ಟಿಂಗ್ ಅದು!'

# 'ನಾನು ಕೆಲ್ಸಾ ಮಾಡೋ ಕಡೆ ಅಲ್ಲಿ ಬಾಸ್ ತನ್ನ ಅಸಿಸ್ಟೆಂಟಿಗೆ ಒಂದೇ ಸಮ ಬೈತಾ ಇರ್ತಾನೆ... 'ಐ ಹಾವ್ ಟು ಸ್ಪೂನ್– ಫೀಡ್ ಯು.. ಯು ಕಾನ್ಟ್ ಡು ಎನಿತಿಂಗ್ ಅಲೋನ್ ಅಂತ..'

ಕೊನೆಗೆ, ಅವರಲ್ಲಿ ಸೀನಿಯರ್– ಮೋಸ್ಟ್ ಹೇಳಿದ್ರು:

'ನನಗೆ ವಯಸ್ಸಾಯಿತು. ನಾನು ಎಲ್ಲಾ ತರಹದ ಸನ್ನಿವೇಶ ನೋಡೀದಿನಿ..... ಅನುಭವಿಸಿದೀನಿ.... ನೀವು ಹೇಳಿದ್ದು ಎಲ್ಲಾ ಕೇಳಿಸ್ಕೊಂಡೆ.... ನಾನು ಇದನ್ನೂ ನೊಡೀದಿನಿ...ನಿಮ್ಮಲ್ಲಿ ಎಷ್ಟು ಜನ ಇದನ್ನು ನೊಡಿದೀರೋ ನನಗೆ ಗೊತ್ತಿಲ್ಲ....ಹೇಳ್ತೀನಿ.. ಕೇಳಿ.. ಅತ್ತೆ ಸೊಸೆ ಹೀಗೇ ಜಗಳಾ ಆಡ್ತಾ ಆಡ್ತಾ... ಮಗು ಆದ್ಮೇಲೆ ಮಗುಗೆ ಹಾಲು ಪಾತ್ರೇಲಿ, ಬಟ್ಲಲ್ಲಿ ಕುಡಿಸುವಾಗ ಇಬ್ಬರೂ 'ನಾ ಕುಡಿಸ್ತೀನೀ, ನಾ ಕುಡಿಸ್ತೀನೀ' ಅಂತ ಜಗಳ ಆಡೋದನ್ನ ನೊಡೀದಿನಿ...... ಮಗುವಿಗೆ ಅನ್ನಪ್ರಾಶನ ಮಾಡಿಸುವಾಗಲೂ ಇದೇ ರೀತಿ ಫೈಟ್ ಆಗುತ್ತೆ.. 'ನೀನು ಮಗನಿಗೆ ಅನ್ನ ತಿನ್ನಿಸು' ಅಂತ ಅತ್ತೆ ಸೊಸೆಗೆ ಹೇಳಿದ್ರೆ, ಸೊಸೆ, 'ನೀವು ದೊಡ್ಡವ್ರು.... ಮೊಮ್ಮನಿಗೆ ನೀವೇ ತಿನ್ನಿಸಬೇಕು' ಅಂತ ಸೊಸೆ ಹಟ ಹಿಡಿತಾಳೆ.. ಹೆಣ್ಣು ಒಪ್ಪುವಾಗ ಅವ್ಳನ್ನು ಕರ್ಕೊಂಡು ಹೋಗೋ ಅತ್ತೆ ಕಣ್ಣಲ್ಲಿ ನೀರು ನೋಡೀದೀನಿ..

ಬಹಳ ಕಡೆ ವಿಶೇಷ ಸಂದರ್ಭದಲ್ಲಿ ಊಟಕ್ಕೆ ಬೆಳ್ಳಿ ಲೋಟ ಬೆಳ್ಳಿ ತಟ್ಟೆಲಿ ಬಡಿಸ್ತಾರೆ.. ನನಗೆ ಗೊತ್ತಿರೋ ಹಾಗೆ ಇಲ್ಲೆ ಒಂದು ಹೋಟ್ಲಿ ಲ್ಲಿ ಕಾಫಿ ಬೆಳ್ಳಿ

ಲೋಟಲಿ ಕೊಡೋವ್ರು.. ಎಲ್ಲಾ ಪ್ರೊಫೆಷನ್ ತರಹ ನಮ್ಮ ಪ್ರೊಫೆಷನ್ನಲ್ಲೂ ಒಳ್ಳೆದು ಕೆಟ್ಟದ್ದು ಇದೆ ..ಅದನ್ನು ದೊಡ್ಡದು ಮಾಡ್ಬಾರ್ದು.....'

ಅಷ್ಟರೊಳಗೆ ಪಕ್ಕದ ಟೇಬಲ್ನಿಂದ ಹುಟ್ಟಿದ ಹಬ್ಬ ಸೆಲೆಬ್ರೇಟ್ ಮಾಡ್ತಾ...ಒಂದು ದೊಡ್ಡ ಜಾಯಿಂಟ್ ಫ್ಯಾಮಿಲಿಯ ಎಲ್ಲಾರೂ ಸ್ಪೂನ್ ನಿಂದ ಪ್ಲೇಟ್ಗೆ ಹೊಡೀತಾ ಸಣ್ಣ ಮಗುವಿಗೆ 'ಹ್ಯಾಪೀ ಬರ್ತ್ ಡೇ ಟು ಯು' ಹಾಡಿದ್ರು. ಮಗು ಕೇಕೆ ಹಾಕ್ತಾ ಖುಷಿಯಿಂದ ಕುಣಿಯೋದಕ್ಕೆ ಶುರುಮಾಡ್ತು. ■

## ಅರಾಸೆಯ ಒಸಗೆ

**(ಕೊರವಂಜಿಯಿಂದ)**

ಸೂರ್ಯನುದಿಸಿಹ ನೋಡು
ಏಳೆನ್ನ ಮನದನ್ನೆ ಗಂಟೆ ಎಂಟಾಯ್ತು
ಕಣ್ತೆರೆದು ದಯಮಾಡು ಕಾಫಿ ಒಲೆಯನ್ನುಹೂಡು
ಆಲಿಂಡಿಯಾಕಾಶ ವಾಣಿ ಒರಲುತಿದೆ !

ಹಾ 1 ತುಂಬು ಬಟ್ಟಲನು ಕಾಲವದು ತಾನೋಡಿ ಕ
ಕೈಗೆ ದೊರಕದೆ ಪರಿಯ ವೇನ ವಿವರಿಸಲೇ
ಮೂವತ್ತು ಮುಗಿದಿತ್ತು : ಒಂದಿಂದು ಬಂದಿಹದು
ಸಂಬಳದ ದಿವಸವೂ ಕಂಬನಿಯದೇಕೆ ?

ಬಾಲ್ಯದಲಿ ನಾನಂದು ಕಾಲೇಜಿನೊಳಗಿರಲು
ಕೇಳಿ ಪ್ರೊಫೆಸರುಗಳೆಲ್ಲ ಬುರುಡೆಗಳನು
ಪೀಸೀಯಮ್ಮಿನಲಿ ಪಲ್ಟಿಯ ಹೊಡೆದು, ಹಿಂತಿರುಗಿ
ಬೆಂಗಳೂರಿಂ ಬಂದೆ ಮಂಗನಾಗಿ.

ಮತ್ತೆ ಸೆಪ್ಟೆಂಬರಿಗೆ ಕೂತೆ, ಅಲ್ಲಿಯೂ ಸೋತೆ
ಬರಿದಾಯ್ತು ಜೇಬು, ಬರಡಾಯ್ತು ಬುದ್ಧಿ
ಕತ್ತೆಯಾದೆನು ಬಳಿಕ ಹೊಳೆಯಿತೆನಗೀ ಸತ್ಯ
ಕಾಫಿಪುಡಿಯೊಲು ಬಂದೆ ಚರಟದೊಲು ಪೋಪೆ.

ಉದ್ದಗಲ ಆಳದ ತ್ರಿಗಾತ್ರದೀ ವಿಶ್ವವಿದು
ಕಾಲದ ಚತುರ್ಥ ಗಾತ್ರದಲಿ ಸಂಚರಿಪ
4–ಆ ಚಲಚ್ಚಿತ್ರ, ಡೈರೆಕ್ಟ 'ರಿಲ್ಲಪ್ಪ'
ನಾನೆ ಹೀರೋ ! ಮುಗುದೆ ನೀನೆ ಹೀರೋಯಿನ್

ಬಾ ! ಅರಾಸೆಯ ಜೊತೆಗೆ ಸಖಿ, ನಿರಾಶೆಯ ತೊರೆದು
ಬೋರಗಳೆಯೀ ವಿಶ್ವವನು ಗಣಿಸದಿರು
ಹೀರಿಕಾಫಿಯ, ಮೀರುವಾನಂದದಲಿ ಬೆರೆದು
ಜೀವನವ ನನುಭವಿಸು, ಮರೆತು ಚರ್ಚೆಯನು.

# ಹೊಸಾ ಅಡಿಕ್ಷನ್...

✍ ಹೆಚ್. ಗೋಪಾಲಕೃಷ್ಣ

ಎಲ್ಲಾ ವಯಸ್ಸಿನವರಿಗೂ ಲಿಂಗ, ಭಾಷೆ, ವಯೋಮಾನ, ದೇಶ, ಕಾಲ.. ಇವೆಲ್ಲದರ ಪರಿಧಿ ಮೀರಿ ಒಂದು ರೀತಿಯ ಹೊಸಾ ಅಡಿಕ್ಷನ್ ಅಂಟಿದೆ ಅಂತ ಗೊತ್ತು ತಾನೇ...?

ಬನ್ನಿ ಅದರ ಒಂದು ಸಣ್ಣ ರೂಪ ನೋಡೋಣ,

ಎಂದೋ ಯಾವತ್ತೋ ನೋಡಿದವರು, ಜತೆ ಓದಿರೋರು, ಒಟ್ಟಿಗೆ ಕೂತು ಕಾಪಿ ಹೊಡೆದು ಪರೀಕ್ಷೆ ಯಲ್ಲಿ ಫೇಲ್ ಆಗಿರೋರು, ಕಾಲೇಜಿನ ಕೊನೆ ಬೆಂಚಿನ ಖಾಯಂ ಹುಡುಗರು,ಹುಡುಗಿಯರೂ ಸಹ ಸೇರಿದ ಹಾಗೆ, ಕಾರ್ಖಾನೆ ಯಲ್ಲಿ ಶಿಫ್ಟ್ ನಲ್ಲಿ ಒಟ್ಟಿಗೆ ಕೆಲಸ ಮಾಡಿದೋರು, ಕಾರ್ಖಾನೆ ಬಸ್ಸಿನಲ್ಲಿ ಕೂತು ನಿದ್ರಿಸಿದವರು, ರಾತ್ರಿ ಹನ್ನೆರೆಡು ವರೆಗೆ ಕಾಂಡಿಮೆಂಟ್ ಸ್ಟೋರ್ ನಲ್ಲಿ ಬೈ ಟೂ ಬಾದಾಮಿ ಹಾಲು ಕುಡಿದವರು, ಪ್ರಪಂಚದ ಯಾವುದೋ ಮೂಲೆಯಲ್ಲಿ ಎಲ್ಲೋ ಸಿಕ್ಕಿ ಎದುರು ಬದುರು ಕೂತು ನಮ್ಮ ದೇಶ ನೆನೆಸಿಕೊಳ್ಳುತ್ತಾ ಎರಡು ಸಿಪ್ ಹೀರಿ ಒಟ್ಟಿಗೆ ಕಣ್ಣೀರು ಸುರಿಸಿದವರು... ಹೀಗೆ ತರಹೇ ವಾರಿ ಜನರ ಹೊಸ ಚಿಂತನೆ ಮತ್ತು ಯೋಜನೆಗಳು ಏನು ಗೊತ್ತಾ...?

ಹಳೇ ನೆನಪುಗಳು ಜೀವನೋತ್ಸಾಹ ತುಂಬಬೇಕು, ಹಳೆಯ ಮರೆತ ಮುಖಗಳು ಮತ್ತೆ ಮತ್ತೆ ನಳ ನಳಿಸಬೇಕು, ತುರುಬು ನೆನೆಸಿಕೊಂಡು ರೇಸ್ ಕುದುರೆಯ ಹಾಗೆ ಕೆನೀ ಬೇಕು...ಮುಂತಾದ ಯೋಚನೆಗಳು ತಲೆ ತುಂಬಾ ತುಂಬಿಕೊಂಡು ಹೊಸಾ ಹೊಸಾ ಹೊಸಾ ವಾಟ್ಸಾಪ್ ಗುಂಪು ಜನ್ಮ ತಳಿಯುತ್ತವೆ.

ಮೊದ ಮೊದಲು ಭಾರೀ ಖುಷಿ ಉತ್ಸಾಹದಿಂದ ಎಲ್ಲರೂ ಪೋಸ್ಟ್ ಹಾಕ್ತಾರೆ, ಮೆಸೇಜ್ ಹಾಕ್ತಾರೆ, ಯಾರು ಯಾರು ಯಾವತ್ತು ಹುಟ್ಟಿದರು, ಯಾವತ್ತು ಮದುವೆ ಆದರು ಅಂತ ಪಟ್ಟಿ ತಯಾರಿಸುತ್ತಾರೆ. ಸದಸ್ಯರ ಹುಟ್ಟಿದ ಹಬ್ಬಕ್ಕೆ ವಿಶ್ ಮಾಡ್ತಾರೆ, ವೆಡ್ಡಿಂಗ್ ಡೇ ವಿಶ್ ಇರುತ್ತೆ, ಸತ್ತೋರನ್ನ ನೆನೆದು ಸಂತಾಪ ಸೂಚಿಸಿ ಕಣ್ಣು ಒರೆಸಿಕೊಳ್ಳು ವ ಬೊಂಬೆ ಹಾಕುತ್ತಾರೆ. ಆ ಕಾಲದಲ್ಲಿ ತಾವು ಮಾಡಿದ ಪ್ರತಾಪಗಳನ್ನು ನೆನೆಸಿ ನೆನೆಸಿ ಕೊಂಡು ಖುಷಿ ಪಡುತ್ತಾರೆ. ಬೆಳಿಗ್ಗೆ ತಿಂದ ಬ್ರೆಡ್ ಹಾಗೂ ಬಾಯ್ಲ್ ಡ್ ಎಗ್ ಪೋಟೋ ಹಾಕ್ತಾರೆ. ಮಧ್ಯಾಹ್ನ ಉಂಡ ಮುದ್ದೆ, ಅವರೇ ಕಾಳಿನ ಸಾರು ಬಿಸಿಬೇಳೆ ಭಾತ್ ಪೋಟೋ ಇರುತ್ತೆ. ಸಂಜೆ ಕುರುಕುರಿಸಿದ ಚಕ್ಕಲಿ, ಆಲೂಗೆಡ್ಡೆ ಚಿಪ್ಸ್ ಪೋಟೋ, ಗೋಬಿ ಮಂಚೂರಿ, ಪಕ್ಕದಲ್ಲಿ ಮೊಳದುದ್ದದ ಕಾಫಿ ಲೋಟ ಇರಿಸಿಕೊಂಡು ಪೋಟೋ ಹಾಕಿಸಿಕೊಳ್ಳುತ್ತೆ. ರಾತ್ರಿ ಟೇಬಲ್ ಎದುರಿಗೆ ಸಾಲಾಗಿ ಬಾಟಲು ಜೋಡಿಸಿಕೊಂಡು ಉದ್ದನೆ ಗಾಜಿನ ಲೋಟ ಬಾಯಿಗೆ ಇಡುತ್ತಿರುವ ಸೆಲ್ಫಿ ಇದ್ದರೆ ರಾತ್ರಿ ಮಲಗುವಾಗಿನ ಮಂಚದ ಪೋಟೋ ಸಹ ಕೆಲವರು ಹಾಕುತ್ತಾ ಇರುತ್ತಾರೆ. ಗೋಡೆಯ ಮೇಲಿನ ಕಸೂತಿ, ಅವರ ಮದುವೆ ಸಮಯದಲ್ಲಿ ಯಾರೋ ಉಡುಗೊರೆ ಕೊಟ್ಟ ರಾಧಾಕೃಷ್ಣನ ಪೋಟೋ, ಹೆಂಡತಿ ಮದುವೆ ಆದ ಹೊಸತರಲ್ಲಿ ಹಾಕಿದ ನವಿಲಿನ ಕಸೂತಿ...ಇವೆಲ್ಲಾ ಹಾರಾಡುತ್ತವೆ. ಆ ಸ್ನೇಹ ಎಷ್ಟು ಉತ್ಕಟ ಆಗಿರುತ್ತೆ ಅಂದರೆ ತುಂಬಾ ತುಂಬಾ ತುಂಬಾ ಖಾಸಗಿ ಸಂಗತಿಗಳು ಸಹ ಜಗಜ್ಜಾಹೀರು ಆಗಿರುತ್ತೆ. ಹೈಸ್ಕೂಲು ಕಾಲದ ಮೊದಲ ಲವ್ ಲೆಟರ್ ಪ್ರಸಂಗದಿಂದ ಹಿಡಿದು

ತೀರಾ ಇತ್ತೀಚೆಗೇ ಲಾಯರ್ ನೋಟೀಸ್ ನೀಡಿದ ಹೆಂಡತಿ ಬಗ್ಗೆ, ಗಂಡನ ಬಗ್ಗೆಯೂ ಪೋಸ್ಟ್ ಇರ್ತವೆ. ಪ್ರಪಂಚ ಪೂರ್ತಿ ಕೈಗೆ ಸಿಕ್ಕಿಬಿಡ್ತು ಇನ್ನು ನನ್ನನ್ನು ಯಾರೂ ಹಿಡಿಯುವರೆ ಇಲ್ಲ ಎನ್ನುವವರೆಗೆ ಈ ಹುಮ್ಮಸ್ಸು ಆಕಾಶದ ಎತ್ತರಕ್ಕೆ ನಿಲ್ಲುತ್ತದೆ. ಈ ಪೋಸ್ಟುಗಳಿಗೆ ಮೆಚ್ಚುಗೆಯ ಮಹಾಪೂರ ತುಂಬಿದ ನದಿಯ ಹಾಗೆ ಹರಿದು ಬರುತ್ತದೆ. ಪೋಸ್ಟ್ ಮೆಚ್ಚದೇ ಮರು ಪೋಸ್ಟ್ ಹಾಕಿದವರು ಸಿಲ್ಲಿ, ಮೀನ್, ದುಷ್ಮನ್ , ಹುಟ್ಟು ಶತ್ರು ಹಾಗೆ ಕಾಣಿಸುತ್ತಾರೆ.

ಅತಿಯಾಗಿ ನೊಂದವರ ಕಣ್ಣು ಒರೆಸಲು ಒಂದು ಗುಂಪು ಸದಾ ರೆಡಿ ಇರುತ್ತೆ, ಬಾ ಗುರು ಅಂತ ಹತ್ತಿರದ ಬಾರ್‌ಗೆ ಗೆಳೆಯನನ್ನು ಆಹ್ವಾನಿಸುತ್ತವೆ. ಅಲ್ಲಿನ ಕೆಲಸ ಮುಗಿಸಿ ಹೊರಗೆ ತೊಡರು ಕಾಲು ಹಾಕುತ್ತಾ ಗೆಳೆಯನಿಗೆ ಸಾಂತ್ವನ ಹೇಳುತ್ತವೆ ಮತ್ತು ಸೇಡು ತೀರಿಸಿಕೊಳ್ಳಲು ಹೊಸಾದಾರಿ ಹುಡುಕಲು ಮತ್ತೆ ಅಲ್ಲೇ ಅದೇ ಬಾರಿನಲ್ಲೆ ಮುಂದಿನ ಎರಡು ದಿನಗಳಲ್ಲಿ ಅಥವಾ ಮುಂದಿನ ವಾರ ಸೇರುವ ನಿರ್ಧಾರ ಮಾಡಿ ಆಟೋ, ಕ್ಯಾಬು ಏರಿ ಚದುರುತ್ತವೆ.

ಅದೇ ಸಂತ್ರಸ್ತೆ ಲೇಡಿ ಆದರೆ ಬೇರೆ ಕತೆ. ನ್ಯಾಯಾಲಯದ ಮೂಲಕ ನ್ಯಾಯ ದೊರಕಿಸಿಕೊಳ್ಳಲು ಸಾಧ್ಯತೆ ಕೆಲವರು ವಿವರಿಸುತ್ತಾರೆ. ಮನೆ ಮುಂದೆ ಧರಣಿ ಕೂಡುವ ಉಪಾಯ ಕೆಲವು ನಾಯಕಿಯರು ಅಂದರೆ ಲೀಡರ್ಸ್ ಕೊಡುತ್ತಾರೆ.ಯಾವುದೂ ನಿರ್ಧಾರ ಆಗುಲ್ಲ. ಹಾಳಾಗಿರುವ ಮೂಡ್ ಸರಿಹೋಗಲು ಗೆಳತಿಯರು ಗುಂಪು ಗುಂಪಾಗಿ ಸೀರೆ ಅಂಗಡಿ ನುಗ್ಗುತ್ತಾರೆ. ಅಲ್ಲಿ ಪರ್ಚೆಸ್ ಮುಗಿಸಿ ಅಲ್ಲಿಂದ ಮಸಾಲೆ ದೋಸೆ, ಚೈನೀಸ್ ತಿಂಡಿ ಹುಡುಕಿ ಹೋಟೆಲ್‌ಗೆ ಹೋಗುತ್ತಾರೆ. ತಿಂಡಿ ಕಾಫಿ ನಂತರ ಆಚೆ ನಿಂತು ಒಂದೂವರೆ ಎರಡು ಗಂಟೆ ಕಾಲ ಮತ್ತೆ ಅದೇ ಪ್ರಶ್ನೆ, ಅದಕ್ಕೆ ಸಮಸ್ಯೆ ಚರ್ಚಿಸಿ ಮುಂದಿನ ಮೀಟಿಂಗ್ ಯಾವ ಸೀರೆ ಅಂಗಡಿಯಲ್ಲಿ ಎಂದು ತೀರ್ಮಾನಿಸಿ ಚದರುತ್ತಾರೆ.

ಈ ಮಹಾಪೂರದ ಅಮಲು ಇದು ಮೊದಲ ತಿಂಗಳ ಅಬ್ಬಬ್ಬಾ ಅಂದರೆ ಎರಡು ತಿಂಗಳ ಕತೆ. ನಂತರ ವರಸೆ ನಿಧಾನಕ್ಕೆ ಬದಲು ಆಗುತ್ತಾ ಹೋಗುತ್ತೆ.

ಕೆಲವೇ ತಿಂಗಳಲ್ಲಿ ಗಳಸ್ಯ ಕಂಟಸ್ಯ, ದೇಹ ಒಂದು ಆತ್ಮ ಹಲವು ಆಗಿದ್ದವರು ಪೋಸ್ಟ್ ಅಂದರೆ ಮೆಸೇಜ್‌ಗಳ ವಿಶ್ಲೇಷಣೆ ಶುರು ಮಾಡ್ತಾರೆ. ಕಿಟ್ಟಿ ಹಾಕಿದ ಈ ಮೆಸೇಜು ಆಗಲೇ ಇಷ್ಟು ಕಡೆ ಎಲ್ಲೆಲ್ಲಿ ಬಂದಿದೆ ಅಂತ ಪತ್ತೇದಾರಿ ಪುರುಷೋತ್ತಮ ಒಂದು ಪೋಸ್ಟ್ ಬಿಡ್ತಾನೆ. ಇವನ ಪೋಸ್ಟ್ ಹಿಂದೇನೆ ಮತ್ತೊಂದು ಪೋಸ್ಟು ಯಾರೋ ಹಾಕ್ತಾರೆ. ಪತ್ತೇದಾರ ಪುರುಷೋತ್ತಮ ಐದು ದಿವಸ ಹಿಂದೆ ಹಾಕಿದ ಪೋಸ್ಟು ಫೇಕ್ ಅಂತ ಪುರಾವೆ ಹಾಕ್ತಾನೆ...ಮತ್ತೊಬ್ಬ, ಹಳೇ ಗೆಳತಿ ಹಾಕಿದ ಪೋಸ್ಟು ತನ್ನನ್ನು ಕುರಿತು ಅವಹೇಳನ ಮಾಡಿದ್ದು, ಟೀಸ ಮಾಡಿದ್ದು ಅಂತ ಒಂದು ವರಾತ ಶುರು ಆಗುತ್ತೆ.ಇದು ತೀರಾ ವೈಯಕ್ತಿಕ ಅಂದರೆ ವೈಯಕ್ತಿಕ ಮಟ್ಟ ತಲುಪುತ್ತದೆ.. ಇದೇ ಸಮಯದಲ್ಲಿ ವಾಟ್ಸಾಪ್ ಗುಂಪು ಹುಟ್ಟಿ ಹಾಕಿದವನು ತನಗೆ ಸಪೋರ್ಟ್ಗೆ ಬೇಕು ಅಂತ ಮೂರೋ ನಾಲ್ಕೋ ಜನರನ್ನ ಅಡ್ಮಿನಿಸ್ಟ್ರೇಟರ್ ಅಂತ ಜತೆಗೆ ಸೇರಿಸಿ ಕೊಳ್ತಾನೆ. ಇಷ್ಟು ದಿವಸ ಇವನು ಒಬ್ಬನೇ ಟಾರ್ಗೆಟ್ ಆಗ್ತಾ ಇದ್ದ. ನಾಲ್ಕು ಜನ ಅಂದರೆ ಕಲೆಕ್ಟಿವ್ ರೆಸ್ಪಾನ್ಸಿಬಿಲಿಟಿ ಎಲ್ಲರೂ ಸಮಾನ ಜವಾಬ್ದಾರರು. ನಾನು ಒಬ್ಬನೇ ಯಾಕೆ ಬೈಸಿಕೋ ಬೇಕು ನನ್ಮಕ್ಕಳು ಮಿಕ್ಕ ಅವರೂ ಬೈಸಿಕೊಳ್ಳಲಿ ಅಂತ ಅವನ ಅಂತರಾತ್ಮ ಅಪ್ಪಣೆ ಕೊಟ್ಟಿರುತ್ತೆ. ಇದು ಗಂಡಸು ಅಡ್ಮಿನ್ ಆದರೆ. ಅವನ ಜಾಗದಲ್ಲಿ

ಹೆಂಗಸು ಇದ್ದರೆ ಅದೇ ಬೇರೆ ಮಜಾ. ಗೊತ್ತಿದ್ದವರು ಗೊತ್ತಿಲ್ಲದವರು ಎಲ್ಲರಿಗೂ ಮೆಸೇಜ್ ಹೋಗುತ್ತೆ, ನೋಡಿ ರೂಪಾ ಹೀಗೆ ಮಾಡಿದಳು, ಹೀಗೆ ಪೋಸ್ಟ್ ಹಾಕಿದಳು, ಹೀಗೆ ಟಿಸ್ ಮಾಡಿದಳು...ರೂಪಾ ಅನ್ನುವ ಹೆಸರಿನ ಒಬ್ಬರ ಪರಿಚಯವೇ ಇಲ್ಲದೋರು ಕಂಗಾಲಾಗುತ್ತಾರೆ.

ಕೆಲವೇ ದಿವಸದಲ್ಲಿ ಗುಂಪಿನಲ್ಲಿ ಮೂರು ಬಣ ಹುಟ್ಟುತ್ತೆ. ಒಂದು ಬಣ ಪುರುಷೋತ್ತಮನ ತರಹದವರ ಬೆಂಬಲಕ್ಕೆ, ಇನ್ನೊಂದು ಬಣ ಕಿಟ್ಟಿ ತರಹದವರ ಪರ ನಿಂತರೆ ಮೂರನೇ ಬಣ ಗೋಡೆ ಮೇಲೆ ಕೂಡುತ್ತವೆ. ಅವು ಅತ್ತೂ ಇಲ್ಲ ಇತ್ತೂ ಇಲ್ಲ, ಅಂದರಿಕಿ ಮಂಚಿವಾಡಲು ಗುಂಪು.

ಅಡ್ಮಿನಿಸ್ಟ್ರೇಟರ್‌ಗಳಲ್ಲೂ ಒಂದೋ ಎರಡೋ ಮೂರೋ ಗುಂಪು ಆಗಿರುತ್ತೆ. ಒಂದು ಗುಂಪು ಒಬ್ಬನಿಗೆ ಸಪೋರ್ಟ್‌ಗೆ ನಿಂತರೆ ಇನ್ನೊಂದು ಇನ್ನೊಬ್ಬನಿಗೆ ಸಪೋರ್ಟ್. ವಾಟ್ಸಾಪ್ ಜನಕ ಅಂದರಿಕೂ ಮಂಚಿವಾಡು ಆಗಬೇಕಲ್ಲ, ತಟಸ್ಥ ನೀತಿ ಆಯ್ಕೋ ತಾನೆ.

ಗುಂಪಿನ ನಿಜವಾದ ಚಟುವಟಿಕೆ ಈಗ ಶುರು ಆಗುತ್ತೆ. ಯಾವುದೇ ಮೆಸೇಜ್ ಬರಲಿ ಅದರ ಇತಿಹಾಸ ಹುಡುಕುವ intellectual ಬುದ್ಧಿವಂತ ಒಬ್ಬ ಹುಟ್ಟಿ ಕೊಳ್ಳುತ್ತಾನೆ. ಇವನಿಗೆ ಬೆನ್ನು ತಟ್ಟಲು ಕೆಲವರು ನಿಲ್ಲುತ್ತಾರೆ. ಬುದ್ಧಿವಂತ ಇಡೀ ಪ್ರಪಂಚದಲ್ಲಿ ತನಗೆ ತಿಳಿಯದ ವಿಷಯವೇ ಇಲ್ಲ ಅಂತ ಉಬ್ಬುತ್ತಾನೆ, ಉಬ್ಬುತ್ತಾ ಉಬ್ಬುತ್ತಾ ಹೋಗ್ತಾನೆ. ಇಡೀ ದಿನ ವಾಟ್ಸಾಪ್‌ನಲ್ಲಿ ಮಿಂದು ಎದ್ದು ಮಿಂದು ಎದ್ದು ಮಿಂದುತ್ತಾನೆ. ಮಿಕ್ಕವರ ಎದುರು ತನ್ನ ಬುದ್ಧಿವಂತಿಕೆ ಪ್ರದರ್ಶನ ಮಾಡಲು ವಿಕಿಪೀಡಿಯ, ಡಿಕ್ಷನರಿ, ಪ್ರಾಗೆತಿಕ ಇತಿಹಾಸ, ಆಂತ್ರೋ ಪಾಲಜಿ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಮುಖೇಶ್, ಮಹ್ಮದ್ ರಫಿ, ಕಿಶೋರ್ ಕುಮಾರ್, ರಾಜಕುಮಾರ್, ಸುಬ್ಬಲಕ್ಷ್ಮಿ, ರಾಜ್ಯೆಂಗಾರ್.... ಹೀಗೆ ಅದೇನೇನೋ ಓದುತ್ತಾನೆ, ಗುಂಪಿಗೆ ಕಟ್ ಅಂಡ್ ಪೇಸ್ಟ್ ಮಾಡುತ್ತಾನೆ. ಈ ಮೆಸೇಜ್ ಫೇಕು ಅಂತ ಇವನು ಹೇಳಿದರೆ ಮುಗೀತು, ನೂರು ಬ್ರಹ್ಮ ಹೇಳಿದ ಹಾಗೆ. ಇದಕ್ಕೆ ಎದುರು ಮೆಸೇಜ್ ಬಂದರೆ ಇವನು ಫುಲ್ ಹುಚ್ಚಾ, ಸೀ ಬೈ ಫೋರ್ ಆಗಿ ಬಿಡ್ತಾನೆ, ಆಗ ತಾನೇ ಮೆಂಟಲ್ ಹಾಸ್ಪಿಟಲ್‌ಗೆ ಅಡ್ಮಿಟ್ ಆದವನ ಹಾಗೆ ಆಡ್ತಾನೆ. ಅವನ ಇಗೋ ಹರ್ಟ್ ಆಗಿಬಿಡುತ್ತದೆ. ಒಂದು ವಾರ ಪೂರ್ತಿ ಗೂಗಲ್ಲು, ವಿಕಿ ಪಿಡಿಯ, ಎನ್ ಸೈಕ್ಲೋಪೀಡಿಯಾ ಹುಡುಕಿ ಹುಡುಕಿ ಹುಡುಕಿ ತಾನು ಹರಿಶ್ಚಂದ್ರ ಎಂದು ಪ್ರೂವ್ ಮಾಡಲು ಹರ ಸಾಹಸ ಪಡುತ್ತಾನೆ.ಮಿಕ್ಕ ಎಲ್ಲರೂ ಆ ಸಂಗತಿ ಮರೆತಿದ್ದರೂ ಇವನ ತಲೆಯಲ್ಲಿ ಅದು ರಿಸರ್ವ್ ಬ್ಯಾಂಕಿನ ಠಸ್ಸೆಯ ಹಾಗೆ ವರ್ಶಾನು ಗಟ್ಟಲೆ ಮೆದುಳಿನಲ್ಲಿ ಹೂತು ಹೋಗಿರುತ್ತೆ. ಇವನಿಗೆ ದಿವಸಕ್ಕೆ ಇಪ್ಪತ್ತನಾಲ್ಕು ಗಂಟೆ ಸಾಲದು. ಇವನಂತಹ ಬೃಹಸ್ಪತಿಯ ವಂಶಜರು ಎಲ್ಲಾ ಕಡೆ ಅಂದರೆ ಎಲ್ಲಾ ವಾಟ್ಸಾಪ್ ಗುಂಪಿನಲ್ಲಿ ಇರುತ್ತಾರೆ..

ಈ ಮಧ್ಯೆ ಅಡ್ಮಿನಿಸ್ಟೇಟರ್ ಗಳಲ್ಲಿ ಕೆಲವರಿಗೆ ಒಂದು ರೀತಿ ಕೀಳರಿಮೆ ಅಂದರೆ ಇನ್ಫಿರಿಯಾರಿಟಿ ಕಾಂಪ್ಲೆಕ್ಸ್ ಶುರು ಆಗುತ್ತೆ. ಯಾರೋ ಮಿಂಚುತ್ತಾ ಇದ್ದಾರೆ, ತಾನು ಮಿಂಚ ಬೇಕಾದ ಕಡೆ ಅಂತ ಈ ಕಾಂಪ್ಲೆಕ್ಸ್. ಏನು ಮಾಡಬಹುದು ಅಂತ ತಲೆ ಕೆಡಿಸಿಕೊಳ್ಳುತ್ತಾರೆ. ಇವನ ಸಂಕಟ ಹೇಗೆ ಅಂದರೆ ಯಾರ ಹತ್ತಿರವೂ ಹೇಳಿಕೊಳ್ಳಲೂ ಆಗದೆ ಅನುಭವಿಸಲೂ ಸಹ ಆಗದೆ ಒದ್ದಾಡುತ್ತಾನೆ. ಇಡೀ ಪ್ರಪಂಚದಲ್ಲಿ ತಾನು

ಒಂಟಿ ಆದೆ ಅನ್ನುವ ಅನಾಥ ಪ್ರಜ್ಞೆ ಕಾಡಲು ಶುರು ಆಗುತ್ತೆ.

ಈ ಒದ್ದಾಟ ದಲ್ಲಿ ಅವನಿಗೊಂದು ಐಡಿಯಾ ಹೊಳೆಯುತ್ತದೆ.ಇಂಚುತ್ತಾ ಮಿಂಚುತ್ತಾ ಇರೋನ ಪೋಸ್ಟು ಕಿತ್ತು ಹಾಕಿದರೆ ಹೇಗೆ.... ನೆಕ್ಸ್ಟ್ ಏನು ಮಾಡ್ತಾನೆ ಅಂದರೆ ಪ್ರತಿದಿನ ಮಿಂಚುವ ಒಬ್ಬನ ಒಂದು ಪೋಸ್ಟು ಡಿಲಿಟ್ ಮಾಡ್ತಾನೆ.

ಈಗ ವಿಕೋಪ. ಈ ನಂಬರಿನವನು ನಿಮ್ಮ ಪೋಸ್ಟು ಡಿಲಿಟ್ ಮಾಡಿದ ಅಂತ ಮೆಸೇಜು ತೋರಿಸುತ್ತಾ.. ಮೆಸೇಜ್ ಕಿತ್ತು ಹಾಕಿಸಿಕೊಂಡವನಿಗೆ ಮೈ ಕೈ ಹೊಟ್ಟೆ ಕಾಲು, ಕಿಡ್ನಿ, ಲಿವರು.... ಹೀಗೆ ಎಲ್ಲಾ ಅಂಗಗಳೂ ಒಟ್ಟಿಗೆ ಉರಿಯಲು ಶುರು ಆಗುತ್ತೆ.

ಮಿ. ನೈನ್ ನೈನ್ ಫೋರ್ ಜೀರೋ.........(ಇದು ಮೆಸೇಜ್ ಡಿಲಿಟ್ ಮಾಡಿದವನ ನಂಬರ್) ಯಾಕೆ ನನ್ನ ಮೆಸೇಜ್ ಡಿಲಿಟ್ ಮಾಡಿದಿರಿ, ಅದರಿಂದ ಯಾರಿಗೆ ಉರಿ ಆಯ್ತು ಅಂತ ಮೆಸೇಜ್ ಬಿಡ್ತಾನೆ.

ಡಿಲಿಟ್ ಮಾಡಿದವನಿಗೆ ನಖ ಶಿಖಾಂತ ಉರಿ ಹತ್ತುತ್ತೆ...

ನಾನು ಮಾಡೆ ಇಲ್ಲ. ನನ್ನ ಹೆಸರು ತುಂಬಾ ಸುಲಭವಾಗಿ ಸಿಗುತ್ತೆ.ಅದನ್ನು ಹುಡುಕುವ ಬದಲಿಗೆ ನನ್ನ ಹೆಸರಿನ ಬದಲಿಗೆ ನನ್ನ ಫೋನ್ ನಂಬರು ಹಾಕೋದು ಅಸಭ್ಯತೆಯ ಪರಮಾವಧಿ ಲಕ್ಷಣ. ಇಷ್ಟು ವಯಸ್ಸು ಆಗಿರೋ ಈ ಮನುಷ್ಯ ಹೀಗೆ ಮಾಡಬಹುದೇ...?

ಅವನಿಗೆ ಸಪೋರ್ಟ್ ಮಾಡಲು ಒಂದು ಗ್ಯಾಂಗು ಗೆಜ್ಜೆ ಕಟ್ಟಿಕೊಂಡು ರೆಡಿ ಆಗುತ್ತೆ. ನನಗೆ ಅವರ ಹೆಸರು ಗೊತ್ತಿರಲಿಲ್ಲ. ಅದಕ್ಕೇ ನಂಬರು ಹಾಕಿದೆ ಅವರೇ ಡಿಲಿಟ್ ಮಾಡಿದಾರೆ ಅನ್ನೋಕ್ಕೆ ಸಾಕ್ಷಿ ನೋಡಿ ಅಂತ ಒಂದು ಸ್ಕ್ರೀನ್ ಷಾಟ್ ಈತ ಬಿಡ್ತಾನೆ. ಇವನ ಸಪೋರ್ಟ್‌ಗೆ ಇನ್ನೊಂದು ಗ್ಯಾಂಗು ಡಾಬು ಕಟ್ಟಿಕೊಂಡು ರೆಡಿ ಆಗುತ್ತೆ.. ವಾದ ವಿವಾದ, ಅದರ ಸಪೋರ್ಟ್ ಗೆ ವಿಕಿಪೀಡಿಯ, ರಾಮಾಯಣ, ಮಹಾಭಾರತದ ಶ್ಲೋಕಗಳು, ಪುರಂದರ ದಾಸರು,ಕನಕದಾಸರು, ವಿಜಯ ದಾಸರು, ಭಗವದ್ ಗೀತೆ ಯ ಚರಣಗಳು, ಕುವೆಂಪು, ಅಡಿಗ ಅವರ ಪದ್ಯಗಳ ಮೊದಲ ಸಾಲು, ಭೈರಪ್ಪ,ಅನಕೃ, ತರಾಸು ಕಾದಂಬರಿಯ ಪಾತ್ರಗಳೂ..ಹೀಗೆ ಏನೇನೋ ಸೇರಿ ಅವುಗಳ ಮೇಲಿನ ಟೀಕೆ ಟಿಪ್ಪಣಿ ಮಹಾಪೂರ ಹರಿದಾಡುತ್ತದೆ. ಎಲ್ಲರ ಜ್ಞಾನ ಏಕ್ ದಂ ವೃದ್ಧಿ ಆಗಿಬಿಡುತ್ತೆ... ಮಾತೆತ್ತಿದರೆ ಶ್ಲೋಕಗಳು, ಉಪನಿಷದ್ ವಾಕ್ಯಗಳು, ದೇವರ ನಾಮಗಳು,ಅಭಂಗಗಳು, ಸಾಹಿತ್ಯ ಸಾಹಿತಿ ಹೇಳಿಕೆಗಳು ... ಏನು ಕೇಳ್ತಿರಿ ಅವೆಲ್ಲವೂ ಪುಂಖಾನು ಪುಂಖವಾಗಿ ಎಲ್ಲರ ಕಿವಿಗಳಲ್ಲಿ ಮನೆಗಳಲ್ಲಿ ಗುಯ್ ಗುಯ್ ಗುಡಲು ಶುರು ಆಗುತ್ತದೆ...

ಮುಂದಿನ ಕತೆ ಇನ್ನೂ ರೋಚಕ ಅನಿಸುತ್ತೆ.

ಈ ಹಾಳಾದ್ದು ವಾಟ್ಸಾಪ್ ನಿಂದಾಗಿ ಮನಸು ಸ್ನೇಹ ಚಿ ದ್ರ ಚಿ ದ್ರ ಆಗಿ ಸದಸ್ಯರು ಯಾವ ಜನ್ಮದಲ್ಲಿ ಏನು ಮಹಾ ಪಾಪ ಮಾಡಿದ್ದೇವೋ ಅಂತ ಮಾನಸಿಕವಾಗಿ ದೂರ ದೂರ ದೂರ ಬಹು ದೂರ ಆಗಿಬಿಡುತ್ತಾರೆ....! ವಾಟ್ಸಾಪ್ ತನ್ನ ಕಲೆ, ಅಸ್ತಿತ್ವ ಹಾಗೂ ತಾನು ಹುಟ್ಟಿದ ಉದ್ದೇಶ ಮರೆತು ಹೇಳ ಹೆಸರಿಲ್ಲದೆ ಮಾಯವಾಗಿ ಆವಿಯಾಗುತ್ತದೆ... ಅಂತ ನೀವು ಅಂದುಕೊಂಡಿದ್ದರೆ ನಡೆದ ಕತೆಯೇ ವಿಚಿತ್ರವಾದದ್ದು. ಏನಾಯಿತು ಗೊತ್ತೇ..

ವಾಟ್ಸಾಪ್ ನಿಂದಾಗಿ ಮನಸು ಸ್ನೇಹ ಭದ್ರ ಭದ್ರ ಆಗಿ ಸದಸ್ಯರು ಯಾವ ಜನ್ಮದಲ್ಲಿ ಏನು ಪುಣ್ಯ ಮಾಡಿದ್ದೇವೆ ಅಂತ ಮಾನಸಿಕವಾಗಿ ಹತ್ತಿರ ಹತ್ತಿರ ಹತ್ತಿರ ಬಹು ಹತ್ತಿರ ಆಗಿಬಿಡುತ್ತಾರೆ....! ವಾಟ್ಸಾಪ್ ಇನ್ನೂ ಹೆಚ್ಚಿನ ಜೀವನೋತ್ಸಾಹ ತುಂಬಿ ತುಳುಕುವ ಹಾಗೆ ಮುಂದುವರಿಯುತ್ತದೆ, ಪುರಾಣ ಪುಣ್ಯ ಕ್ಷೇತ್ರದ ಕತೆಗಳು ಸೇರಿ ಕೊಳ್ತಾವೆ...... ಹೊಸ ಹುರುಪಿನಿಂದ, ಹೊಸ ಜೀವನೋತ್ಸಾಹ ದಿಂದ ಮುಂದುವರೆ ಯುತ್ತೆ..

ಹೀಗೆ ಈ ಹೊಸಾ ಅಡಿಕ್ಷನ್ ಇಡೀ ಪ್ರಪಂಚವನ್ನು ತನ್ನ ತುದಿ ಬೆರಳಿನಲ್ಲಿ ಆಡಿಸುತ್ತಾ ಇದೆ...

■

## ಶೇಕಡ ನಲವತ್ತರ ಗೀತೆ

**(ಕೊರವಂಜಿಯಲ್ಲಿ ಎ.ಎಸ್ ರಾಮಕೃಷ್ಣ ಬರೆದದ್ದು)**

ಎನಗು ಆಣೆ ಖಾವಂದ್ ನಿಮಗು ಆಣೆ ।
ಎನಗು ನಿಮಗು ಇಬ್ಬರಿಗು ಸಚಿವರಾಣೆ ॥
ನಿಮ್ಮ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ।
ನನ್ನ ನೀವ್ ಕೈಬಿಟ್ಟಿರಾದರೆ ನಿಮಗೆ ಆಣೆ ॥
ಮೇಲಿನವರಿಗೆ ಗುಟ್ಟು ಬಿಟ್ಟರೆ ಎನಗೆ ಆಣೆ ।
ಖಾವಂದ್
ಕಂಟ್ರಾಕ್ಟ್ ನನಗೆ ಸಲಿಸದಿದ್ದರೆ ನಿಮಗೆ ಆಣೆ ॥
ಶಾಖಾಯ ಲವಣಾಯ ಮಾಡದಿದ್ದರೆ ಎನಗೆ ಆಣೆ ।
ಖಾವಂದ್
ಎನ್ನ ಟೆಂಡರ್ ಒಪ್ಪದಿದ್ದರೆ ನಿಮಗೆ ಆಣೆ ॥
ಮಾಮೂಲಲ್ಲಿ ವಂಚಕನಾದರೆ ಎನಗೆ ಆಣೆ ।
ಖಾವಂದ್
ಮಾತು ಕೊಟ್ಟು ಮಸ್ಕಿರಿ ಮಾಡಿದರೆ ನಿಮಗೆ ಆಣೆ ॥
ದೊರೆ ನಿಮ್ಮಾಶ್ರಯ ಮರೆತಿದ್ದಾದರೆ ಎನಗೆ ಆಣೆ ।
ಖಾವಂದ್
ಬಂದಾಗೆಲ್ಲ ಒಲಿಯದಿದ್ದರೆ ನಿಮಗೆ ಆಣೆ ॥

# ಪೋರ್ಟಿಕೊ ಸಂದರ್ಶನ

ಡಾ. ಶ್ಯಾಮಲಾ ರವಿಶಂಕರ್

ಪಾಂಡೆಮಿಕ್ ಟೈಮಿನಲ್ಲಿ ಫೋನು ರಿಂಗಾದಾಗ ನೋಡಿದ್ರೆ ನನ್ನ ಮೈದುನನ ಮಗನಿಂದ ಎಂದು ತಿಳಿಯಿತು. ಏನಾಯ್ತಪ್ಪ ಅಂತ ಸ್ವಲ್ಪ ಗಾಬರಿ ಆಯಿತು. ಅವನು 14ನೇ ಅಂತಸ್ತಿನ ನಿವಾಸಿ. ಈಗಾಗಲೇ ಆ ಟವರಿನಲ್ಲಿ ಸಾಕಷ್ಟು ಕೇಸುಗಳಿದ್ದು ಅಲ್ಲಿನ ನಿವಾಸಿಗಳು ಬೇಸತ್ತಿದ್ದರು. ಈಗೇನಾಗಿರಬಹುದು ಅನ್ನೋ ಆತಂಕ ಸಹಜ ತಾನೇ? ರಿಸೀವ್ ಮಾಡಿದ ಕೂಡಲೇ, 'ಏನಪ್ಪಾ, ಎಲ್ಲಾ ಅರೋಗ್ಯ ತಾನೇ "ಅಂದೆ. ಅವನು, 'ಓಹೋ, ಎಲ್ಲಾರೂ ಗಿಟಕಿನ ಹಂಗಿದ್ದೀವಿ. ಅಷ್ಟು ಗಾಬರಿ ಯಾಕೆ. ಆ ತರಲೆ ವೈರಸ್ಸು ಈಗ ಬಾಲ ಮುದುರಿ ಮೂಲೆ ಸೇರಿದೆಯಲ್ಲಾ !" ಅಂದ

"ನೀನು ತಿರ್ಗಾಡಬೇಕು ಅನ್ನಿಸದಾಗ ಅದ್ನ ಮೂಲೇಲಿ ಕೂರಿಸಿ, ನಿನ್ನ ಸೋಮಾರಿತನ ಹೆಚ್ಚಾದಾಗ ಅದನ್ನ ಮುಂದೆ ತರೋ ನಾಟಕ ತಾನೇ? ಇರಲಿ, ಇದೇನು ಬೆಳ್ಳಂ ಬೆಳಗ್ಗೆ ದೊಡ್ಡಮ್ಮನ ಮೇಲೆ ಇಷ್ಟು ಕಾಳಜಿ?" ಅಂದೆ.

"ಮನೇಲೇ ಇರ್ತಿಯಾ ತಾನೇ"

"ಹಾಗೆ ಹೇಳಿದೆಯಲ್ಲ ಸರ್ಕಾರ, ಆರ್ಡರ್ ಈಸ್ ಆರ್ಡರ್. ನಾನೆಂದೂ ತಪ್ಪಿದವಳಲ್ಲ."

"ಏನಿಲ್ಲ ನಿಮ್ಮ ಮನೆಗೆ ಬರ್ತಿದ್ದೀವಿ, ನನ್ನ ಕುಮಾರ ಕಂಠೀರವನಿಗೆ ನಿನ್ನ ಹತ್ತಿರ ಕೆಲಸ ಇದೆಯಂತೆ. ನೀನು ಸರ್ವಾಲಂಕೃತಳಾಗಿ ರೆಡಿ ಆಗಿರು. ವಿಷಯ ಸರ್ಪ್ರೈಸು"

"ಆ ಚಿಲ್ಟುಗೆ ನನ್ನ ಹತ್ತಿರಾ ಅದಿರಲಿ. ನೀನೋ, ನಿನ್ನ ಮಗನೋ, ಅಥವಾ ನಿನ್ನ ಹೆಂಡತಿಯ ತಾತನ ಮಗನೋ ಯಾರೇ ಬರಲಿ, ನೋ ಎಂಟ್ರಿ ಬಿಯಾಂಡ್ ಹೊಸ್ತಿಲು. ನಿಮ್ಮ ಮಲ್ಟಿ ಸ್ಟೋರೀಡ್ ಸಾಂಕ್ರಾಮಿಕ ವ್ಯವಸ್ಥೆಗಳನ್ನ ತಡಗಟ್ಟೋ ಪ್ರಯತ್ನ. ಪೇಪರ್ ಕಪ್ಪಿನಲ್ಲಿ ಕಾಫಿ ಗಿಟ್ಟತ್ತೆ, ಆಲ್ ವಿಥಿನ್ ಪೋರ್ಟಿಕೊ ಲಿಮಿಟ್ಸ್ ಓನ್ಲಿ! "{ನಾನ್ಯಾಕೆ ಅಲಂಕೃತಳಾಗಿರಬೇಕು, ಹಾಯಾಗಿ ನೈಟಿಲಿದ್ರೆ ನಿನ್ನದೇನು ಅಬ್ಜೆಕ್ಷನ್ನು ಅನ್ನೋಕೆ ಹೋಗಿದ್ದವಳು ಸುಮ್ಮನಾದೆ}.

"ಫೈನ್ ವಿತ್ ಮಿ" ಅಂದ.

ಅರ್ಧ ಗಂಟೆಗೆ ಅವನು ಅವನ ಮಗ ದೇವೇಶ್ ಬಂದಿಳಿದ್ರು. ಅಲ್ಲಿಂದ್ಲೇ ಚಿಲ್ಟು ದೇವೇಶ್ "ಹಿ ಗ್ರಾಂಮಾ" ಅಂದ್ಕೊಂಡು ಓಡಿ ಬಂದ.

ಹಿ, ಪುಟ್ಟ, ಅಲ್ಲೇ ಅಲ್ಲೇ, .. ನೋ ಹಗ್ಗಿನ್ಗ್, ನೋ ಕಿಸ್ಸಿಂಗ್ "ನನ್ನ ಎಚ್ಚರಿಕೆ.

"ಯಪ್, ಡ್ಯಾಡ್ ಹ್ಯಾಸ್ ಟೋಲ್ಡ್ ಮಿ" ಸೀದಾ ವಿಷಯಕ್ಕೆ ಬಂದ .ಇಂಟರ್ನ್ಯಾಷನಲ್ ಸ್ಕೂಲಿನ ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ಈ ಚಿಲ್ಟುಗೆ ಅಸೈನ್ಮೆಂಟ್ ಏನಪ್ಪಾ ಅಂದ್ರೆ ಒಬ್ಬ ಬಯಾಲಜಿಸ್ಟ್ನ ನಾಲ್ಕು ಪ್ರಶ್ನೆ ಕೇಳಿ ಸಂದರ್ಶನದ ರೂಪದಲ್ಲಿ ವಿಡಿಯೋ ಮಾಡಿ ಆನ್ಲೈನ್ ಸಬ್ಮಿಟ್ ಮಾಡಬೇಕು ದೇವೇಶ ರೆಕಾರ್ಡ್ ಮಾಡಿದ್ರೆ ಅವನಪ್ಪ ಫೋಟೋ ಗ್ರಾಫರ್. ಇವನು ಆಮೇಲೆ ಮಿಕ್ಸ್ ಮಾಡ್ಕೊತಾನಂತೆ. ವಿಡಿಯೋ ಮಾಡ್ಕೊಂಡ್ರೆ ಅಂದದ್ದಕ್ಕೆ ನೋ ನೋ ಯು ಡೋಂಟ್ ಅಂಡರ್ ಸ್ಟಾಂಡ್, ಅಂತೂ ಚಿಲ್ಟು. ನಿಜ ಹೇಳೋದಾದ್ರೆ ನನಗೆ ಖಂಡಿತಾ ಅರ್ಥ ಆಗ್ಲಿಲ್ಲ..

ಸಂದರ್ಶನ ಶುರು ಆಯಿತು .

"ಬಯಲಾಜಿ ತೊಗೊಂಡು ಎಂ.ಬಿ.ಬಿ. ಯಸ್, ಯಾಕೆ ಓದಲಿಲ್ಲ" ಅಂತು ಚಿಲ್ಟು.

"ಅದಕ್ಕೆ ತುಂಬ ಹಣ ಖರ್ಚಾಗತ್ತೆಂತ" ಅಂದೇ.

"ಯಾಕೆ, ನೀವು ತುಂಬ ಬಡವರಾಗಿದ್ರಾ"

"{ಅಯ್ಯೋ , ದೇವರೇ,}, ಆ ಕಾಲದಲ್ಲಿ..... "ಅನ್ನೋಕೆ ಹೋದವಳು ಇನ್ನೆಂಥ ಪರಿಸ್ಥಿತೀಲಿ ಇರುಕಿಸ್ತಾನೋ ಅನ್ನೋ ಭಯಕ್ಕೆ ಸುಮ್ಮನಾದೆ.

"ಅಥವಾ ಮಾತ್‌ಲ್ಲಿ ವೀಕಾಗಿದ್ದು ಅವಾಯ್ಡ್ ಮಾಡೋಕೆ ಬಯಾಲಜಿ ತೊಗೊಂಡ್ರ?"

ನನ್ನ ನೆಫ್ಯುನ ಡಿಲೀಟ್ ಮಾಡೋ ಅಂತ ಕೂಗಿದೆ. "ನಮ್ಮ ಕಾಲದಲ್ಲಿ ಭವಿಷ್ಯದ ಕಡೆ ಅಷ್ಟೆಲ್ಲ ಯೋಚನೆ, ಪ್ಲಾನ್ ಮಾಡತಾಯಿರಲಿಲ್ಲ, ಹಾಗೂ ಸಸ್ಯ ಶಾಸ್ತ್ರ ನನಗೆ ಇಷ್ಟ" ಅಂದೆ .

"ಐ ಕಾಂಟ್ ಅಂಡರ್ ಸ್ಟಾಂಡ್ ವೈ, ಹೇಗೂ ಇನ್ನೊಂದೆರಡೇ ಪ್ರಶ್ನೆ ,ನಿಮಗೆ ಮುಂಚಿನಿಂದ ಸಸ್ಯ ಶಾಸ್ತ್ರದ ಮೇಲೆ ಇದ್ದ ಆಸಕ್ತಿಯೇ ನಿಮಗೆ ಅದರಲ್ಲಿ ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹ, ರೈಟ್ ?"

ಎಲಾ ಇವನಾ, ನನ್ನ ಬಾಯಿಂದಲೇ ಅವನಿಗೆ ಬೇಕಾದ ಹಾಗೆ ಹೇಳಿಸ್ಕೊತಾ ಇದ್ದಾನಲ್ಲ! ಶಭಾಷ್ ..!

ಹೂಂ ಎಂದು ತಲೆ ತೂಗಿದೆ.

"ನಿಮ್ಮ ಏರಿಯಾ ಆಫ್ ಸ್ಪೆಷಲೈಸೇಷನ್ನ್?"

" ಪ್ಲಾಂಟ್ ಎಂಬ್ರಿಯೋಲೋಜಿ"

"ಅದರ ಬಗ್ಗೆ ಕೆಲವು ಮಾತು ಹೇಳಿ"

ಈಗ ಕಷ್ಟಕ್ಕಿಟ್ಟು ಕೊಂಡಿತು, ನನಗೆ..

"ಇದು ಗಿಡಗಳ ಗೈನೆಕೊಲೋಜಿ ಅಂದ್ಕೊ." ಅಂದ್ರೆ "ಮಮ್ಮಿ ಡಾಕ್ಟರ್ ಥರ

"ಹೌದು, ಅಂದ್ರೆ ಕೇಸುಗಳು ಮನುಷ್ಯರಲ್ಲ, ಗಿಡಗಳು"

"ನಿಮ್ಮ ಮಟ್ಟ ತಲಪಲು ಎಷ್ಟು ವರ್ಷ ಓದಬೇಕು"

"ಎಂ. ಎಸ್ಸಿ .ಆದಮೇಲೆ 3–4 ವರ್ಷ"

"ಅಷ್ಟು ವರ್ಷ ಕಾಲೇಜಿಗೆ ಹೋದ್ರಾ ಅಥವಾ ಆನ್ ಲೈನ್ ಆ?"

"ಆಗ ಈ ಆನ್ ಲೈನ್–ಆಫ್ ಲೈನ್ ಎನ್ನೋ ಕಾನ್ಸೆಪ್ಟ್ಗಳೇ ಇರಲಿಲ್ಲ, ಲ್ಯಾಬ್ ಗೆ ಹೋಗ್ಲೇ ಬೇಕು"

[ಸ್ವಗತ : ಹುಡುಗರು ಲೈನ್ ಬೇಕಾದ್ರೆ ಹೊಡೀಬಹುದಿತ್ತು]

"ಮಸ್ಟ್ ಹ್ಯಾವ್ ಬೀನ್ ರಿಮೋಟ್ ಪಾಸ್ಟ್, ಪೂರ್ ಗ್ರಾಂಮಾ, ನೀವು ಬಹಳ ಕಷ್ಟ ಪಟ್ಟಿರ ಬೇಕು . ಓಕೆ ಇದರಿಂದ ಏನು ಉಪಯೋಗ ?"

“ನನಗೆ ಡಾಕ್ಟರೇಟ್ ಬಂತು, ಯೂನಿವರ್ಸಿಟಿಲಿ ಲೆಕ್ಚರರ್ ಕೆಲಸಕ್ಕೆ ಕಾಲ್ ಲೆಟರ್ ಬರಬೇಕಾದ್ರೆ ಮಸ್ಟ್ ಹ್ಯಾವ್ ಯೋಗ್ಯತೆ, ಆಯ್ಕೆ ಆದಮೇಲೆ ಮೆಟ್ಟಲು ಹತ್ತಿ ಪ್ರೊಫೆಸರ್ ಅಂತ ಅನ್ನಿಸ್ಕೊಂಡು ಸಂಬಳ, ಈಗ  ಪೆನ್ಷನ್, ಸಾಲದ ಉಪಯೋಗಗಳು?”

“ಸಮಾಜಕ್ಕೆ?”

ಈಗ ಬಂತಪ್ಪ ಕ್ಲಿಷ್ಟ ಸಮಯ ಅಂದ್ಕೊಂಡೆ.ಇವನಿಗೆ ಹೇಗೆ ತಿಳಿಯ ಹೇಳಬೇಕು? ತಲೆ ಚಚ್ಚಿ ಕೊಂಡೆ.

“ಯಾವ ಓದೂ ನಿರುಪಯೋಗವಲ್ಲ, ಮರಿ, ಈಗ ನೋಡಪ್ಪ, ಒಂದು ಗಿಡದಲ್ಲಿ ಎಷ್ಟೋ ಹೂವು ಬರತ್ತೆ, ಅಷ್ಟೆಲ್ಲ ಹಣ್ಣುಗಳು ಬರೋಲ್ಲ, ಅಲ್ವ. ಅದಕ್ಕೆ ಕಾರಣ ಕಂಡು ಕೊಳ್ಳಬಹುದು. ಎಷ್ಟೋ ಬೀಜ ಬಿತ್ತಿದರೂ ಎಲ್ಲ ಮೊಳೆಯೋಲ್ಲ, ಅಲ್ವಾ. ಯಾಕೇಂದ್ರೆ ಕೆಲವು ಬೀಜಗಳಲ್ಲಿ ಎಂಬ್ರ್ಯೋನೇ ಇರೋಲ್ಲ. ಅದು ಯಾಕೆ ಹಾಗೆ ಆಗತ್ತೆ ಅಂತ ತಿಳಿದ್ರೆ ಪರಿಹಾರ ಟ್ರೈ ಮಾಡ ಬಹುದು. ಕಷ್ಟ ಆದ್ರೂ ಸಾಧ್ಯ., ಇನ್ನೂ ನಿನ್ನ ನಾಲ್ಕು ಪ್ರಶ್ನೆಗಳು ಮುಗಿಲಿಲ್ವಾ ?”

ಅವನಿಗೆ ನನ್ನ ಡೆಸ್ಪರೇಷನ್ ಅರ್ಥ ಆಗಿರಬೇಕು.

“ಆಯಿತು ಗ್ರಾಂಮಾ. ನಿಮ್ಮ ಅಮೂಲ್ಯವಾದ ಟೈಮ್ ನನಗೆ ಸ್ಪೇರ್ ಮಾಡಿದ್ದಕ್ಕೆ ಥ್ಯಾಂಕ್ಸ್.”

ಇನ್ನೆಂದೂ ಚಿಕ್ಕ ಮಕ್ಕಳಿಗೆ ಅರ್ಥೈಸುವ ಸಾಹಸ ಮಾಡೋಲ್ಲ ಅಂತ ನಿರ್ಧರಿಸಿ ಬಿಟ್ಟೆ. ಎಂ.ಎಸ್ಸಿಗೆ ಪಾಠ ಮಾಡೋದು ಎಷ್ಟು ಸುಲಭ, ಕಾನ್ಫರೆನ್ಸ್‌ನಲ್ಲಿ ಪೇಪರ್ ಪ್ರೆಸೆಂಟ್ಮಾಡೋದು ಇನ್ನೂ ಸುಲಭ, ಆದರೆ ಚಿಲ್ಟುಗಳಿಗೆ, ಅವರ ಪ್ರಶ್ನೆಗಳಿಗೆ  ಅವ್ರಿಗೆ ತಿಳಿಯೋ ಹಾಗೆ? ಇನ್ನೆಂದಿಗೂ ಬೇಡವೇ ಬೇಡ ಆ ಸಾಹಸ...

■




**ಅಮ್ಮ ಹುಡುಗ ಇಂಜಿನಿಯರ್,ಲೆಕ್ಚರರ್,**
**ಏನಾಗಿದ್ರು ಪರ್ವಾಗಿಲ್ಲಾ..ಆ ಅಂಕಲ್ ತರಾ**
**“ಹೆಲ್ಪಿಂಗ್ ನೇಚರ್” ಆಗಿದ್ರಾಯ್ತು....!!**